# ನೀನಾಸಮ್ ಸಂಸ್ಕೃತಿ ಶಿಬಿರ:

## ಅಕ್ಟೋಬರ್ ೧೯೯೮

ಕಳೆದ ೧೮ ವರ್ಷಗಳಿಂದ ನೀನಾಸಮ್ ಪ್ರತಿ ಅಕ್ಟೋಬರ್‌ನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದ್ದು, **ಅಕ್ಟೋಬರ್ ೩ ರಿಂದ ೧೦ರ ವರೆಗೆ** ನಡೆಯುತ್ತದೆ. ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವೈವಿಧ್ಯ, ಮೀಮಾಂಸೆ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ – ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ. ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂಸಂಸ್ಕೃತಿ-ಸಂವಹನದ ಪ್ರಕ್ರಿಯೆಯ ಬಗ್ಗೆಉಪನ್ಯಾಸ ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ.ಪ್ರತಿಯೊಂದು ವಿಷಯದಬಗ್ಗೆಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ರತನಕ ನಡೆಯುತ್ತದೆ. ಇದಲ್ಲದೆ ಪ್ರತಿದಿನ ಸಂಜೆ ರಂಗ ಪ್ರದರ್ಶನಗಳು (ತಿರುಗಾಟ ೯೮ರ ಪ್ರಥಮ ಪ್ರದರ್ಶನಗಳು), ಸಂಗೀತ, ನೃತ್ಯ ಇತ್ಯಾದಿ ಕಾರ್ಯಕ್ರಮಗಳು – ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಡೆಯುತ್ತವೆ. ಡಾ. ಯು.ಆರ್. ಅನಂತಮೂರ್ತಿಯವರು ಶಿಬಿರದ ನಿರ್ದೇಶಕರಾಗಿರುತ್ತಾರೆ.

---

ಶಿಬಿರಾರ್ಥಿಗಳ ಊಟೋಪಚಾರಗಳಿಗಾಗಿ ನಿಗದಿಪಡಿಸಿದ ಶುಲ್ಕ ರೂ. ೫೦೦=೦೦

ಆಸಕ್ತ ಅಭ್ಯರ್ಥಿಗಳು **ತಾ.೨೦ ಸೆಪ್ಟೆಂಬರ್ ೯೮ರೊಳಗೆ** ಅಭ್ಯರ್ಥಿಪತ್ರ ಕಳಿಸಬೇಕು.

---

**ಸಂಪರ್ಕಿಸಬೇಕಾದ ವಿಳಾಸ:**

ನೀನಾಸಮ್ ಸಂಸ್ಕೃತಿ ಶಿಬಿರ ೯೮, ಹೆಗ್ಗೋಡು, ಸಾಗರ ಕರ್ನಾಟಕ ೫೭೭ ೪೧೭.

# ನೀನಾಸಮ್ ತಿರುಗಾಟ ೯೮

## ಈ ವರ್ಷದ ನಾಟಕಗಳು

**೧. ಅಹಲ್ಯೆ**

ನಿರ್ದೇಶನ: **ಬಿ.ವಿ. ಕಾರಂತ**

ಪುರಾಣದ ಅಹಲ್ಯೆಯ ಕಥೆಯನ್ನು ಮೂಲವಾಗಿ ಇಟ್ಟುಕೊಂಡು ಬಯಕೆ, ನಿಗ್ರಹ, ಒಲವು, ತಪ – ಮೊದಲಾದ ಮೌಲ್ಯಗಳನ್ನು ಒರೆಗೆ ಹಚ್ಚಿ ನೋಡುವ ಪು.ತಿ. ನರಸಿಂಹಾಚಾರ್ ಅವರ ಗೀತ ನಾಟಕ. ಈ ಕೃತಿಯ ಸಮಕಾಲೀನ ಅರ್ಥವಂತಿಕೆಯನ್ನು ಗ್ರಹಿಸಲು ಯತ್ನಿಸುವ ಪ್ರಯೋಗ. ಸಂಗೀತ: ಬಿ.ವಿ. ಕಾರಂತ.

**೨. ಅಂತಿಗೊನೆ**

ನಿರ್ದೇಶನ: **ಎನ್. ಪ್ರೇಮಚಂದ್**

ಸೊಫೊಕ್ಲಿಸ್‌ನ ಪ್ರಸಿದ್ಧ ಗ್ರೀಕ್ ನಾಟಕವನ್ನು ಆಧರಿಸಿ ಫ್ರೆಂಚ್ ನಾಟಕಕಾರ ಜೀನ್ ಆನ್ವಿ ರೂಪಾಂತರಿಸಿರುವ ಕೃತಿ. ಅಂತಿಗೊನೆಯ ಕಥೆಯನ್ನು ಈ ಶತಮಾನದ ರಾಜಕೀಯ ಪ್ರಜ್ಞೆಯಿಂದ ನಿರೂಪಿಸುವಂಥದು. ಅನುವಾದ ಜಿ.ಎನ್. ರಂಗನಾಥರಾವ್. ಮಣಿಪುರದ ಯುವ ನಿರ್ದೇಶಕ ಪ್ರೇಮಚಂದ್ ಅವರಿಂದ ನಿರ್ದೇಶನ.

**೩. ಚಿರೆಬಂದಿ ವಾಡೆ**

ನಿರ್ದೇಶನ: **ಚಿದಂಬರರಾವ್ ಜಂಬೆ**

ಖ್ಯಾತ ಮರಾಠಿ ನಾಟಕಕಾರ ಮಹೇಶ್ ಎಲ್‌ಕುಂಚವಾರ್ ಅವರ ನಾಟಕ. ಬೃಹತ್ ವಾಡೆಯೊಂದರಲ್ಲಿ ಬದುಕುತ್ತಿರುವ ಕುಟುಂಬವೊಂದರ ಜೀವನವನ್ನು ಭಿತ್ತಿಯಾಗಿಟ್ಟುಕೊಂಡು ಅಲ್ಲಾಗುವ ಬದಲಾವಣೆಗಳನ್ನು ಪರೀಕ್ಷಿಸುವ ಕೃತಿ. ಅನುವಾದ: ಮಾರುತಿ ಶಾನಭಾಗ್.

ಈ ನಾಟಕಗಳ ತಯಾರಿ ಈಗ ಆರಂಭವಾಗಿದ್ದು ೧೯೯೮ ಅಕ್ಟೋಬರ್ ೩, ೪, ಮತ್ತು ೫ರಂದು ಇವುಗಳ ಪ್ರಥಮ ಪ್ರದರ್ಶನ ನಡೆಯುತ್ತದೆ. ಆಮೇಲೆ ತಿರುಗಾಟದ ಸಂಚಾರ ಪ್ರದರ್ಶನಗಳು ಆರಂಭವಾಗಿ ೧೯೯೯ ಮಾರ್ಚ್ ಅಂತ್ಯದವರೆಗೂ ಕರ್ನಾಟಕದ ಎಲ್ಲ ಭಾಗಗಳಲ್ಲಿ ತಿರುಗಾಟವು ಸಂಚರಿಸುವ ಯೋಜನೆಯಿದೆ.

---

ನೀನಾಸಮ್ ತಿರುಗಾಟ ಪ್ರದರ್ಶನಗಳನ್ನು ಏರ್ಪಡಿಸಬಯಸುವ ಸಂಘಟಕರು ವಿವರಗಳಿಗೆ ಕೂಡಲೇ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ:

**ನೀನಾಸಮ್ ತಿರುಗಾಟ, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭**

ದೂರವಾಣಿ: ೦೮೧೮೩-೬೫೬೪೬ ಫ್ಯಾಕ್ಸ್: ೦೮೧೮೩-೬೫೬೭೩

# ಬುದ್ಧ ಮುಗುಳು ನಗುತ್ತಿಲ್ಲ

ಮೂಲ: ರುಸ್ತುಂ ಭರೂಚ

ಅನುವಾದ: ಡಾ| ನಿ. ಮುರಾರಿ ಬಲ್ಲಾಳ.

ಅಣುಬಾಂಬು ಸ್ಫೋಟದ ಗೆಲುವನ್ನು ಬುದ್ಧನ ಗೆಲುವು ಎಂಬಂತೆ ನಿರ್ವಚಿಸುವುದು ಭಾಷೆಯ ಅತ್ಯಂತ ವಿಕೃತ ಬಳಕೆ; ಮಾತ್ರವಲ್ಲ, ಬುದ್ಧನ ಬದುಕು ಮತ್ತು ಆತನ ಇಡಿಯ ಅಸ್ತಿತ್ವ ಪ್ರತಿಬಿಂಬಿಸುತ್ತಿದ್ದ ಮೌಲ್ಯಗಳನ್ನೇ ಅಪವಿತ್ರಗೊಳಿಸುವ ಭ್ರಷ್ಟ ಕ್ರಿಯೆ ಕೂಡ. ೧೯೭೪ರಲ್ಲಿ ಭಾರತ ಪೋಕ್ರಾನಿನಲ್ಲಿ ಮಾಡಿದ ಮೊದಲ ಅಣು ಪರೀಕ್ಷೆಯ ಯಶಸ್ಸನ್ನು ಸಾರಲು, ಅಣು ಅಸ್ತ್ರ ಉಪಾಸಕ ರಣಹದ್ದುಗಳು 'ಬುದ್ಧನ ಮುಗುಳು ನಗೆ' ಎಂಬ ಸಂಕೇತ ಭಾಷೆ ಬಳಸಿದರಲ್ಲ; ಆ ಕ್ಷಣವೇ ಬುದ್ಧ ಲೋಕಕ್ಕೆ ಕೊಟ್ಟ ಸಂದೇಶದ ತಿರುಳು ನಾಶವಾಯಿತು. ಹೆಚ್ಚುತ್ತಿರುವ ಕೋಮು ರಾಜಕೀಯ ಸಂಸ್ಕೃತಿಯ ಪ್ರಸ್ತುತ ಸಂದರ್ಭದಲ್ಲಿ, ಪರಿಶುದ್ಧವಾದದ್ದನ್ನೆಲ್ಲ ಭ್ರಷ್ಟಗೊಳಿಸುವ ಇಂಥ ಪ್ರವೃತ್ತಿಗೆ ನಾವು ಕ್ರಮೇಣ ಒಗ್ಗಿಕೊಳ್ಳಲು ಆರಂಭಿಸಿರುವುದು ಅತ್ಯಂತ ದುರಾದೃಷ್ಟದ ವಿಷಯ.

ರಾಮನ ಹೆಸರಲ್ಲಿ ಮಸೀದಿ ಕೆಡವಿದ ಘಟನೆ ಭಾರತದ ವಿಭಜನಾನಂತರದ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಕೋಮು ಹಿಂಸೆಗೆ ಕಾರಣವಾಯಿತು. ಹಿಂದುತ್ವದ ಗುತ್ತಿಗೆ ಹಿಡಿದ ಮತಾಂಧ ಸಮೂಹ ಇಂದು, ''ಮಸೀದಿ ಕೆಡವಿದ ಸ್ಥಳದಲ್ಲಿ ರಾಮ ಮಂದಿರ ಕಟ್ಟಲಾಗುತ್ತದೆ; ಮತ್ತು ಅದು ಹಿಂದೂ ಧರ್ಮದ ಪುನರುತ್ಥಾನದ ಸಂಕೇತದ ರಾಷ್ಟ್ರಮಂದಿರವಾಗುತ್ತದೆ'' ಎಂಬ ಹಠದ ಮಾತನ್ನಾಡುತ್ತಿದೆ. ದೇವರ ಹೆಸರಲ್ಲೇ ಮೊದಲು ನಾಶಮಾಡಿ, ಮತ್ತೆ ಆ ದೇವರನ್ನು ರಾಷ್ಟ್ರದ ಜತೆ ಸಮೀಕರಿಸಿ, ಹೊಸ ವೇಷದ ಆ ದೇವರ ಪುನರವತರಣಕ್ಕೆ ಪ್ರಯತ್ನಿಸುವಷ್ಟು ವಿಶ್ವಾಸಘಾತಕ ಕೆಲಸ ಬೇರೊಂದಿಲ್ಲ.

ಸತ್ಯ-ನ್ಯಾಯ ಸಮ್ಮತವಾದ ಎಲ್ಲಾ ಕಟ್ಟುಕಟ್ಟಳೆಗಳನ್ನು ಮುರಿದು, ಧಾರ್ಮಿಕ ಪಾವಿತ್ರ್ಯದ ಸೋಗಿನ ನೆಲೆಗಟ್ಟಲ್ಲಿ ರಾಷ್ಟ್ರವನ್ನು ಕಟ್ಟಿ ತಮ್ಮ ಕೋಮು ರಾಜಕೀಯ 'ಎಜೆಂಡಾ' ವನ್ನು ಭದ್ರಪಡಿಸಲಿಕ್ಕಾಗಿ ಮಾತ್ರ ಇಂದು ರಾಜಕಾರಣಿಗಳಿಗೆ ದೇವರುಗಳು ಅಗತ್ಯವಾಗಿವೆಯೇ ವಿನಾ ನಿಜವಾದ ಧಾರ್ಮಿಕ ಆಸಕ್ತಿಯಿಂದಲ್ಲ. ಪ್ರಜಾಸತ್ತಾತ್ಮಕ ರಾಜಕೀಯ ನಿರ್ಧಾರಗಳ ಪ್ರಕ್ರಿಯೆಯಲ್ಲಿರುವ ಅಸ್ಥಿರತೆಗಿಂತ, ರಾಷ್ಟ್ರದ ಸ್ಥಿರತೆಯ ಪ್ರಶ್ನೆ



ಇಂದು ಹೆಚ್ಚು ಪ್ರಾಶಸ್ತ್ಯ ಪಡೆದುದರಿಂದ, ಸರ್ವಾಧಿಕಾರದ ಇಂಥ ನಿರಂಕುಶ ತೀರ್ಮಾನಗಳು ಸಂವಾದದ ಮೂಲಕ ಒಮ್ಮತಕ್ಕೆ ಬರಬಹುದಾದ ಸಾಧ್ಯತೆಗಳನ್ನೇ ಅಲ್ಲಗಳೆಯುತ್ತವೆ. ಸ್ವರಾಜ್ಯದ ಹೆಸರಲ್ಲಿ ಇಂಥ ಹರಳುಗಟ್ಟಿದ ಸೈದ್ಧಾಂತಿಕ ಹಾಗೂ ಅವೈಚಾರಿಕ ರಾಷ್ಟ್ರೀಯ ತೀರ್ಮಾನಗಳನ್ನು ಸಮರ್ಥಿಸಲು ಸಾಧ್ಯವಾಗುವುದು ಈ ಕಾಲದ ಒಂದು ಬುದ್ಧಿಗೇಡಿ ಪವಾಡವೇ ಸರಿ.

ಗಾಂಧಿ ಪ್ರತಿಪಾದಿಸುವ ಸ್ವಯಂ-ಆಡಳಿತಾತ್ಮಕ ಸ್ವರಾಜ್ಯದ ಕಲ್ಪನೆಯು, ರಾಜಕೀಯ, ಆರ್ಥಿಕ ಚಿಂತನೆಗಳನ್ನೆಲ್ಲ ಮೀರಿ ನೈತಿಕ ಆಯಾಮವನ್ನು ಒಳಗೊಳ್ಳುವ ಸ್ವಾತಂತ್ರ್ಯದ ನೈಜ ಸ್ಥಿತಿ ಆಗಿದೆ. 'ಸಶಸ್ತ್ರ ಮಿಲಿಟರಿ ಶಕ್ತಿಯಿಂದೆಲ್ಲ ಮುಕ್ತವಾಗಿರುವುದೇ ನಿಜವಾದ 'ನೈತಿಕತೆ'' ಎನ್ನುವ ಗಾಂಧಿ 'ನನ್ನ ಕಲ್ಪನೆಯ ರಾಮರಾಜ್ಯದಲ್ಲಿ ಬ್ರಿಟಿಷರ ಮಿಲಿಟರಿ ಪಡೆಯ ಸ್ಥಾನದಲ್ಲಿ ರಾಷ್ಟ್ರೀಯ ಮಿಲಿಟರಿ ಪಡೆಯ ಸ್ಥಾಪನೆಗೂ ಅವಕಾಶವಿಲ್ಲ. ಕಾರಣ, ತನ್ನದೇ ಮಿಲಿಟರಿ ಹೊಂದಿರುವ ರಾಷ್ಟ್ರವೂ ಕೂಡ ನೈತಿಕವಾಗಿ ಸ್ವತಂತ್ರವಾಗಿರಲು ಸಾಧ್ಯವಿಲ್ಲ' ಎಂದು ಹೇಳುತ್ತಾರೆ.

ಭಾರತದಲ್ಲಿ ಇಂದು ನೈತಿಕವಾಗಿ ನಾವು ಸ್ವತಂತ್ರರಾಗಿದ್ದೇವೆಯೇ? ಪೋಕ್ರಾನಿನಲ್ಲಿ ಅಣುಬಾಂಬು ಸಿಡಿಸುವ ಮೂಲಕ ನಾವು ಇಂದು ರಕ್ಷಣಾ ಪಡೆಯ ಶಕ್ತಿಯನ್ನು ಮತ್ತಷ್ಟು ವಿಸ್ತರಿಸುವ ಹಿಂಸೆಯ ಇನ್ನೊಂದು ಮಜಲಿಗೆ ಕಾಲಿಟ್ಟಿದ್ದೇವೆ. 'ಭಾರತದ ಅಣು ಸ್ಫೋಟವು ಅಹಿಂಸೆಯ ಹೊಸಯುಗದ ಆರಂಭಕ್ಕೆ ನಾಂದಿ ಹಾಡಿದೆ' ಎಂಬ ಯುದ್ಧ ತಂತ್ರ ವಿಶಾರದರ ಕುಟಿಲ ಮಾತಿನ ಬಗ್ಗೆ ಗಾಂಧಿಗೆ ಖಂಡಿತಾ ಸಹನೆ ಇಲ್ಲ. 'ಜಗತ್ತು ಇಂದು ಎದುರಿಸುತ್ತಿರುವ ಬಿಕ್ಕಟ್ಟಿಗೆ ಅಹಿಂಸೆಯೇ ಸರಿಯಾದ ಉತ್ತರ' ಎಂಬ ಅಭಿಪ್ರಾಯವನ್ನು ಜನರಲ್ ಕಾರಿಯಪ್ಪ ತಳ್ಳಿಹಾಕಿದಾಗ, ಗಾಂಧಿ, ಶಾಂತಿಯ ಬಗ್ಗೆ ತನಗಿರುವ ಬದ್ಧತೆಯನ್ನು ಮರುದೃಢೀಕರಿಸುವ ಮೂಲಕ ಕಾರಿಯಪ್ಪನವರಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾ, ''ಇಂದಿನ ಅಣುಬಾಂಬು ಯುಗದಲ್ಲಿ ಪರಿಶುದ್ಧವಾದ ಅಹಿಂಸೆಯ ಶಕ್ತಿಮಾತ್ರ, ಹಿಂಸೆಯ ಎಲ್ಲ ಕುಟಿಲ ಸ್ವರೂಪಗಳನ್ನು ವಿಫಲಗೊಳಿಸುವ ಶಕ್ತಿ ಪಡೆದಿದೆ'' ಎಂದು ನುಡಿದಿದ್ದರು. ಹಿರೋಷಿಮಾ ನರಮೇಧವು ಗಾಂಧಿಯನ್ನು ಸ್ತಂಭೀಭೂತಗೊಳಿಸುವುದರ ಜೊತೆಗೆ 'ಅಹಿಂಸೆಯ ಸತ್‌ಪರಿಣಾಮವನ್ನು ಸರಿಯಾಗಿ ಪರಿಭಾವಿಸದೆ, ಹೇಗೆ ಇಡಿಯ ಮಾನವ ಜನಾಂಗವೇ ಸಾಮೂಹಿಕ ಆತ್ಮಹತ್ಯೆಗೆ ಸಜ್ಜಾಗುತ್ತಿದೆ' ಎಂಬ ಆತಂಕವನ್ನು ಅವರಲ್ಲಿ ಮೂಡಿಸಿತ್ತು.

ಇಂದಿನ ಆಧುನಿಕ ಜಗತ್ತಿನ ಸಂಕೀರ್ಣ ವಾಸ್ತವತೆಯ ಕಣ್ಣಲ್ಲಿ ಗಾಂಧಿ ತೀರ ಹಿಂದಿನವರು. ಆಚರಿಸಲು ಅಸಾಧ್ಯವೆನ್ನಲಾದ ಅವರ ಆದರ್ಶಗಳ ಜತೆಗೆ ಅನೇಕ ಸಂದರ್ಭಗಳಲ್ಲಿ ಅವರು ಬದುಕಿರುವಾಗಲೇ ಅವರನ್ನು ತಿರಸ್ಕರಿಸಲಾಗಿತ್ತು.

ಆರ್.ಎಸ್.ಎಸ್. ಸಿದ್ಧಾಂತದಲ್ಲಿ ನಂಬಿಕೆಯಿಟ್ಟ ಒಬ್ಬ ಮತಾಂಧ ಹಿಂದೂ ಗಾಂಧಿಯನ್ನು ಕೊಲೆಮಾಡುವ ಮೊದಲೇ ಅವರಿಗೆ ದ್ರೋಹ ಬಗೆಯುವ ಮೂಲಕ, ಅವರನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಮೂಲಕ ಅನೇಕ ಬಾರಿ ಅವರ ಕೊಲೆಯಾಗಿತ್ತು.

ಆದರೆ ಗಾಂಧಿ, ತನ್ನ ಶಾಂತಿಯ ಅನ್ವೇಷಣೆಯಲ್ಲಿ ಕಂಡುಕೊಂಡ ಆದರ್ಶದ ಸ್ವರಾಜ್ಯ ಪರಿಕಲ್ಪನೆಯು ತಾನು ಬದುಕಿರುವಾಗಲೇ ಮಸುಕಾಗುತ್ತಿರುವುದನ್ನು ಕಂಡು ಧೈರ್ಯಗುಂದಲಿಲ್ಲ. ಆತ್ಮಶೋಧನೆಯ ತನ್ನ ಪ್ರಯೋಗದಲ್ಲಿ, ಮಹಾತ್ಮರ ಅತ್ಯಂತ ವಿನಯಶೀಲ ಈ ಅರಿವು, ಇಂದಿನ ರಾಜಕಾರಣಿಗಳ ರಾಷ್ಟ್ರೀಯ ಸ್ವಾವಲಂಬನೆಯ ಪೊಳ್ಳು ಬಡಾಯಿಗಳಿಗೆಲ್ಲ ಉತ್ತರವಾಗಿದೆ. ತನ್ನ 'ಹಿಂದೂ ಸ್ವರಾಜ್' ಗ್ರಂಥದಲ್ಲಿ ಉಲ್ಲೇಖಿಸಿದಂತೆ 'ಪಶುಬಲದ' ವಿರುದ್ಧ 'ಆತ್ಮ ಬಲ'ದ ಸ್ಥಾಪನೆಗೆ ಅತ್ಯಂತ ಪರಿಣಾಮಕಾರಿಯಾಗಿ ಚಳವಳಿಮಾಡಿದ ಸಂದರ್ಭದಲ್ಲೂ, ''ಸ್ವರಾಜ್ಯಕ್ಕೆ ಭಾರತವು ಇನ್ನೂ ಪಕ್ವವಾಗಿಲ್ಲ'' ಎಂಬ ಸತ್ಯ ಗಾಂಧಿಗೆ ತಿಳಿದಿತ್ತು.

''ಭಾರತವು ತನ್ನ ಪ್ರೇಮ ಸಿದ್ಧಾಂತವನ್ನು ಕ್ರಿಯಾತ್ಮಕವಾಗಿ ಮೈಗೂಡಿಸಿಕೊಂಡು, ಅದು ರಾಜಕೀಯಕ್ಕೂ ಪ್ರಭಾವ ಬೀರುವಂತಾದರೆ, ನಿಶ್ಚಯವಾಗಿ ಭಾರತಕ್ಕೆ ಸ್ವರಾಜ್ಯ ಸ್ವರ್ಗದಿಂದ ಇಳಿದು ಬರುತ್ತದೆ'' — ಎಂಬಂಥ ಉತ್ಸಾಹದ ಆದರ್ಶಗಳನ್ನು ಹೊತ್ತ ಗಾಂಧಿ, ಜತೆ ಜತೆಯೇ, 'ಆದರೆ ಅಂಥ ಘಟನೆ ಸಂಭವಿಸುವ ಸಾಧ್ಯತೆ ಇನ್ನೂ ಬಹಳ ದೂರವಿದೆಯೆಂಬ ನೋವಿನ ಸಂಗತಿಯೂ ನನಗೆ ತಿಳಿದಿದೆ' ಎಂಬ ವಾಸ್ತವದ ಬಗ್ಗೂ ಎಚ್ಚರವಿದ್ದರು.

ಪೋಕ್ರಾನಿನ ಅಣುಸ್ಫೋಟ ಗಾಂಧಿಜಿಯ ಆದರ್ಶದ ಸಾಕ್ಷಾತ್ಕಾರದ ಸಾಧ್ಯತೆಯನ್ನು ಇನ್ನಷ್ಟು ಮುಂದೂಡಿದೆ. ರಾಷ್ಟ್ರದ ಭದ್ರತೆಯ ನೆವದಲ್ಲಿ ಅಣುಬಾಂಬು ತಯಾರಿಯನ್ನು ಸಮ್ಮತಿಸಿದ ಭಾರತದ ಪ್ರಸ್ತುತ ಪ್ರಭುತ್ವವು ಮಾನವ ಜನಾಂಗದ ಜತೆ ತಳಕು ಹಾಕಿಕೊಂಡಿರುವ ಕ್ರೌರ್ಯ ಮತ್ತು ವಿನಾಶಗಳನ್ನು ಸಮ್ಮತಿಸಿಬಿಟ್ಟಿದೆ. ಬಲಪಕ್ಷಗಳ ನಮ್ಮ ರಾಜಕಾರಣಿಗಳು ಹೆಚ್ಚೆಚ್ಚು ಯುದ್ಧಾಸಕ್ತಿಯಿಂದ ಅಣುಬಾಂಬು ಕ್ಲಬ್ ಸೇರಲು ತವಕಿಸುತ್ತಿದ್ದಾರೆ. ಇದೊಂದು ಅತ್ಯಂತ ವಿಷಾದನೀಯವಾದ ವಿಕಟವಿನೋದದ ಸಂಗತಿ. ಆದರೆ ಅಣ್ವಸ್ತ್ರಹೊಂದಿದ ಬಲಿಷ್ಟ ಪಡ್ಡೆ ಹುಡುಗರು ತಮ್ಮ ಕೃಪೆಗೆ ಪಾತ್ರರಲ್ಲದ ತೃತೀಯ ಜಗತ್ತಿನ ಒಂದು ರಾಷ್ಟ್ರವನ್ನು ತಮ್ಮ ಜತೆ ಸೇರಿಸಿಕೊಳ್ಳುವ ಸಂಭವ ತೀರ ಕಡಿಮೆ. ಇಂಥ ಪರಿಸ್ಥಿತಿಯಲ್ಲಿ ನ್ಯೂಕ್ಲಿಯರ್ ಮಾಫಿಯಾಗಳ ಏಕಸ್ವಾಮ್ಯವಿರುವ ಈ ಕ್ಲಬ್ಬಿನ ನಿರ್ಬಂಧಿತ ಸದಸ್ಯತನದ ದುಷ್ಟ ನೈತಿಕತೆಯ ಬಗ್ಗೆ ಗೋಳಾಡುವ ಬದಲು, 'ನಾವು ಈ ದುಷ್ಟಕೂಟಕ್ಕೆ ಸೇರುವ ಅಗತ್ಯವಿದೆಯೇ' ಎಂಬ



ಬಗ್ಗೆ ಮರುಚಿಂತನೆ ನಡೆಸುವುದು ಒಳ್ಳೆಯದಲ್ಲವೇ? ಅವರನ್ನು ಮೀರಿಸಲು ಸಾಧ್ಯವಿಲ್ಲವೆಂದು, ಅವರ ಜತೆ ಶಾಮೀಲಾಗುವ ಅಗತ್ಯವಿದೆಯೇ? ಇದರ ಬದಲು, ಈ ಭೂಮಿಯನ್ನು ಹಲವುಬಾರಿ ಧ್ವಂಸಮಾಡಲು ಸಾಮರ್ಥ್ಯವುಳ್ಳಷ್ಟು ಅಗಾಧ ಶಸ್ತ್ರಾಸ್ತ್ರ ಪೇರಿಸಿಟ್ಟುಕೊಂಡೂ ತಾವು ಸ್ವತಃ ಶಸ್ತ್ರಾಸ್ತ್ರ ಕಡಿತಗೊಳಿಸಲು ಒಪ್ಪದೆ, ಇತರರಿಗೆ ಬಾಯಿಯಲ್ಲಿ ಪೊಳ್ಳು ಶಾಂತಿಮಂತ್ರ ಬೋಧಿಸುವ ಈ ರಾಷ್ಟ್ರಗಳ ಆಷಾಢ ಭೂತಿತನವನ್ನು ಬಯಲಿಗೆಳೆಯುವ ತಂತ್ರದ ಬಗ್ಗೆ ಯೋಚಿಸುವುದು ಸೂಕ್ತವಲ್ಲವೇ? ವೈಚಾರಿಕತೆಯ ಸಂಪೂರ್ಣ ದಿವಾಳಿತನವನ್ನು ಪ್ರದರ್ಶಿಸುವ ಬದಲು ಬದಲಿ ಮಾರ್ಗವನ್ನು ಅನ್ವೇಷಿಸಲು ಸಾಧ್ಯವಿಲ್ಲವೇ?

ಆ ಮಾರ್ಗ ಯಾವುದು? ನಾನು ಮಧ್ಯಮಮಾರ್ಗದ ಕಡೆಗೆ ಆಕರ್ಷಿತವಾಗಿದ್ದೇನೆ. ಇದರರ್ಥ, ನಾನು ಬುದ್ಧನ ತತ್ವ ಅನುಸರಿಸುತ್ತಿದ್ದೇನೆಂದಲ್ಲ.. ಹಾಗೆ ನೋಡಿದರೆ, ನಾನು ಯಾವುದೇ ನಿರ್ದಿಷ್ಟ ಧಾರ್ಮಿಕ ಶಿಸ್ತು ಅಥವಾ ಪಂಥದ ಅನುಯಾಯಿ ಅಲ್ಲ. ಆಧ್ಯಾತ್ಮಿಕ ಪರಂಪರೆಯ ತತ್ವಗಳನ್ನು ಭೌತಿಕ ಮತ್ತು ಸೆಕ್ಯೂಲರ್ ಸಂದರ್ಭಗಳಿಗೆ ಹಾಗಾಗೇ ಅಳವಡಿಸಿಕೊಳ್ಳಲು ಸಾಧ್ಯ ಎಂಬ ಬಗ್ಗೆಯೇ ನನಗೆ ಸಂಶಯವಿದೆ. ಈ ಬಗ್ಗೆ ಮನುಷ್ಯನಿಗೆ ಸಾಧ್ಯವಿರುವ ಸಂಧಾನಗಳ ದೌರ್ಬಲ್ಯ ಮತ್ತು ಅಪರಿಪೂರ್ಣತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಮಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡೂ, ಮಧ್ಯಮ ಮಾರ್ಗವು ಕೇವಲ ರಾಜಿಯ ಕುಟಿಲತೆಯ, ಕುತಂತ್ರಗಳ ಮಾರ್ಗವಲ್ಲ ಎಂಬುದನ್ನು ಹೇಳಬಯಸುತ್ತೇನೆ. ಅದು ನಿಜಕ್ಕೂ ನಮಗೆ ಆಕರ್ಷಕವಾಗಿ ತೋರುವ ಜೀವ ವಿರೋಧೀ ಪರಿಹಾರಗಳ ಭಲ್ಲೆಯನ್ನು ಬೇಧಿಸಲು ಸಮರ್ಥವಾದ ದಾರಿಯಾಗಿದೆ. ತತ್‌ಕ್ಷಣದಲ್ಲಿ ಯಶಸ್ಸಿನ ಭ್ರಮೆ ಹುಟ್ಟಿಸುವ, ಆದರೆ ಧೀರ್ಘಾವಧಿಯಲ್ಲಿ ದುಷ್ಪರಿಣಾಮ ಬೀರುವ ಅಣುಬಾಂಬು ಸ್ಫೋಟದ ಪೊಳ್ಳುತನವನ್ನು ಈ ಮಾರ್ಗ ಸಾರಾಸಗಟಾಗಿ ತಿರಸ್ಕರಿಸುತ್ತದೆ. ಕಂಪ್ಯೂಟರ್ ದಕ್ಷತೆಯ ಇಂಥ ಘಟನೆಗಳನ್ನು ಧಿಕ್ಕರಿಸುತ್ತಲೇ ಮಧ್ಯಮ ಮಾರ್ಗ, ನಮ್ಮೊಡನೆ ಸಮಾನ ಸಂಕಟ ಹಂಚಿಕೊಳ್ಳುವ ನಮ್ಮ ಶತ್ರುಗಳ ಜತೆ ಆತ್ಮೀಯ ಸಂವಾದ ಆರಂಭಿಸಲು ಇರುವ ತೊಡಕು ಮತ್ತು ನೋವುಗಳ ಬಗ್ಗೂ ತಿಳಿದಿರುತ್ತದೆ.

ಭಾರತದ ಇಂದಿನ ರಾಜಕೀಯ ವಾಸ್ತವತೆಯ ಪರ ವಾದಿಸುವ ಮಂದಿಗೆ ಈ ಮಧ್ಯಮ ಮಾರ್ಗವು ಹಿಡಿಸುವುದಿಲ್ಲ. ಆದರೆ ಇವರು ಉಲ್ಲೇಖಿಸುವ ಈ 'ವಾಸ್ತವತೆ'ಎಂಬುದು ಎಷ್ಟು ಸತ್ಯ ಎಂಬುದನ್ನು ಪ್ರಶ್ನಿಸಬೇಕಾಗಿದೆ. ಸರಕಾರವು, ತನ್ನ ಯೋಜಿತ 'ಎಜೆಂಡಾ' ವಾದ ಸ್ಫೋಟದ ಕ್ಷಣಗಣನೆಯ ಮೊದಲು - 'ಗಡಿಯಲ್ಲಿ ಬಿಗು ವಾತಾವರಣ', 'ಶತ್ರುಗಳ ಗುಟ್ಟನ್ನು ಬಹಿರಂಗಪಡಿಸುವಿಕೆ', 'ಅರುಣಾಚಲದ ಒಂದು

ಮೂಲೆಯಲ್ಲಿ ಶತ್ರುವಿನಿಂದ ಹೆಲಿಪ್ಯಾಡ್ ನಿರ್ಮಾಣ' - ಮುಂತಾದ ಹಲವಾರು ಘಟನೆಗಳ ಬಗ್ಗೆ ಪ್ರಜೆಗಳ ಗಮನ ಸೆಳೆಯಿತಲ್ಲ, ಅವೆಲ್ಲವೂ ಉತ್ಪ್ರೇಕ್ಷಿತ ಕಟ್ಟುಕತೆಗಳಿಂದ ಮುಕ್ತವಾದ ಸತ್ಯ ಸಂಗತಿಗಳೇನೂ ಅಲ್ಲ. ನಿಜಕ್ಕೂ ಅವು 'ಬಾಲಿವುಡ್' ನ ರಾಷ್ಟ್ರೀಯ ಉಗ್ರವಾದಿಗಳ ಸಹಕಾರದಿಂದ ಶತ್ರುವಿನ ಹೊಸ ಉತ್ಪ್ರೇಕ್ಷಿತ ಪ್ರತೀಕವನ್ನು ಸೃಷ್ಟಿಸುವ ನಮ್ಮ ರಾಜಕಾರಿಣಿಗಳ ಹುನ್ನಾರವಾಗಿದೆ. ಕಲೆಯು ಇಂದು ವಾಸ್ತವತೆಯನ್ನು ಅಣಕಿಸುತ್ತಿ ದೆಯೋ, ಅಥವಾ ವಾಸ್ತವತೆಯೇ ಕಲೆಯನ್ನೋ ಎಂಬುದೇ ತಿಳಿಯದಷ್ಟು, ಕಲೆ ಮತ್ತು ವಾಸ್ತವ ಜಗತ್ತಿನ ನಡುವಿನ ರೇಖೆ ಮಸುಕಾಗಿದೆ.

ಅಪಾಯದ ಅಮೂರ್ತ ಗಂಭೀರತೆಯನ್ನು ಮೂರ್ತ ಅಣುಬಾಂಬಾಗಿ ಪರಿವರ್ತಿಸಲು 'ಶತ್ರು'ವಿನ ಶಕ್ತಿಯನ್ನು ಇರುವುದಕ್ಕಿಂತ ದೊಡ್ಡದಾಗಿ ಕಲ್ಪಿಸುವ ಅಗತ್ಯವಿದೆ. ಅದಕ್ಕಾಗಿಯೇ, 'ರಾಷ್ಟ್ರದ ಭದ್ರತೆಗಿರುವ ಅಪಾಯವು ಅಣುಬಾಂಬಿನ ಚಟುವಟಿಕೆಯನ್ನು ಅನಿವಾರ್ಯಗೊಳಿಸಿದೆ' ಎಂದು ಸತತವಾಗಿ ಹೇಳುತ್ತಾ ತನ್ನ ಈ ಅತ್ಯಂತ ಆಪತ್ಕಾರೀ ಕೃತ್ಯವನ್ನು ಸರಕಾರ ಸಮರ್ಥಿಸುತ್ತಿದೆ. ಶತ್ರುವಿನ ಜತೆ ಸಂಧಾನದ ಎಲ್ಲಾ ಸಾಧ್ಯತೆಗಳೂ ಇದರಿಂದಾಗಿ ಭಗ್ನಗೊಂಡಿದೆ. ಅಧಿಕೃತವಾಗಿ ಭಾರತವನ್ನು ಅಣುರಾಷ್ಟ್ರವೆಂದುಮಾನ್ಯತೆ ಮಾಡಲಿ ಅಥವಾ ಮಾಡದಿರಲಿ ಭಾರತದ ಪ್ರಜೆಗಳಾದ ನಾವು ಅಣುರಾಷ್ಟ್ರದಲ್ಲಿ ಹೆಚ್ಚು ಭದ್ರವಾಗಿರಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಪ್ರಾಮಾಣಿಕವಾಗಿ ನಮಗೆ ನಾವು ಕೇಳಿಕೊಳ್ಳಬೇಕಾಗಿದೆ. ರಾಷ್ಟ್ರೀಯ ಭದ್ರತೆಯೆಂಬುದು ಪ್ರಜೆಗಳಿಗೆ ನೇರವಾಗಿ ತಟ್ಟುವ ಇತರ ಮೂಲಭೂತ ಸಂಗತಿಗಳಿಗಿಂತ ಮುಖ್ಯವೇ? ಪ್ರಜೆಗಳ ರಕ್ಷಣೆಯ ಬಗ್ಗೆ ಒಂದು ಮಹತ್ವದ ತೀರ್ಮಾನ ತೆಗೆದುಕೊಳ್ಳುವಾಗ ಅನಿವಾರ್ಯವಾಗಿ ಒಳಗೊಳ್ಳಬೇಕಾದ ನೈತಿಕ ಪ್ರಕ್ರಿಯೆಯನ್ನು ಸಂಪೂರ್ಣ ಕೈಬಿಡುವಷ್ಟು ಅಣು ಸ್ಫೋಟದ ನಿರ್ಧಾರವು ಗಹನವಾದದ್ದೇ? ಕಲ್ಪಿತ ಬಿಕ್ಕಟ್ಟಿನ ಸೃಷ್ಟಿಯಲ್ಲಿ ಗೋಪ್ಯವೆಂಬುದು ರಾಜ್ಯದ ಪ್ರಮುಖ ಅಸ್ತ್ರವಾಗಿಬಿಟ್ಟಿದೆ. ಸ್ಫೋಟದ ನಿರ್ಧಾರವಂತೂ ಕೆಲವೇ ಮಂದಿ ರಾಜಕಾರಣಿಗಳ ಕೂಟದ ಉಪಾಯದ ಹುನ್ನಾರವಾಗಿತ್ತು. ಈ ಹುನ್ನಾರದಲ್ಲಿ, ಆಳುವ ಕೂಟದ ಸಹಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಆದರೆ ಈ ರಾಷ್ಟ್ರವನ್ನು ತಾವೇ ಪ್ರತಿನಿಧಿಸುವರೆಂಬ ಭ್ರಮೆಹೊತ್ತ, ಆರ್.ಎಸ್.ಎಸ್. ಮತ್ತು ಅದರ ನಿಷ್ಠಾವಂತ ಸಹಸಂಸ್ಥೆಗಳು ಈ ನಿರ್ಧಾರದಲ್ಲಿ ಪಾಲುಗೊಂಡಿವೆ. ಸ್ವತಂತ್ರ ಭಾರತವು ತನ್ನ ಆಡಳಿತದಲ್ಲಿ ನ್ಯಾಯಸಮ್ಮತ ಪ್ರಜಾಸತ್ತಾತ್ಮಕ ಮಾರ್ಗದಿಂದ ಈವರೆಗೆ ಇಷ್ಟುದೂರ ಹರಿದ ನಿದರ್ಶನ ಇನ್ನೊಂದಿಲ್ಲ. ಆದರೆ ನೆನಪಿಡಿ - 'ಇವೆಲ್ಲವೂ ಅತ್ಯಂತ ಗುಟ್ಟಿನ ವಿಚಾರ ; ಈ ವಿಷಯಗಳನ್ನು ಬಚ್ಚಿಟ್ಟಿದ್ದರೆ, ಅದು ದೇಶದ ಹಿತದೃಷ್ಟಿಯಿಂದ'. ಪ್ರಜೆಗಳ ಬಾಯಿಮುಚ್ಚಿಸಿ ಪಡಕೊಂಡ



ಈ ಸಮ್ಮತಿಯಿಂದಾಗಿ, ಜವಾಬ್ದಾರಿಯಿರುವ ಚಿಂತನಶೀಲ ಪ್ರಜೆಗಳಿಗೂ, ಇಂಥ ಗಂಭೀರ ವಿಚಾರದಲ್ಲಿ ಪಾರದರ್ಶಿಕತೆಯ ಕೊರತೆ, ಜವಾಬ್ದಾರಿಯ ಕೊರತೆಗಳ ಬಗ್ಗೆ ಸಾರ್ವಜನಿಕ ಚರ್ಚೆಯೇ ಇಲ್ಲದಿದ್ದುದರಿಂದ, ಪ್ರಜಾಸತ್ತಾತ್ಮಕ ಪ್ರತಿಭಟನೆ ಅಥವಾ ಪರ್ಯಾಯ ಕ್ರಿಯಾ ವಿಧಾನವನ್ನು ಬಿಂಬಿಸುವ ಸಾಧ್ಯತೆಗಳು ಇದ್ದಾಗಲೂ ಕೂಡ - ಈ ಕೃತ್ಯವನ್ನು ಒಪ್ಪಿಕೊಳ್ಳದೆ ಅನ್ಯಮಾರ್ಗವಿರಲಿಲ್ಲ. ಕಾರಣ, ಅಣುಬಾಂಬು ಸ್ಫೋಟಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಲು ಬೇಕಾಗುವ ಕನಿಷ್ಟ ಸಮಯಾವಕಾಶದ ಮೊದಲೇ, ದೇಶದ ಭದ್ರತೆಗಾಗಿ 'ಅಣುಬಾಂಬು ಸ್ಫೋಟ' ಎಂಬ ಬೀಜ ಮಂತ್ರವನ್ನು ಎಲ್ಲೆಲ್ಲೂ ಹರಡಿಸಿ, ಸ್ಫೋಟವನ್ನು ಧರ್ಮಸಮ್ಮತವಾಗಿ ನಮ್ಮೆಲ್ಲರ ಪರವಾಗಿ ಪವಿತ್ರೀಕರಿಸಿಯಾಗಿತ್ತು.

ಹಾಗಾಗಿ ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ನಾವು ಅಣುಶಕ್ತಿಯ ಅನಿವಾರ್ಯತೆಯನ್ನು ಪ್ರತಿಪಾದಿಸುವ ನಿರ್ದಿಷ್ಟ 'ರಾಷ್ಟ್ರೀಯವಾದ'ದಿಂದ, 'ನೈಜ ರಾಷ್ಟ್ರೀಯತೆ'ಯನ್ನು ಬೇರ್ಪಡಿಸುವುದು, ಅನಿವಾರ್ಯವಾಗಿದೆ. ಮನುಷ್ಯನ ಸಂವೇದನೆಗಳನ್ನೇ ಮೊಟಕುಗೊಳಿಸುವ ರಾಷ್ಟ್ರೀಯವಾದದ ಗುಣದ ವಿರುದ್ಧ ರವೀಂದ್ರನಾಥ ಠಾಕೂರರಂತೆ ಕಟುವಾಗಿ ಒಡಲಾಳದಿಂದ ಪ್ರತಿಕ್ರಿಯಿಸಿದ ಇನ್ನೊಬ್ಬ ಭಾರತ ಚಿಂತಕನಿಲ್ಲ. 'ರಾಷ್ಟ್ರೀಯವಾದ'ಕ್ಕಿರುವ ಆತ್ಮನಿಷೇಧದ ಎಲ್ಲ ತಂತ್ರಗಳ ಆಳವಾದ ಪರಿಜ್ಞಾನ ವಿದ್ದುದರಿಂದಲೇ, ಠಾಗೋರರಿಗೆ ಆ ಬಗ್ಗೆ ಪ್ರಬಲವಾದ ತಾತ್ಸಾರವಿತ್ತು. ಕೊನೆಯಿರದ ರಾಜಕೀಯ ಗೂಳಿಕಾಳಗದಲ್ಲಿ, ಯಂತ್ರದ ವಿರುದ್ಧ ಯಂತ್ರ, ರಾಷ್ಟ್ರದ ವಿರುದ್ಧ ರಾಷ್ಟ್ರವನ್ನು ಎತ್ತಿಕಟ್ಟುವುದು ಅನಿವಾರ್ಯವೇ? ಎಂಬ ಪ್ರಶ್ನೆಯ ಸುತ್ತ ಠಾಗೂರರು ಆರಂಭಿಸಿದ ಸಂವಾದವನ್ನೇ ಆಲಿಸೋಣ.

''ಭಯದ ಎಲ್ಲಾ ಹುನ್ನಾರಗಳ ವಿರುದ್ಧ ಪರಸ್ಪರ ರಕ್ಷಣೆಗಾಗಿ ಯಂತ್ರಗಳು ಒಂದು ಏಕಮತದ ಒಪ್ಪಂದಕ್ಕೆ ಬರುತ್ತವೆ ಎಂದು ನೀವು ಹೇಳುತ್ತಿದ್ದೀರಿ. ಆದರೆ ಉಗಿಹಂಡೆಗಳ ಇಂಥ ಒಕ್ಕೂಟ ಎಂದಾದರೂ ಅಂತಃಸಾಕ್ಷಿ-ಪರದೈವಗಳಿಂದೊಡ ಗೂಡಿದ ಆತ್ಮವನ್ನು ಒದಗಸೀತೇ?'' ಎಂದು ಪ್ರಶ್ನಿಸುವ ಠಾಗೋರರು ಇಂಥ ಒಕ್ಕೂಟವನ್ನು ಸೇರಲು ಸಾಮರ್ಥ್ಯವಿಲ್ಲದ ಮತ್ತು ತಾವು ತಾವೇ ಸಂಘಟಿಸುವಷ್ಟು ಕೂಡ ಶಕ್ತಿಯಿಲ್ಲದ ಸಾಧು ಸ್ವಭಾವದ ದುರ್ಬಲ ರಾಷ್ಟ್ರಗಳ ಗಮನ ಸೆಳೆಯುವುದಕ್ಕಾಗಿ ಸೈತಾನನ ಪರ ವಕೀಲನಂತೆ ನಟಿಸುತ್ತಾ, 'ದುರ್ಬಲರು ಗೋಡೆಗೆ ತಳ್ಳಲ್ಪಡುವುದು ಅನಿವಾರ್ಯ, ಅವರು ಸಾಯುವುದೂ ಅನಿವಾರ್ಯವಾಗಬಹುದು. ಇದು ವಿಜ್ಞಾನ' ಎಂದು ವಾದಿಸಿದರೆ, ಮುಂದೆ ಇದಕ್ಕೆ ಪ್ರತಿಯಾಗಿ ತಾನೇ, ''ಇಲ್ಲ, ಆತ ಬದುಕಲೇಬೇಕು. ನಮ್ಮ ಜಗತ್ತು ನೈತಿಕ ಜಗತ್ತು. ಮನುಷ್ಯ ತನ್ನ ನೈತಿಕ ಸ್ವಭಾವದ ರಕ್ಷಣೆಗಾಗಿಯಾದರೂ, ತಮ್ಮ ಸ್ವಾರ್ಥಕ್ಕೆ ಅನುಕೂಲವಾಗುವಂತೆ ಮನುಷ್ಯಕುಲವನ್ನು

ಪ್ರತ್ಯಪ್ರತ್ಯೇಕ ಕೋಶಗಳಾಗಿ ವಿಭಜಿಸುವುದು ಸರಿಯಲ್ಲ'' ಎಂದು ತನ್ನ ಆಶಯದ ಪ್ರತಿವಾದವನ್ನು ಹೂಡುತ್ತಾರೆ.

ಭಾರತದ ಅತ್ಯಂತ ಉತ್ಸಾಹೀ ದೇಶಭಕ್ತನಾದ ಠಾಗೋರರೇ ರಾಷ್ಟ್ರೀಯವಾದದ ಬಹುದೊಡ್ಡ ಟೀಕಾಕಾರರೂ ಆಗಿದ್ದರು ಎಂಬುದು ಅಭಿಮಾನದ ಸಂಗತಿ. ಅವರೇ ರಾಷ್ಟ್ರಗೀತೆಯ ಕರ್ತೃ ಕೂಡ. ಗಾಂಧಿ ತನ್ನ ಹಲವೊಂದು ಭಿನ್ನಾಭಿಪ್ರಾಯದ ಜತೆಯೂ ಗೌರವದಿಂದ ಕಾಣುತ್ತಿದ್ದ ಠಾಗೋರರು, ಭಾರತೀಯ ಸಮಾಜದ ಸಾಂಸ್ಕೃತಿಕ ವೈವಿಧ್ಯತೆಯನ್ನು ರಕ್ಷಿಸುವ ದೃಷ್ಟಿಯಿಂದ 'ರಾಷ್ಟ್ರೀಯವಾದ'ದ ಡಾಂಭಿಕತೆಯನ್ನು ಹದಗೊಳಿಸಿ ಹೊಂದಿಸಿಕೊಳ್ಳುವ ಅಗತ್ಯವನ್ನು ಮನಗಂಡಿದ್ದರು. ಹಾಗಾಗಿಯೇ ಠಾಗೋರರು 'ವಂದೇ ಮಾತರಂ' ಗೀತೆಯ ಮೊದಲ ಚರಣಕ್ಕೆ ಮಾತ್ರ ಸಂಗೀತ ರಚಿಸಿದರು. ಈ ಸಾಲು ಇಂದು, ಎ.ಆರ್. ರಹಮಾನ್ ಅಣುಸ್ಫೋಟದ ಬಗ್ಗೆ ತಯಾರಿಸಿದ ಸಾಕ್ಷ್ಯಚಿತ್ರದ 'ಪಾಪ್ ವಿಡಿಯೋ' ರೂಪಾಂತರವಾದ 'ಭಾರತ ಮಾತಾ' ಸ್ತೋತ್ರದ ಅಂಕಿತ ಶ್ರುತಿಯಾಗಿದೆ.

ಏಕದೇವತಾವಾದದ ಆದರ್ಶದ ವಿಜೃಂಭಣೆಗಾಗಿಯೇ ಕವಿಯು ರಚಿಸಿದ 'ವಂದೇ ಮಾತರಂ'ನ ಎರಡನೇ ಪಾದವು ದುರ್ಗಾದೇವಿಯ ಘೋರ ಪ್ರಕಟರೂಪದ ಸಂಭ್ರಮವನ್ನು ಕೊಂಡಾಡುವ ಹಿಂದೂ ಧಾರ್ಮಿಕತೆಯ ಡಾಂಭಿಕ ಭಾರದಿಂದ ತುಂಬಿಕೊಂಡಿದೆ. ಆದರೆ ಕವಿಗೆ ಈ ಸಾಲುಗಳು ಮುಸ್ಲಿಮರ ಸೂಕ್ಷ್ಮ ಸಂವೇದನೆಗಳಿಗೆ ನೋವುಂಟುಮಾಡಬಹುದೆಂಬ ಅನುಮಾನವೂ ಇತ್ತು.

ಅದಕ್ಕಾಗಿ ನಾವು ಕವಿಯ ಮೇಲೆ ಅಲ್ಪಸಂಖ್ಯಾತ ವರ್ಗವನ್ನು ಪುಸಲಾಯಿಸುವಿಕೆಯ ಕ್ರಿಯೆಯನ್ನು ಕವಿ ಪ್ರೋತ್ಸಾಹಿಸುತ್ತಾರೆ ಎಂದು ಆಪಾದನೆ ಮಾಡುವುದು ಸರಿಯೇ? ಇದರ ಜತೆಗೆ ಇಂದು, 'ಬಹುಮುಖೀ ಸಮಾಜದ ವೈವಿಧ್ಯತೆಯನ್ನು ಗೌರವಿಸುವ ಸೃಜನಾತ್ಮಕ ಸೆಕ್ಯೂಲರ್ ಚಿಂತನೆಯನ್ನು ಇಂದು ಮರು ವಿಮರ್ಶೆಗೊಡ್ಡುವುದು ಅಗತ್ಯ' ಎಂಬ ಸಲಹೆ ಬರುವ ಸಾಧ್ಯತೆಯೂ ಇದೆ. ಆದ್ದರಿಂದ, ರಾಷ್ಟ್ರೀಯತೆಯ ಕಲ್ಪನೆಯ ಜತೆ ಠಾಗೋರರಿಗಿದ್ದ ಸಮಸ್ಯಾತ್ಮಕ ಸಂಬಂಧದ ಕಾಲಘಟ್ಟದಿಂದ, ರಾಷ್ಟ್ರೀಯತೆಯ ಹೆಸರಿನಲ್ಲಿ ವಿಧಿಸಲಾಗುವ ಪ್ರಬಲ ಕಟ್ಟುಕಟ್ಟಳೆಗಳ ಕಾಲಘಟ್ಟಗಳ ನಡುವೆ ನಾವು ಸಂಪೂರ್ಣ ಕೊಚ್ಚಿಹೋಗದೆ, ರಾಷ್ಟ್ರೀಯ ವಿಚಾರಧಾರೆಗಳನ್ನು ಪ್ರಜಾಸತ್ತಾತ್ಮಕ ನೆಲೆಗಳಲ್ಲಿ ಭದ್ರಪಡಿಸಲು ಅನುಕೂಲವಾಗುವಂತೆ ಮರು ವ್ಯಾಖ್ಯೆಗೊಡ್ಡುವ ಸವಾಲು ನಮ್ಮ ಮುಂದಿದೆಯೆಂದು ನನಗನ್ನಿಸುತ್ತದೆ. 'ಹಿಂದೂ ರಾಷ್ಟ್ರೀಯತೆ'ಯ ಅಧಿಕಾರಯುಕ್ತವಾದ ವ್ಯಾಖ್ಯೆಯನ್ನು ಬಿ.ಜೆ.ಪಿ.ಯ ಸ್ವಾಮ್ಯಕ್ಕೆ ಬಿಟ್ಟರೆ, ಯಾವ ಮತ ಪಂಥಕ್ಕೂ ಒಳಪಡದೆ ಮಾಡಬಹುದಾದ 'ರಾಷ್ಟ್ರೀಯತೆ' ಯ



ವಸ್ತುನಿಷ್ಠ ವ್ಯಾಖ್ಯೆಯ ಅನೇಕ ಸಾಧ್ಯತೆಗಳನ್ನೇ ನಾವು ಹತ್ತಿಕ್ಕಿದಂತಾಗುತ್ತದೆ. ರಾಷ್ಟ್ರದ ಪರವಾಗಿ ಮಾತಾಡುವ ಬಿ.ಜೆ.ಪಿ.ಯ ನೈತಿಕ ಹಕ್ಕನ್ನು ಸಕಾಲದಲ್ಲಿ ಪ್ರತಿಭಟಿಸದೆ, ಅತ್ಯಂತ ಮಹತ್ವದ ವಿಷಯಗಳ ಬಗ್ಗೆ ಈ 'ಹಿಂದೂ ಹಕ್ಕಿ' ನ ಉನ್ನತ ಗುತ್ತಿಗೆದಾರರಿಗೆ ತೀರ್ಮಾನ ತೆಗೆದುಕೊಳ್ಳಲು ಬಿಡುತ್ತಾ ಹೋಗಿ ಬಹಳ ತಡವಾಗಿ ಮುಂದೊಂದು ದಿನ ಒಮ್ಮೆಲೇ ಎಚ್ಚೆತ್ತು ಈ ಹುನ್ನಾರಗಳನ್ನು ಪ್ರತಿಭಟಿಸಲು ಆರಂಭಿಸಿದರೆ, ಆಗ ನಾವು ರಾಷ್ಟ್ರವಿರೋಧಿಗಳು ಎಂಬ ಆಪಾದನೆಗೊಳಗಾಗುವ ಎಲ್ಲ ಸಂಭವವೂ ಇದೆ. ಅಂಥದನ್ನು ಆಗಲು ಬಿಡಬಾರದು. ಗಡಿಯಾಚೆಯ ನಮ್ಮ ಶತ್ರುಗಳಿಗೆ ಎಚ್ಚರಕೊಡುವ ಮೂಲಕ 'ಹಿಂದೂ ಹಕ್ಕು' ಉತ್ಪಾದಿಸುವ, ಮತ್ತು ಅದರಿಂದ ಲಾಭಪಡೆಯಲು ಯತ್ನಿಸುವ 'ಭಯೋತ್ಪಾದನೆಯ ಪಿತೂರಿಗೆ' ನಾವು ತುತ್ತಾಗಬಾರದು. ಇಂಥ ಎಚ್ಚರಿಕೆಯ ಮಾತುಗಳೇ ಪಾಕಿಸ್ತಾನವು ಆರು ಅಣುಸ್ಫೋಟ ನಡೆಸಿ ನಮ್ಮ ವಿರುದ್ಧ ಮುಯ್ಯಿ ತೀರಿಸಿಕೊಳ್ಳಲು ಕಾರಣವಾಯಿತು. 'ಪಾಕಿಸ್ತಾನದ ಈ ಕ್ರಮವು ನಾವು ಮೊದಲು ಆರಂಭಿಸಿದ ಅಣು ಸ್ಫೋಟವನ್ನು ಸಮರ್ಥಿಸುತ್ತದೆ' ಎಂದು ಬಿ.ಜೆ.ಪಿ. ಹಾಸ್ಯಾಸ್ಪದವಾಗಿ ಇಂದು ಘೋಷಿಸುತ್ತಿದೆ.

'ಅನ್ಯದ್ವೇಷ'ದ ಮನಃಸ್ಥಿತಿಯನ್ನು ಸಮರ್ಥಿಸುವ ತುರ್ತು ಅವಶ್ಯಕತೆಯ ಬಗ್ಗೆಯೇ ಇಂದು ಸಾರ್ವಜನಿಕ ಚರ್ಚೆ ನಡೆಯಬೇಕಾಗಿದೆ. ಈ ದೇಶದ ಸಾಮಾನ್ಯ ಜನತೆಗೆ ನಿಜವಾದ ಕಳವಳದ ಸಂಗತಿ ದೇಶದ ಭದ್ರತೆಯೇ? ಅಥವಾ ದೇಶದ ಬಹ್ವಂಶ ಜನರಿಗೆ ಇನ್ನೂ ದೊರಕದಿರುವ ಬದುಕಿನ ಮೂಲಭೂತ ಅವಶ್ಯಕತೆಗಳಾದ ಆಹಾರ, ನೀರು, ವಸತಿ, ಕನಿಷ್ಠ ವಿದ್ಯೆ, ಆರೋಗ್ಯ ಸೌಕರ್ಯಗಳ ಲಭ್ಯತೆಯೇ? ಎಂಬುದನ್ನು ನಾವು ಗಂಭೀರವಾಗಿ ಯೋಚಿಸಬೇಕು. ತಮ್ಮ ಹಳ್ಳಿ ಪೋಕ್ರಾನ್ ಇಂದು ಜಗತ್ಪ್ರಸಿದ್ಧವಾಯಿತೆಂಬ ಹೆಮ್ಮೆಯ ಸಂಭ್ರಮದಿಂದ ಅಲ್ಲಿಯ ಸ್ಥಳೀಯರು ಕುಣಿದಾಡುವುದನ್ನು ಟೆಲಿವಿಷನ್‌ನಲ್ಲಿ ತೋರಿಸುತ್ತಾ ಅದರ ಬೆನ್ನಗೇ 'ಅಣುಸ್ಫೋಟದ ಗೌರವದ ಸ್ಮಾರಕವಾಗಿ ಅಲ್ಲೊಂದು ಶಕ್ತಿ ಪೀಠವನ್ನು ಸ್ಥಾಪಿಸಲಾಗುತ್ತದೆ' ಎಂದು ವಿಶ್ವಹಿಂದೂ ಪರಿಷತ್ ಘೋಷಿಸಿತು. ಇದರಿಂದಾಗಿ ಆ ಸ್ಥಳಕ್ಕೆ ಈಗಾಗಲೇ ಯಾತ್ರಾ ಸ್ಥಳದ ಪ್ರಭಾವಲಯ ಬಂದುಬಿಟ್ಟಿದೆ. ಆದರೆ ಪೋಕ್ರಾನ್‌ನ ಎಲ್ಲ ಜನತೆ ಈ ಘಟನೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿರಲಿಲ್ಲ. ಪ್ರತಿದಿನವೂ ಗಂಟೆಗಟ್ಟಲೆ ಕಡುಬಿಸಿಲಿನಲ್ಲಿ ನಡೆದಾಡಿ ದೈನಂದಿನ ಅವಶ್ಯಕತೆಗೆ ಬೇಕಾದ ಅಲ್ಪ ಸ್ವಲ್ಪ ನೀರು ಹೊತ್ತುತರುವ ದೈನಂದಿನ ಕಾಯಕ ಈ ಘಟನೆಯಿಂದ ತಪ್ಪುವುದಿಲ್ಲ ಎಂಬ ವಾಸ್ತವ ಆ ಊರಿನ ಹೆಂಗಸರಿಗೆ ಗೊತ್ತಿದೆ. ಜನರ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲೂ ಸರಕಾರವು ಘೋರ ಔದಾಸೀನ್ಯ ತೋರುತ್ತಿರುವ ಹಿನ್ನೆಲೆಯಲ್ಲಿ ಪೋಕ್ರಾನಿನ ಮಕ್ಕಳ ಮುಂದಿನ ಭವಿಷ್ಯ

ಏನೆಂಬುದನ್ನು ಊಹಿಸಲೂ ಸಾಧ್ಯವಿಲ್ಲ.

ಕ್ರೌರ್ಯದ ಇಂಥ ಅನಂತ ಮುಖಗಳನ್ನು ನಿರಂತರವಾಗಿ ಪರೀಕ್ಷಿಸುವ ಪ್ರಯೋಗಶಾಲೆಯಾಗಿ ನಮ್ಮ ಭೂಮಿ ಮಾರ್ಪಾಡಾಗಿದೆ. ಈ ಸಂದರ್ಭದಲ್ಲಿ ಭೂಮಿಯ ಭವಿಷ್ಯವೇನು ಎಂಬುದನ್ನು ನಾವು ಗಂಭೀರವಾಗಿ ಚಿಂತಿಸಬೇಕಾಗಿದೆ. ಹಿಂದಿನ ಫ್ರಾನ್ಸ್ ಸರಕಾರ, ಇಂದಿನ ಕಲುಷಿತ ಜಗತ್ತಿನಲ್ಲೂ ಅತ್ಯಂತ ಪ್ರಶಾಂತ ನೆಲೆಯಾಗಿ ಉಳಿದಿರುವ ಶಾಂತ ಸಾಗರದ ಒಂದು ದ್ವೀಪದಲ್ಲಿ ಅಣುಪರೀಕ್ಷೆ ನಡೆಸಿದ ಘಟನೆ ನಿಜಕ್ಕೂ ಭೂಮಿಯ ಅಖಂಡ ಜೀವಜಾಲದ ಸಾಮರಸ್ಯಕ್ಕೇ ಕುತ್ತು ತರುವ ಆತ್ಮಹತ್ಯಾಕಾರಕ ಕೃತ್ಯ ಎನ್ನದೆ ವಿಧಿಯಿಲ್ಲ. ಶಾಂತ ಸಾಗರದ ಪ್ರಶಾಂತತೆ ಪೋಕ್ರಾನಿನಲ್ಲಿ ಇರದಿರಬಹುದು. ಆದರೂ, ಪೋಕ್ರಾನಿಗೆ ತನ್ನದೇ ಆದ ಶಾಂತಿಯ ಹಕ್ಕಿದೆ. ಭೂಮಿತಾಯಿಯ ಕಣ್ಣಿನಲ್ಲಿ, ಪೋಕ್ರಾನ್ ಶಾಂತ ಸಾಗರಕ್ಕಿಂತ ನಿಕೃಷ್ಟವಲ್ಲ. ಅದೂ ಕೂಡಾ ತಾಯಿಯ ಹೃದಯದಲ್ಲಿ ಪ್ರೀತಿಪಾತ್ರವಾದ ತಾಣವೇ ಅಲ್ಲವೇ?

ಪೋಕ್ರಾನ್‌ಸ್ಫೋಟದ ನಿರ್ಧಾರ ಕೈಗೊಂಡ ಮಂದಿ ಜಾಗತಿಕ ಪರಿಸರ ನಿರ್ನಾಮ ಮಾಡುವ ನಿಟ್ಟಿನಲ್ಲಿ ತಮ್ಮ ಯಥಾನುಶಕ್ತಿ ಕೊಡುಗೆ ನೀಡಿದ್ದಾರೆ. ಈ ಕಟು ಸತ್ಯವನ್ನು ಅಣು ಸ್ಫೋಟದಿಂದ ಉದ್ಭವಿಸಿದ ಅಂತರಾಷ್ಟ್ರೀಯ ದಿಗ್ಭಂಧನ, ಅಂತರಾಷ್ಟ್ರೀಯ ವ್ಯಾಪಾರದ ಡೋಲಾಯಮಾನ ಸ್ಥಿತಿ, ಮತ್ತು ಇದರ ಪರಿಣಾಮವಾಗಿ ಹೆಚ್ಚುತ್ತಿರುವ ಭಾರತದ ಕಳವಳಕಾರೀ ಆರ್ಥಿಕ ಬಿಕ್ಕಟ್ಟಿನ ನಡುವೆ ಮರೆಯಾಗದಂತೆ ಎಚ್ಚರ ವಹಿಸಬೇಕು. ಯಾವುದೇ ಆರ್ಥಿಕ ಬಿಕ್ಕಟ್ಟಿನಲ್ಲಿ ಕಟ್ಟಕಡೆಯಲ್ಲಿ ಸಂಕಷ್ಟಕ್ಕೀಡಾಗುವವರು ಸತತವಾಗಿ ನಮ್ಮಿಂದ ಕಡೆಗಣಿಸಲ್ಪಟ್ಟಿರುವ ಕಡುದರಿದ್ರರು. ಆರ್ಥಿಕ ದಿಗ್ಭಂಧನ ಈ ವರ್ಗಗಳ ಮೇಲೆ ಬೀರುವ ಪರಿಣಾಮ ಗಂಭೀರ ಸ್ವರೂಪದ್ದು. ಸ್ವದೇಶೀ ಮಂತ್ರ ಜಪಿಸಿಯೂ, ಈ ದಿಗ್ಭಂಧನವನ್ನು ಭರಿಸಿಕೊಳ್ಳಲು ಸಾಕಷ್ಟು ಸಾಮರ್ಥ್ಯವಿಲ್ಲದ ಭಾರತವು, ಅಣು ಸ್ಫೋಟಿಸಿದ 'ದುಷ್ಟ ರಾಷ್ಟ್ರ' ಎಂಬ ಅಪಖ್ಯಾತಿಯ ಜತೆಗೇ ವಿದೇಶೀ ಸಾಲ ಕಡಿತದ ಮೂಲಕ ಅಡ್ಡ ಪ್ರತೀಕಾರಕ್ಕೊಳಪಡುವಷ್ಟು ಈ ಸ್ಫೋಟಘಟನೆ ಮಹತ್ವದ್ದೇ ಎಂದು ನಮ್ಮ ವಾಣಿಜ್ಯ ಸಮುದಾಯವು ಪ್ರಶ್ನಿಸಬಹುದು. ಆದರೆ, ಒಂದೊಮ್ಮೆ ದಿಗ್ಭಂಧನ ಹೇರಿದ ರಾಷ್ಟ್ರಗಳು ಎಣಿಸಿದಷ್ಟು ತೀವ್ರ ಪರಿಣಾಮ ದಿಗ್ಭಂಧನ ಬೀರದಿದ್ದಿರೂ, ಅದು ಅಣು ಪ್ರಯೋಗದ ಕ್ರೌರ್ಯದ ಸ್ವರೂಪವನ್ನು ಕಡಿಮೆ ಮಾಡುವುದೇ ಅಥವಾ ಅಣು ಪ್ರಯೋಗವನ್ನು ಸಮರ್ಥಿಸುವುದೇ? ಎನ್ನುವುದು ಈ ಬಿಕ್ಕಟ್ಟಿನ ನೈತಿಕ ಆಯಾಮವನ್ನು ವಿಮರ್ಶಿಸುವಾಗ ಕೇಳಬೇಕಾದ ಬಹು ಮಹತ್ವದ ಪ್ರಶ್ನೆಯಾಗಿದೆ. ಈ ನೈತಿಕ ಪ್ರಶ್ನೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದನ್ನು ಬಿಟ್ಟು ಬಾಂಬನ್ನು ಪ್ರೀತಿಸಲು ಕಲಿಯುವುದು ಸಾಧ್ಯವೇ? 'ನೀವು ಯಾವ ಇಕ್ಕಟ್ಟಿನ ಪರಿಸ್ಥಿತಿಯಲ್ಲೂ



ಬಾಂಬನ್ನು ಪ್ರೀತಿಸಲಿಕ್ಕೆ ಸಾಧ್ಯವಿಲ್ಲ. ಆರ್ಥಿಕ ದಿಗ್ಭಂಧನ ಇರಲಿ, ಇಲ್ಲದಿರಲಿ, ಪೋಕ್ರಾನಿನ ಸ್ಫೋಟ ಸರ್ವಥಾ ಸಮರ್ಥನೀಯವಲ್ಲ' ಎಂಬುದೇ ಈ ಪ್ರಶ್ನೆಗಳಿಗೆ ನನ್ನ ಪ್ರತಿಕ್ರಿಯೆಯಾಗಿದೆ. ಆದರೆ ದುಃಖದ ಸಂಗತಿಯೆಂದರೆ, 'ಅಪಾಯಕಾರಿಯಾದ ಶತ್ರುವಿನ ಒಡಲಲ್ಲಿ ಭಯ ಹುಟ್ಟಿಸುವ ಕ್ರಿಯೆಯು ತಪ್ಪಲ್ಲ' ಎಂಬ ವಿಚಿತ್ರ ನೈತಿಕ ವಾದವು ಇಂದು ಅಂತರಾಷ್ಟ್ರೀಯ ಶಾಂತಿ ಚಳುವಳಿಯ ಗುಂಪುಗಳಲ್ಲೂ ಪ್ರಬಲವಾಗುತ್ತಿದೆ; ಮಾತ್ರವಲ್ಲ, ಅದು ನ್ಯಾಯ ಸಮ್ಮತವಾಗುವ ಪರಿಸ್ಥಿತಿಯೂ ಬರುತ್ತಿದೆ. 'ಭಯ ಹುಟ್ಟಿಸುವಿಕೆ'ಯನ್ನು ಸಮರ್ಥಿಸುವ ಈ ವಾಸ್ತವವಾದಿಗಳು 'ಪ್ರತೀಕಾರದ ಬೆದರಿಕೆಯ ವಾತಾವರಣದ ಸೃಷ್ಟಿ, ಯುದ್ಧವನ್ನು ತಡೆಗಟ್ಟುವ ಸಮರ್ಥ ಉಪಾಯ' ಎಂದೆಲ್ಲಾ ಬಣ್ಣಿಸುತ್ತಾ ಇದನ್ನು 'ಅನಿವಾರ್ಯಕೇಡು' ಎಂದು ಅತಿ ಬುದ್ಧಿವಂತಿಕೆಯಿಂದ ಸ್ವೀಕರಿಸುತ್ತಿದ್ದಾರೆ. ಈ ಹೆದರಿಕೆ ಹುಟ್ಟಿಸುವ ಕ್ರಿಯೆ ವಿಶ್ವಾಸಾರ್ಹವೂ ಆಗಿರಬೇಕಾಗಿರುವುದರಿಂದ, ಈ ಭಯ ಹುಟ್ಟಿಸುವ ರಾಷ್ಟ್ರವು, ತನ್ನ 'ಸಾಮರ್ಥ್ಯ' ಮತ್ತು'ಸಂಕಲ್ಪ' ಶಕ್ತಿಯನ್ನು ಶತ್ರುರಾಷ್ಟ್ರಕ್ಕೆ ಖಾತರಿಪಡಿಸಲು ತನ್ನ ಅಣುಸ್ಫೋಟ ಸಾಮರ್ಥ್ಯದ ಪ್ರದರ್ಶನವನ್ನು ಹೊಸ ಹೊಸ ತಂತ್ರಜ್ಞಾನದ ಪರಿಷ್ಕರಣೆಯೊಂದಿಗೆ ಆಗಾಗ್ಗೆ ನಡೆಸುತ್ತಲೇ ಇರಬೇಕಾಗುತ್ತದೆ. ಆದರೆ 'ಭಯೋತ್ಪಾದನೆ' ಯ ಪೈಪೋಟಿಯು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ನಿಲ್ಲುವಂಥದಲ್ಲ. ಅದು ನಿರಂತರವಾಗಿ ಆಕ್ರಮಣಕಾರೀ ಸ್ಪರ್ಧೆಯ ಲಕ್ಷಣ ಹೊಂದಿರುತ್ತದೆ.

ಅಣು ತರ್ಕದ ಇಂಥ ಅಸಂಬದ್ಧತೆಯನ್ನು ಅಚಿನ್ ವನಾಯಕ್, ದೃಷ್ಟಾಂತ ಸಹಿತ ಬಯಲುಮಾಡುತ್ತಾ, ''ಕೇವಲ ತಡೆಯೊಡ್ಡುವ ಕ್ರಿಯೆ (deter), ತಡೆಯೊಡ್ಡುವ ಭಾವನಾತ್ಮಕ ಸ್ಥಿತಿ (deterrence) ಗಿಂತ ಭಿನ್ನವಾಗಿದೆ. ತಡೆಯೊಡ್ಡುವಿಕೆಯ ಸಿದ್ಧಾಂತೀಕರಣವು ಅಣು ಅಸ್ತ್ರ ಏನನ್ನು ಸಾಧಿಸಲು ಸಮರ್ಥ ಎಂಬುದನ್ನು ಸೂಚಿಸುವ ಜತೆಗೆ ಅಣ್ವಸ್ತ್ರಗಳ ಅಸ್ತಿತ್ವವನ್ನು ತರ್ಕಸಮ್ಮತವನ್ನಾಗಿ ಮಾಡಿಬಿಡುತ್ತದೆ'' ಎಂದು ಉಲ್ಲೇಖಿಸುತ್ತಾನೆ. ಹಿರೋಷಿಮಾ ದುರಂತದ ನಂತರ ಆರಂಭವಾದ ಶೀತಲ ಸಮರ ಹುಟ್ಟುಹಾಕಿದ ಅಣ್ವಸ್ತ್ರಸಹಿತ ಮಿಲಿಟರಿವಾದದ ಹಿಂದಿರುವ ಕ್ರೌರ್ಯ, ಕಪಟತನವನ್ನು ಬಯಲಿಗೆಳೆಯುವ ಬದಲು, ನಮ್ಮ ಸರಕಾರ ಅಣು ಸ್ಫೋಟದ ಪ್ರದರ್ಶನದ ಮೂಲಕ ಶತ್ರುವನ್ನು ಹಿಮ್ಮೆಟ್ಟಿಸುವ ಮಿಲಿಟರಿತಂತ್ರದ ಬಗ್ಗೆ ತಮಗಿರುವ ವಿಶ್ವಾಸವನ್ನು ವ್ಯಕ್ತಪಡಿಸುವ ಮೂಲಕ, ಈ ಕಪಟವನ್ನು ಇನ್ನಷ್ಟು ಪುಷ್ಟೀಕರಿಸಿದೆ. ಆದರೆ ಈ ಅಣ್ವಸ್ತ್ರ ಸ್ಫೋಟದ ನಿಯಂತ್ರಣ ಮಾತ್ರ, 'ರಾಷ್ಟ್ರಹಿತದ ದೃಷ್ಟಿಯಿಂದ ಸರಿಯಾದ ಆಯ್ಕೆ ಮಾಡಿದ್ದೇವೆ' ಎಂಬ ಭ್ರಮೆಯಿಂದ ನಿರ್ಧಾರ ತೆಗೆದುಕೊಳ್ಳುವ ಕೇವಲ ಬೆರಳೆಣಿಕೆಯ ಮಂದಿಯ ಕೈಯ್ಯಲ್ಲಿ ಇರುತ್ತದೆಯೇ ವಿನಾ ಸರಕಾರದ ಕೈಯಲ್ಲಿರುವುದಿಲ್ಲ.

ಪೋಕ್ರಾನಿನ ಸ್ಫೋಟಕ್ಕೆ ಹಸಿರು ನಿಶಾನೆ ತೋರಿಸಿದ ಈ ಪ್ರಭುವರ್ಗದ ಮೇಲೆ ನಾವು ವಿಶ್ವಾಸವಿಡಬಹುದೇ? 'ಭಯ ಹುಟ್ಟಿಸುವಿಕೆಯ' ಮಿಲಿಟರಿ ತಂತ್ರದ ಪರ ಅವರ ವಾದವನ್ನು ನಂಬಬಹುದೇ? 'ಭಯ ಹುಟ್ಟಿಸುವಿಕೆ' ಯ ತಂತ್ರಕ್ಕೆ ಹಿಂಸೆಯನ್ನು ವಿಸರ್ಜಿಸುವ ಶಕ್ತಿಯಿಲ್ಲವಾದರೂ, ಯಾವ ಕ್ಷಣದಲ್ಲೂ ಸ್ಫೋಟಗೊಳ್ಳಬಹುದಾದ ಹಿಂಸೆಯನ್ನು ಮುಂದೂಡಲಾದರೂ ಅದು ಸಫಲವಾದೀತಲ್ಲಾ ಎಂಬ ವಾದದಲ್ಲಿ ಹುರುಳಿದೆಯೇ?

ಈ ಘಟ್ಟದಲ್ಲಿ ನಾನು ಪ್ರಸ್ತುತ ಬಿಕ್ಕಟ್ಟಿನ ರಾಜಕೀಯ ವಾಸ್ತವತೆಯಿಂದ ನನ್ನ ವಾದವನ್ನು ಪುನಃ ನೈತಿಕ ಮತ್ತು ಆಧ್ಯಾತ್ಮಿಕ ಆಯಾಮದೆಡೆಗೆ ಒಯ್ಯುತ್ತೇನೆ. ನಾವೇ ಹುಟ್ಟುಹಾಕಿದ ಈ ಪೂರ್ವನಿಶ್ಚಿತ ಕ್ರೌರ್ಯವನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡುವ ಕ್ರಿಯೆಯನ್ನು ಸಮರ್ಥಿಸುವುದು ನಮಗೆ ನಾವೇ ಬಗೆಯುವ ಆತ್ಮವಂಚನೆಯಲ್ಲವೇ? ರಾಜಕಾರಣಿಗಳಂತೆ ಈ ಸ್ಥಿತಿಗೆ ಕಾರಣವಾದ ವಿಜ್ಞಾನಿಗಳೂ ಕೂಡಾ ಇಂಥ ಮೂಲಭೂತ ತಾತ್ವಿಕ ಪ್ರಶ್ನೆಗಳಿಗೆ ಮುಖಾಮುಖಿಯಾಗದೆ ತಮ್ಮ ಆತ್ಮದ ಬಗ್ಗೆ ಭಯಂಕರವಾದ ಅಜ್ಞಾನಿಗಳಾಗಿರುವುದು ದುರದೃಷ್ಟಕರ ಸಂಗತಿ. ಸರಳ ರೇಖಾತ್ಮಕವಾದ ಸಂಕುಚಿತ ದೃಷ್ಟಿಕೋನವನ್ನೇ ಪ್ರತಿಬಿಂಬಿಸುವ ಶಬ್ದಗಳ ಇಂಥ ವಿಪುಲ ಬಳಕೆಯ ಮಧ್ಯೆ 'ಆತ್ಮ' ಎಂಬ ಸಂಗತಿ ಇರಲು ಸಾಧ್ಯವೇ ಎಂದು ಒಮ್ಮೊಮ್ಮೆ ಸಂಶಯಬರುತ್ತದೆ.

ಇದು ವಿಜ್ಞಾನದ ಖಂಡನೆಯಲ್ಲ. ಆಧುನಿಕತೆ, ವೈಚಾರಿಕತೆ, ಪಾಶ್ಚಾತ್ಯೀಕರಣಗಳ ಮೇಲೆ ಹೆಚ್ಚುತ್ತಿರುವ ಕೋಮುವಾದೀ, ಜಾತ್ಯಾತೀತ ವಿರೋಧಿ ಆಕ್ರಮಣಗಳು, ವಿಜ್ಞಾನವನ್ನು ಅತ್ಯಂತ ಸುಲಭಸಾಧ್ಯ ಜೀವವಿರೋಧೀ ಸಂಗತಿಯಾಗಿ ಪರಿವರ್ತಿಸಿ ಬಳಸಿಕೊಳ್ಳಲು ಆರಂಭಿಸಿದ್ದೇ ವಿಜ್ಞಾನಕ್ಕೆ ಬಂದಿರುವ ಕುತ್ತು. ನಿಜಕ್ಕೂ ಒಂದು ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ವಿಜ್ಞಾನದ ಪಾತ್ರ ತುಂಬಾ ಮಹತ್ವದ್ದು, ಮಾತ್ರವಲ್ಲ ಅದು ಆತ್ಮದ ಸ್ವಯಂಪೂರ್ಣ ವಿಕಾಸಕ್ಕೆ ಪ್ರತಿರೋಧ ಶಕ್ತಿಯಾಗಿರಬೇಕಾದುದೇನಿಲ್ಲ. ಆದರೆ ನಾವು ಯಾವ ವಿಜ್ಞಾನದ ಬಗ್ಗೆ ಮಾತಾಡುತ್ತಿದ್ದೇವೆ? ಯಾರನ್ನು ಅದು ಸಂಭೋಧಿಸುತ್ತದೆ? ಯಾವ ಅವಶ್ಯಕತೆಗಳ ಪೂರೈಕೆಗಾಗಿ? ಯಾವವರ್ಗದ ಅವಶ್ಯಕತೆಗಳು ಅವು? ಇಂದು, ಅಣ್ವಸ್ತ್ರದ ಹಿಂದಿರುವ ದೊಡ್ಡತಲೆಗಳು ತಮ್ಮ ಜೀವನದ ಉತ್ಕಟ ಆಕಾಂಕ್ಷೆಯೊಂದನ್ನು ಸಾಧಿಸಿದೆವು ಎಂದು ಬೀಗುತ್ತಿವೆಯಲ್ಲ, ಇದರ ಬದಲು ಈ ಮಂದಿ ಈ ದೇಶದ ಮಿಲಿಯಾಂತರ ಪ್ರಜೆಗಳ ದೈನಂದಿನ ಮೂಲಭೂತ ಅವಶ್ಯಕತೆಗಳಾದ ನೀರು ಮತ್ತು ಉರುವಲಿನ ಸಮಸ್ಯೆಗಳನ್ನು ನೀಗಲು ಇದೇ ಹುಮ್ಮಸ್ಸಿನಲ್ಲಿ ತಮ್ಮ ನಿಪುಣತೆಯನ್ನು ತೋರಲು ಆಸಕ್ತಿವಹಿಸಿದ್ದರೆ!?



ನನ್ನ ಈ ಬೇಡಿಕೆ ಅನುಚಿತವಾದುದೇನೂ ಅಲ್ಲ. ತಮ್ಮ ಕಾರ್ಯ ಯೋಜನೆಗಳ ಅನುಷ್ಠಾನದಲ್ಲಿ ಯಾವುದಕ್ಕೆ ಎಷ್ಟು ಪ್ರಾಶಸ್ತ್ಯ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ಒತ್ತಾಯ ಅಷ್ಟೆ.

ಗಾಂಧಿಯಿಂದ ನಾವು ಮೊದಲು ಪಾಠ ಕಲಿಯಬೇಕಾಗಿರುವುದು ಇಷ್ಟು: 'ಮನುಷ್ಯನ ಸಾಹಸಗಳ ಮಿತಿಯನ್ನು ಅರಿತು ಅದನ್ನು ಗೌರವಿಸುವ ಅಗತ್ಯವನ್ನು ಮನಗಾಣುವುದು; ಇನ್ನೊಬ್ಬನ ವೆಚ್ಚದಲ್ಲಿ ನಾವು ಏನನ್ನೂ ಪಡಕೊಳ್ಳದಿರುವುದು ಅಥವಾ ಕಳಕೊಳ್ಳುವುದಿರುವುದು, ನಮ್ಮ ಮತ್ತು ನಮ್ಮ ಸುತ್ತಮುತ್ತಲಿನ ಜಗತ್ತಿನ ಪೋಷಣೆಗೆ ಅವಶ್ಯವಾದ ನೈಸರ್ಗಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಸಂಪನ್ಮೂಲಗಳ ದುಂದುವೆಚ್ಚ ಮಾಡದಿರುವುದು'. ಪ್ರಸ್ತುತ ಸಂದರ್ಭದಲ್ಲಿ ಇವು ಅತೀ ಅವಶ್ಯಕವಾಗಿವೆ. ನದಿಗಳ ದಡದಲ್ಲಿ ಬದುಕುವ ಜನರ ಬದುಕು, ಜೀವನೋ-ಪಾಯಗಳ ಜತೆ ಅವರ ವಾಸ ಸ್ಥಳಗಳನ್ನೇ ನಾಶಮಾಡುವ ಅಣೆಕಟ್ಟು ಯಾರಿಗಾಗಿ? ಅವುಗಳಿಂದ ಏನು ಪ್ರಯೋಜನ? ಈ ಭೂಮಿಯಲ್ಲಿ ಬದುಕುತ್ತಿರುವ ಅಸಂಖ್ಯ ಕಡುದರಿದ್ರರನ್ನು ತುಳಿದು ಮಣ್ಣುಪಾಲು ಮಾಡುವ ಮೂಲಕ ಜಗತ್ತಿನ ರಾಷ್ಟ್ರಗಳ ಸಂಪತ್ತನ್ನು ಭಾರೀ ಹೆಚ್ಚಿಸುವ ಉದ್ದೇಶವಾದರೂ ಏನು? ಆತ್ಮವನ್ನೇ ಒತ್ತೆಯಿಟ್ಟು ನಡೆಯುವ ಈ ಭೂಮಿಯ ಗಳಿಕೆ ಯಾಕಾಗಿ? ನಮ್ಮ ಆತ್ಮವನ್ನು ಹೆಣೆದುಕೊಂಡಿರುವ ಈ ಚರಾಚರ ಜಗತ್ತಿನ ಅಖಂಡ ನೆಲೆಗಟ್ಟು, ಧರ್ಮಸಮ್ಮತವಾದ ಇಂಥ ಪ್ರಶ್ನೆಗಳಲ್ಲಿ ಹುದುಗಿದೆ. ಆತ್ಮದ ಅಖಂಡತೆಯ ಪ್ರಶ್ನೆಯನ್ನು ಕಡೆಗಣಿಸಿ ಯಾವ ಸಾಮಾಜಿಕ, ರಾಜಕೀಯ ಸಮಗ್ರ ಪರಿವರ್ತನೆಯನ್ನೂ ಪೋಷಿಸಿ, ಆಧರಿಸಿಕೊಳ್ಳಲು ಸಾಧ್ಯವಿಲ್ಲ.

ಅಣು ಸ್ಫೋಟದ ಮೂಲಕ ಜಗತ್ತಿನ ಕಣ್ಣೆನಲ್ಲಿ, ಅದಕ್ಕಿಂತ ಹೆಚ್ಚಾಗಿ ನಮ್ಮ ಕಣ್ಣಲ್ಲೇ ನಾವು, ನಮ್ಮ ಆತ್ಮ ಗೌರವವನ್ನು ನಾಶಮಾಡಿಕೊಂಡಿದ್ದೇವೆ. ಮಾನವೀಯ ಮತ್ತು ಆಧ್ಯಾತ್ಮಿಕ ನೆಲೆಯಲ್ಲಿ ಸಾಂಸ್ಕೃತಿಕ ವೈವಿಧ್ಯತೆಯನ್ನು ಪೋಷಿಸುತ್ತಾ ಬಂದ 'ಇಕಾಲಜಿ' ಯ ನೆಲೆಯನ್ನೇ ನಿರಾಕರಿಸುವ ಮೂಲಕ ನಾವು ನೈಜ ಸ್ವಾತಂತ್ರ್ಯದ ಸಾಧ್ಯತೆಗಳನ್ನೇ ಹಾಳುಗೆಡವಿದ್ದೇವೆ. ಬುದ್ಧ ಇಂದು ನಗುತ್ತಿರಲು ಸಾಧ್ಯವಿಲ್ಲ. ಹಾಗಾಗಿ, ಈ ದುಷ್ಟ ಆಶಯಗಳ ಈಡೇರಿಕೆಗಳ ಹಪಹಪಿಕೆಯನ್ನು ನಾವು ನಮ್ಮ ತಲೆಯಿಂದ ಕಿತ್ತೊಗೆದು,ತಮ್ಮ ಮೇಲೆ ತಾವೇ ಆರೋರಿಸಿಕೊಂಡ ಸಾರ್ವಭೌಮತ್ವ ಮತ್ತು ಖಚಿತವಾದ ಆತ್ಮನಾಶದ ಪೊಳ್ಳು ಪೌರಾಣಿಕ ಸಂಭ್ರಮದ ಆಚರಣೆಯಲ್ಲಿ ಓಲಾಡುತ್ತಿರುವ ರಾಜಕಾರಣಿಗಳ ಹಲ್ಲುಕಿರಿತದ ಬಗ್ಗೆ ಗಮನ ಕೊಡುವುದು ಒಳ್ಳೆಯದು.

# ವಿಜ್ಞಾನ, ವಸಾಹತುಶಾಹಿ ಹಾಗೂ ಹಿಂಸೆ

ಕ್ಲಾಡ್ ಆಲ್ವಾರೆಸ್

### ಪೀಠಿಕೆ: ವಿಜ್ಞಾನ ಹಾಗೂ ಹಿಂಸೆಯ ಪ್ರತಿಮೆಗಳು

ಪ್ರಕೃತಿ ವಿಧಿಸಿದ ಪರಿಮಿತಿಗಳನ್ನೆಲ್ಲ ಕಿತ್ತೆಸೆದು ಭೂಮಿಯಿಂದ ಬಾಹ್ಯಾಕಾಶಕ್ಕೆ ಜಿಗಿಯುವ, ಜಿಗಿದಷ್ಟೂ ಬಾರಿ ಲವಲೇಶವೂ ಲೆಕ್ಕ ತಪ್ಪದಂತೆ, ಅಪಾಯದ ಸೋಂಕೇ ತಟ್ಟದಂತೆ ಮರಳಿ ಭೂಮಿಗೆ ಬಂದು ಇಳಿಯುವ ಆಕಾಶನೌಕೆ ಕೊಲಂಬಿಯಾ ಇಂದಿನ ಮಾನವನ ಮನದಾಳದಲ್ಲಿ ನೆಟ್ಟುನಿಂತ ಆಧುನಿಕತೆಯ ಮಹಾನ್‌ಪ್ರತಿಮೆಗಳಲ್ಲೊಂದಾಗಿ ಹೋಗಿದೆ. 'ಇದು ಆಧುನಿಕ ವಿಜ್ಞಾನದ ಶಕ್ತಿಯ ಸಾಕ್ಷಿ, ಅದರ ಸಾಧನೆಯ ಉತ್ತುಂಗಶೃಂಗ'ವೆಂದೆನಿಸಿಕೊಂಡಿದೆ. ಬಸ್ತಾರಿನ ಕಾಡಿನ ಯಾವ ಆದಿವಾಸಿಯೂ ಇಂಥ ಹಿರಿಮೆಯನ್ನು ತೋರಲಾರ, ಹೀಗೆ ಆಗಸ ಬಗೆದು ನೆಗೆಯಲಾರ, ದಿಟ. ಅಂದಮಾತ್ರಕ್ಕೆ ಆತನಿಗೆ ಬಾನಂಗಳವನ್ನು ಅಳೆಯುವ ಕನಸಿಲ್ಲವೆಂದಲ್ಲ; ಅಂಥ ಕನಸನ್ನು ನನಸಾಗಿಸಬಲ್ಲಂಥ ಬೇರೆಯೆ ರೀತಿಯ ಮಾರ್ಗಗಳು ಆ ಬುಡಕಟ್ಟಿನ ಮಂತ್ರವಾದಿಗೆ ತಿಳಿದಿಲ್ಲವೆಂದಲ್ಲ. ಆದರೆ, ಪ್ರಸಕ್ತ ಆಡಳಿತಾರೂಢ ಆಧುನಿಕ ಪ್ರಜ್ಞೆ ಮಾತ್ರ ಅಂಥದೆಲ್ಲ ಮಾರ್ಗಗಳನ್ನು ಅಭೌತಿಕವೆಂದು ಅನಾದರಿಸುತ್ತದೆ, ಅವಾಸ್ತವಿಕವೆಂದು ಅಣಕಿಸುತ್ತದೆ. ಇನ್ನೊಂದೆಡೆ, ಅಣುಸ್ಥಾವರ ಗುಂಭಗಳು, ಭೋಗವಸ್ತುಗಳ ಮಾರುಕಟ್ಟೆಯಲ್ಲಿ ರಾಶಿರಾಶಿ ಬಿದ್ದಿರುವ ಇಲೆಕ್ಟ್ರಾನಿಕ್ ಸರಕುಗಳು, ಔಷಧಾಲಯಗಳಲ್ಲಿ ಲಕಲಕಿಸುವ ಲಕ್ಷವರ್ಣಗಳ ಮಾತ್ರೆಗಳು 'ಆಧುನಿಕ' ವಿಜ್ಞಾನದ ಅಸ್ತಿತ್ವ ಹಾಗೂ ಸಾಮರ್ಥ್ಯಗಳಿಗೆ ಸಾಕ್ಷಿಯಾಗಿ ಮೆರೆಯುತ್ತವೆ; ಈ ಮೊದಲಿದ್ದ ಎಲ್ಲ ವಿಜ್ಞಾನಗಳಿಗಿಂತ ಇದುವೆ ಹೆಚ್ಚು ಸತ್ಯಯುತವೂ ಸತ್ವಯುತವೂ ಆದುದು ಎಂದು 'ಆಧುನಿಕ ವಿಜ್ಞಾನ'ವನ್ನು ಮೆರೆಸುತ್ತವೆ.

ಇದೇ ಕಾಲಾವಧಿಯಲ್ಲಿ ಪ್ರಸ್ತುತ ಜಗತ್ತು ನಮ್ಮೆದುರು ಆಧುನಿಕ ವಿಜ್ಞಾನದ ಮತ್ತೊಂದು ಬೇರೆಯೆ ರೀತಿಯ ಪ್ರತಿಮೆಯೊಂದನ್ನೂ ಕಟ್ಟಿನಿಲ್ಲಿಸಿದೆ. ಮೇಲೆ ಪ್ರಸ್ತಾಪಿಸಿದ ಮೊದಲ ಪ್ರತಿಮೆಗೆ ತೀರಾ ವಿರುದ್ಧವೂ ಪರ್ಯಾಯರೂಪಿಯೂ ಆದ ಈ ಎರಡನೆಯ ಪ್ರತಿಮೆಯು ಮೊದಲಿನದರಷ್ಟೆ ಶಕ್ತಿಶಾಲಿಯಾದುದು ಹಾಗೂ



ಸರ್ವವ್ಯಾಪಿಯಾದುದು. ಇದು ಸೃಷ್ಟಿ-ಉತ್ಪಾದನೆ-ಸಾಧನೆಗಳ ಪ್ರತಿಮೆಯಲ್ಲ; ಬದಲಿಗೆ ಹಿಂಸೆ-ವಿನಾಶ- ದುರಂತಗಳ ಪ್ರತೀಕವಾಗಿರುವಂಥದು. ವಿಶ್ವಯುದ್ಧಗಳು, ವಿಯಟ್‌ನಾಮ್ ಹಾಗೂ ಏಜೆಂಟ್ ಆರೆಂಜ್, ಹಿರೋಶಿಮಾ-ನಾಗಸಾಕಿ, ಲೆಬನಾನ್ ಇತ್ಯಾದಿಗಳು ಇದರ ಖಂಡಖಂಡ ರೂಪಗಳು. ಈ ಘೋರ ಸಮರಗಳಲ್ಲಿ ಪ್ರತಿದಿನ ಪ್ರತಿಕ್ಷಣ ಬಳಕೆಯಾದ 'ಸ್ಫೋಟಿಸು, ಸಿಡಿಸು, ಉಡಾಯಿಸು' ಇತ್ಯಾದಿ ಪದಗಳೆ ಇನ್ನೊಂದು ಸ್ಪೇಸ್ ಷಟಲ್ ಕೊಲಂಬಿಯಾವನ್ನು ಎತ್ತಿ ಆಗಸಕ್ಕೆಸೆಯಬಲ್ಲವು. ಹಿಂಸೆ-ವಿನಾಶಗಳ ಈ ಪ್ರತಿಮೆಯೂ ಅಗಾಧವಾದುದು, ಮನದಾಳದಲ್ಲಿ ನೆಟ್ಟುನಿಲ್ಲುವಂಥದು. ಜೀವನಾಶಕ ಶಸ್ತ್ರಾಸ್ತ್ರ ಸಂಕೀರ್ಣಗಳು, ಜಗದ್‌ನಾಶಕ ಅಣ್ವಸ್ತ್ರ ಸಂಗ್ರಹಗಳು – ಇವೆಲ್ಲವೂ ಆಧುನಿಕ ವಿಜ್ಞಾನದ ಪ್ರಾಬಲ್ಯದ ಪುರಾವೆಗಳು, ಆದಿಮ ವಿಜ್ಞಾನಗಳು ಕಲ್ಪಿಸಿಕೊಳ್ಳಲೂ ಸಾಧ್ಯವಿರದಿದ್ದಂತಹ ಸರ್ವನಾಶಕ ಸಲಕರಣೆಗಳು. ವಿಜ್ಞಾನ ಬೆಳೆದಂತೆ ವಿನಾಶಜ್ಞಾನವೂ ಬೆಳೆಯುತ್ತಿರುವುದು ನಮ್ಮ ಯುಗದ ಅತಿಮುಖ್ಯ ಲಕ್ಷಣಗಳಲ್ಲೊಂದಾಗಿದೆ. ಒಂದೆಡೆ ಮಾನವ ದೇಹರಚನೆಯ ಅರಿವು ವಿಸ್ತರಿಸುತ್ತಿದ್ದಂತೆ ಇನ್ನೊಂದೆಡೆ ಮಾನವ ದೈಹಿಕ ಹಿಂಸೆಯ ಯಾವೆಲ್ಲ ನವನವೀನ ಹಾಗೂ ಹೆಚ್ಚುಹೆಚ್ಚು ನೋವು ನೀಡುವ ವಿಧಾನಗಳನ್ನು ರೂಢಿಸಿಕೊಳ್ಳುತ್ತಿದ್ದಾನೆ ಎನ್ನುವ ವಿಷಯದ ಕುರಿತಾದ ಆಮ್ನೆಸ್ಟಿ ಇಂಟರ್ ನ್ಯಾಷನಲ್ ಸಂಸ್ಥೆಯ ವರದಿಯೂ ಪುಟಪುಟಗಟ್ಟಲೆ ವರ್ಧಿಸುತ್ತಿದೆ.

ಹೀಗೆ ವಿಜ್ಞಾನ ಹಾಗೂ ಹಿಂಸೆಗಳು ನಮ್ಮ ಕಾಲದ ಎರಡು ಅತಿದೈತ್ಯ ಹಾಗೂ ಅತಿಪ್ರಭಾವಶಾಲಿ ಪ್ರತಿಮೆಗಳಾಗಿವೆ. ಅವೆರಡರ ನಡುವೆ, ವಿಜ್ಞಾನವು ಮೂಲತಃ ಒಳಿತೆಂದೂ ಹಿಂಸೆಯು ಸರ್ವತ್ರ ಕೆಡುಕೆಂದೂ ತಿಳಿಯುವವರು ಅನೇಕರಿದ್ದಾರೆ. ಆದರೆ ವಿಲಕ್ಷಣ ವಿರೋಧಾಭಾಸವೆಂದರೆ, ವಿಜ್ಞಾನ ವರ್ಧಿಸಿದಷ್ಟೂ ಹಿಂಸೆಯೂ ವರ್ಧಿಸುತ್ತಿದೆ.

ಇದು ಕಾಕತಾಳೀಯ ಮಾತ್ರವೊ? ಕಾರ್ಯಕಾರಣ ಸಂಬಂಧಗಳ ಸರಪಣಿಯೊ? ಇಲ್ಲ, ಇಂಥ ಪ್ರಶ್ನೆಗಳನ್ನು ಕೇಳುವುದೆ ಒಂದು ತತ್ವಶಾಸ್ತ್ರೀಯ ಆಟವೊ? - ಹಿಂದೆ ಮಾರ್ಕ್ಸ್‌ವಾದಿಗಳು ಹೇಳುತ್ತಿದ್ದಂತೆ - 'ವಿಜ್ಞಾನದ ಹಿಂಸೆ, ಹಿಂಸೆಯ ವಿಜ್ಞಾನ' - ಎನ್ನುವಂತೆ, ಬರಡು ಶಬ್ದಗಳ ಡೊಂಬರಾಟವೊ?

ಹಿಂಸೆಯೆನ್ನುವುದು ವಿಜ್ಞಾನಕ್ಕಿಂತ ವಿಶಾಲ ವ್ಯಾಪ್ತಿಯದು. ಹಿಂಸೆಯ ಲಕ್ಷಣಾರ್ಥ ಹೆಚ್ಚುಹೆಚ್ಚು ವಿಸ್ತರಿಸುತ್ತಿರುವ ಸಮಯದಲ್ಲಿಯೆ ವಿಜ್ಞಾನದ ಲಕ್ಷಣಾರ್ಥ ಸಂಕುಚಿತಗೊಳ್ಳುತ್ತಲೂ ಸಂಕ್ಷಿಪ್ತಗೊಳ್ಳುತ್ತಲೂ ನಡೆದಿದೆ. ವಿಜ್ಞಾನದ ಪ್ರತಿಪಾದಕರು ಇಂದು ಯಾವುದು ವಿಜ್ಞಾನ, ಯಾವುದು ಅವಿಜ್ಞಾನ ಎಂಬುದರ ಬಗ್ಗೆ ಹೆಚ್ಚುಹೆಚ್ಚು ಖಡಾಖಂಡಿತವಾಗಿಯೂ ಅಧಿಕಾರಯುತವಾಗಿಯೂ ವಾದಿಸಬಲ್ಲರು. ತಮ್ಮ

ಪ್ರಭಾವ- ವ್ಯವಹಾರಶಕ್ತಿಗಳ ಮೂಲಕ ಅವರು ಇನ್ನೆಲ್ಲ ಭಿನ್ನ ವಾದಗಳನ್ನು ನಿಸ್ಸೀಮ ನಿರ್ಲಕ್ಷ್ಯಕ್ಕೆ ಈಡುಮಾಡಬಲ್ಲರು. ಇದೇ ಅವಧಿಯಲ್ಲಿ ಹಿಂಸೆಯ ಸ್ವರೂಪ ಮತ್ತು ಕಾರ್ಯಕ್ಷೇತ್ರಗಳು ಮಾತ್ರ ಅಗಾಧವಾಗಿ ವಿಸ್ತರಿಸುತ್ತಿವೆ. ಅಸಂಖ್ಯ ವೈವಿಧ್ಯಸಮೃದ್ಧ ಸಸ್ಯ-ಪ್ರಾಣಿ-ಜೀವರೂಪಗಳನ್ನು ಪೊರೆಯುವ ಪೋಷಿಸುವ ಪ್ರಾಕೃತಿಕ ಭಾವಣಿ ಅರಣ್ಯಗಳು ದೈತ್ಯಯಂತ್ರಗಳಡಿಯಲ್ಲಿ ಸಿಲುಕಿ ನಲುಗುತ್ತಿವೆ, ನೆಲಸಮವಾಗುತ್ತಿವೆ. ಅವುಗಳ ಸೃಷ್ಟಿವಿಶಿಷ್ಟ ಸ್ಥಾನಮಾನಗಳನ್ನು ಏಕರೂಪಿ ಕೃತಕ ಅರಣ್ಯಗಳು ಆಕ್ರಮಿಸಿಕೊಳ್ಳುತ್ತಿವೆ; ಬಹುರೂಪಿ ಪ್ರಕೃತಿಯ ಜೀವದ ಬೇರುಗಳನ್ನು ಕಿತ್ತೆಸೆಯುತ್ತಿವೆ. ಹಿಂಸೆ ಈಗ ನವೋನ್ನವವೂ ವಿಲಕ್ಷಣವೂ ಆದ ಜೀವ-ದೇಹ-ಛೇದದ ತಂತ್ರಗಳನ್ನು ರೂಢಿಸಿಕೊಳ್ಳುತ್ತಿದೆ. ನಾಗರಿಕತೆ 'ಬೆಳವಣಿಗೆ'ಯ ರಾಜಮಾರ್ಗದಲ್ಲಿ ಸಾಗುತ್ತಿದೆ.

ಈ ನಮ್ಮ ಕಾಲದಲ್ಲಿ ಪ್ರತ್ಯಕ್ಷವಾಗಿ ಪರಸ್ಪರ ಸ್ನೇಹಸೌಹಾರ್ದದಲ್ಲಿ ಬಾಳುತ್ತಿರುವ ರಾಷ್ಟ್ರಗಳು ಪರೋಕ್ಷವಾಗಿ ಆರ್ಥಿಕ ಯುದ್ಧಗಳಲ್ಲಿ ಸೆಣೆಸಾಡಿಕೊಂಡಿವೆ; ಸಮರೋಪಕರಣಗಳ ಹಾಗೂ ಸಮರಸಂಭವದ ಸನ್ನಿಯ ಆಧಾರದ ಮೇಲೆಯೆ ತಮ್ಮತಮ್ಮ ಆರ್ಥಿಕವ್ಯವಸ್ಥೆಯನ್ನು ಕಟ್ಟಿ ನಿಲ್ಲಿಸಿವೆ. ಇಂಥ ಪರೋಕ್ಷ ಸಮರಗಳು ಪ್ರತ್ಯಕ್ಷಸಮರಗಳಷ್ಟೆ ಹಿಂಸಾತ್ಮಕವಾದುವು ಹಾಗೂ ವಿನಾಶಕಾರಿಯಾದುವು. ನದಿಯೊಂದರ ಸಹಜ ಹರಿವನ್ನು ತಡೆದು ಅಣೆಕಟ್ಟು ನಿರ್ಮಿಸುವುದು, ಆ ನದಿಯ ಜಲಾನಯನ ಪ್ರದೇಶದ ಕಾಡನ್ನು ನಾಶಮಾಡುವುದು, ಅಲ್ಲಿ ಬಾಳುತ್ತಿದ್ದ ಅಗಣಿತ ಜೀವಗಣಗಳನ್ನು ಬಲಿಗೊಡುವುದು ಹಾಗೂ ಲಕ್ಷಾಂತರ ಮಾನವಜೀವಿಗಳ ಬುಡ ಕಿತ್ತು ಅವರನ್ನು ಸ್ಥಳಾಂತರಿಸುವುದು - ಇವೆಲ್ಲವೂ ಆತ್ಯಂತಿಕವಾಗಿ ಸಶಸ್ತ್ರ ಸಮರಗಳ ಪರಿಣಾಮಗಳಷ್ಟೆ ಭೀಕರವಾದುವು. ಹಾಗೆಂದೆ ಪ್ರಖ್ಯಾತ ಚಿಂತಕ ಇವಾನ್ ಇಲಿಚ್‌ನು ಆಧುನಿಕ ವಿಜ್ಞಾನ- ತಂತ್ರಜ್ಞಾನಗಳನ್ನು ಆಧರಿಸಿದ ಪ್ರಸ್ತುತ ಆರ್ಥಿಕ ಅಭಿವೃದ್ಧಿಯ ಚಟುವಟಿಕೆಗಳನ್ನು ಸಮರ-ಚಟುವಟಿಕೆಗಳೆಂದೇ ಗುರುತಿಸುತ್ತಾನೆ.

ಆದರೆ, ನಾವೆಲ್ಲರೂ 'ಕೇನ್‌ನ ಮಕ್ಕಳು' ಎಂದೂ ತತ್ಕಾರಣ ಮೂಲತಃ ನಮ್ಮ ಆಂತರ್ಯದಲ್ಲಿಯೆ ಹಿಂಸೆಯ ಹಾಗೂ ಆಕ್ರಮಣದ ಪ್ರವೃತ್ತಿಗಳನ್ನು ಹುದುಗಿಸಿಕೊಂಡೆ ಹುಟ್ಟಿದವರೆಂದೂ ನಂಬುವ ಕೆಲವು ಮನಃಪ್ರವೃತ್ತಿ ಶಾಸ್ತ್ರಜ್ಞರನ್ನು ಹೊರತುಪಡಿಸಿದಂತೆ ಜಗತ್ ಸಮುದಾಯದ ಬಹುತೇಕ ಜನರು ಮಾತ್ರ ಹಿಂಸೆಯ ವ್ಯಾಪಕತೆಯನ್ನು ಹಾಗೂ ಶಕ್ತಿಯನ್ನು ತಗ್ಗಿಸುವುದು ಸಾಧ್ಯವೆಂದೂ ಅತ್ಯಗತ್ಯವೆಂದೂ ತಿಳಿದಿದ್ದಾರೆ.

ಹಾಗೆಂದಾಗ, ಹಿಂಸೆಯ ಶಕ್ತಿ-ವ್ಯಾಪ್ತಿಗಳಿಗೆ ಕಡಿವಾಣ ಹಾಕುವಲ್ಲಿ ಆಧುನಿಕ ವಿಜ್ಞಾನದ ಪ್ರಭಾವಕ್ಕೂ ಕಡಿವಾಣ ಹಾಕುವುದು ಹಾಗೂ ವಿಜ್ಞಾನಕ್ಕೆಯೆ ಪ್ರತಿರೋಧ ಒಡ್ಡುವುದೂ ಅತ್ಯಗತ್ಯವಲ್ಲವೇನು?



ವೈಜ್ಞಾನಿಕ ಮನೋಭಾವವು ಇತ್ಯಾತ್ಮಕವಾದುದೆಂಬ ಸಾರ್ವತ್ರಿಕ ಅಭಿಪ್ರಾಯ ವೊಂದಿರುವುದು ನಿಜ; ತನ್ನ ಪೋಷಣಾಸಾಮರ್ಥ್ಯದಿಂದ ವಿಜ್ಞಾನವು ನಮ್ಮ ಜನ್ಮಜಾತ ಹಿಂಸಾಪ್ರವೃತ್ತಿಯನ್ನು ಕೊಂಚವಾದರೂ ನಿಯಂತ್ರಿಸಬಲ್ಲುದೆಂಬ ನಂಬಿಕೆ ಯೊಂದಿರುವುದೂ ನಿಜ. ಆದಾಗ್ಯೂ, ಮಾನವ ಜೀವನದಲ್ಲಿ ಅನೇಕ ರೀತಿಯ ಸುಧಾರಣೆಗಳಿಗೆ ಕಾರಣವಾಗಿರುವ ಇದೇ ವಿಜ್ಞಾನವೆ ಹೆಚ್ಚುತ್ತಿರುವ ಹಿಂಸೆಯ ಕಾರಣವೂ ಆಗಿದೆ ಎನ್ನುವುದೂ ಅಷ್ಟೇ ನಿಜವಲ್ಲವೆ?

ಈ ಎರಡು ವಿರೋಧಾಭಾಸಗಳನ್ನು ಗಮನಿಸಿ. ಮೊದಲನೆಯದಾಗಿ, ರಾಜಕೀಯಾತ್ಮಕವೂ ಹಾಗೂ ಕೆಲವೊಮ್ಮೆ ರಕ್ತಸಿಕ್ತವೂ ಆದ 'ಕ್ರಾಂತಿ'ಯ ಸಾಂಪ್ರದಾಯಿಕ ಪರಿಕಲ್ಪನೆಯು ನಮ್ಮ ಕಾಲದಲ್ಲಿ ರೂಪಾಂತರವೊಂದನ್ನು ಪಡೆದುಕೊಂಡಿದೆ. ಇಂದು 'ಕ್ರಾಂತಿ'ಯೆನ್ನುವುದು ರಾಜಕೀಯ ಕ್ರಾಂತಿ ಮಾತ್ರವಲ್ಲ, ತಜ್ಞವಿಜ್ಞಾನಿಗಳು ನಡೆಸಿಕೊಡುವ ಯಂತ್ರ-ತಂತ್ರಜ್ಞಾನೀಯ ಪ್ರಕ್ರಿಯೆಗಳ ಒಂದು ದೀರ್ಘಕಾಲೀನ ಯೋಜನೆಯೂ ಹೌದು. ಹಸಿರು ಕ್ರಾಂತಿ, ಕ್ಷೀರಕ್ರಾಂತಿ, ಮಾಹಿತಿ ಕ್ರಾಂತಿ - ಇವೆಲ್ಲವೂ ರಾಜಕೀಯೇತರ ಸ್ಥಿತ್ಯಂತರಗಳು, ವಿಜ್ಞಾನಸಾಧಿತ ಕ್ರಾಂತಿಗಳು. ಇಂಥ ಕ್ರಾಂತಿಗಳ ಹರಿಕಾರ ವ್ಯಕ್ತಿಗಳು ಬಹುಸಾಮಾನ್ಯವಾಗಿ ಕಡು ಸಂಪ್ರದಾಯ ವಾದಿಗಳು. 'ಕ್ರಾಂತಿ'ಯನ್ನು ಸಾಧಿಸಿದ ನಂತರದಲ್ಲಿ ಮಾತ್ರ ಇದೇ ಸಂಪ್ರದಾಯ ವಾದಿಗಳು 'ಕ್ರಾಂತಿಕಾರಿ' ಗಳು ಎಂದೆನಿಸಿಕೊಳ್ಳುತ್ತಾರೆ. ಆದರೆ ವ್ಯಂಗ್ಯವೆಂದರೆ, ನಿತ್ಯಜೀವನದ ಸಾಮಾಜಿಕ- ರಾಜಕೀಯ ವ್ಯವಸ್ಥೆಯಲ್ಲಿ ವಿಜ್ಞಾನದ ಮುಖಾಂತರವಾಗಿ ಯಾವುದೆ ಇತ್ಯಾತ್ಮಕ ಬದಲಾವಣೆಯಾಗುವ ಸಾಧ್ಯತೆಯನ್ನು ಇದೇ ಜನ ಚಿವುಟಿಹಾಕುತ್ತಾರೆ; ಇಂಥ ಕೃತ್ಯಕ್ಕಾಗಿ ಇದೇ ಸ್ಥಾಪಿತ ವ್ಯವಸ್ಥೆಯ ಅಡಿಯಾಳುಗಳಾದ ಮಧ್ಯಮ ವರ್ಗದವರ ಮೆಚ್ಚುಗೆಯನ್ನು ಗಳಿಸಿಕೊಳ್ಳುತ್ತಾರೆ.

ಎರಡನೆಯ ವಿರೋಧಾಭಾಸ ಇದುಃ ಆಧುನಿಕ ವಿಜ್ಞಾನವು ಅಪರಿಮಿತವಾದ ಹಿಂಸೆಗೆ ಬಳಕೆಯಾಗುತ್ತಿದೆ ಎನ್ನುವುದು ಕಟ್ಟಾ ವಿಜ್ಞಾನವಾದಿಗಳೂ ಒಪ್ಪಿಕೊಳ್ಳುತ್ತಾರೆ. ಅಣ್ವಸ್ತ್ರವು ಆಧುನಿಕ ವಿಜ್ಞಾನ ನಮಗೆ ನೀಡಿರುವ ಪರಮವಿನಾಶಿ ಹಿಂಸಾಶಕ್ತಿಯ ಮಾದರಿಯಾಗಿದೆ. ಈ ಅಸ್ತ್ರವು ಜೀವಸ್ಸರ್ವವನ್ನೂ, ಅಂದರೆ ಸ್ವತಃ ವಿಜ್ಞಾನವನ್ನೂ, ನಾಶಗೊಳಿಸಬಲ್ಲಂಥದು.

ಇಂಥದೊಂದು ಸನ್ನಿವೇಶದಲ್ಲಿ, ವಿಜ್ಞಾನವು ಮೂಲತಃ ತಾರಕ ಶಕ್ತಿಯೆಂದೂ ಅದು ಕೆಲವೊಮ್ಮೆ ಮಾತ್ರ ಪಟ್ಟಭದ್ರ ವ್ಯವಸ್ಥೆಯ ಸ್ವಾರ್ಥಕ್ಕಾಗಿ ಬಳಕೆಯಾಗುತ್ತದೆ ಯೆಂದೂ ತಿಳಿಯುವ ರೀತಿಯ ಜನಪ್ರಿಯ ವಾದದಲ್ಲಿ ಯಾವ ಹುರುಳೂ ಇಲ್ಲ. ಯಾಕೆಂದರೆ, ಆಧುನಿಕ ವಿಜ್ಞಾನವು ಶಾಂತಿಯ ಆದರ್ಶವನ್ನು ಹೊಂದಿದ್ದೆ ಇಲ್ಲ; ಹಾಗೆ

ಹೊಂದಿದ್ದರೂ ಅದು ತೀರಾ ಅಪರೂಪವಾಗಿ ಮಾತ್ರ. ಸಮರತಂತ್ರ ಸಂಬಂಧಿ ಸಂಶೋಧನೆ ಹಾಗೂ ಅಭಿವೃದ್ಧಿಯ ಯೋಜನೆಗಳಿಗಾಗಿ ಸುರಿಯುವಷ್ಟು ಧನರಾಶಿಯನ್ನು ಯಾವ ಸರಕಾರವೂ ಎಂದೂ ಶಾಂತಿಸ್ಥಾಪನೆಯ ಯೋಜನೆಗಳಿಗಾಗಿ ಖರ್ಚು ಮಾಡಿದ್ದಿಲ್ಲ.

ಅದೇ‌ಇನ್ನೊಂದೆಡೆ, ವಿಜ್ಞಾನದ ಅಡಿಯಾಳುಗಳಲ್ಲದ ಸಂಸ್ಕೃತಿಗಳಲ್ಲಿ ಅಸಾಮಾನ್ಯ ಸಾಮರ್ಥ್ಯದ ಪರಿಕಲ್ಪನೆಯಿಂದ ಆವಾಹಿತವಾದ ವಸ್ತುಗಳನ್ನು ಸಾರ್ವತ್ರಿಕ ಒಳಿತಿಗಾಗಿ ಮಾತ್ರ ಬಳಸಬೇಕು ಎಂಬ, ದುರುದ್ದೇಶಕ್ಕೋ ಸ್ವಾರ್ಥಸಾಧನೆಗೋ ಬಳಕೆಯಾದಲ್ಲಿ ಇಂಥ ವಸ್ತುಗಳು ತಮ್ಮ ಅತಿಶಕ್ತಿಯನ್ನೆಲ್ಲ ಕಳೆದುಕೊಳ್ಳುತ್ತವೆ ಎಂಬ ನಂಬಿಕೆಯುಂಟು. ಭಾರತೀಯ ಪರಂಪರೆಯಲ್ಲಿರುವ 'ವಿಭೂತಿ'ಯ ಪರಿಕಲ್ಪನೆ ಇಂಥದೊಂದು ಉದಾಹರಣೆ. ಇದಕ್ಕೆ ಹೋಲಿಸಿದಾಗ, ಆಧುನಿಕ ವಿಜ್ಞಾನದ ಸ್ವರೂಪವೆ ತೀರಾ ಭಿನ್ನವಾದುದು; ಇಂದು ವಿಜ್ಞಾನವನ್ನು ಆಳುತ್ತಿರುವ ವರ್ಗದ ಬಲ ಮುಂದೆಂದೋ ಒಂದು ದಿನ ಕುಂದುವುದು; ಅದನ್ನು ಸಾಧಿಸಲೆಂದು ಇಂದು ವಿಜ್ಞಾನವನ್ನು ಬಳಸುವುದು ಅತ್ಯಗತ್ಯ ಹಾಗೂ ಅತ್ಯನಿವಾರ್ಯ—ಎಂದೆಲ್ಲ ಪೊಳ್ಳು ಭರವಸೆಯನ್ನು ಹುಟ್ಟಿಸಿ ವಿಜ್ಞಾನವನ್ನು ಶುದ್ಧ ಅನೀತಿಯ ಕೃತ್ಯಗಳಿಗಾಗಿ ಬಳಸುವುದು ಸಾಧ್ಯ. ವಿಜ್ಞಾನವನ್ನು ಒಂದು ಬಾರಿ ಪ್ರಜಾಪ್ರಭುತ್ವದ ಪ್ರಕ್ರಿಯೆಗೆ ಒಳಪಡಿಸಿದಾಕ್ಷಣ ಅದು ಸಹಜವಾಗಿ ಜನಸಾಮಾನ್ಯರ ಹಾಗೂ ಶ್ರಮಿಕವರ್ಗದವರ ಸ್ವತ್ತಾಗಿ ಪರಿವರ್ತಿತವಾಗುವುದು ಎಂದೆಲ್ಲ ತರ್ಕದ ಜಾಲ ಬೀಸಿ ಸದ್ಯದ ವ್ಯವಸ್ಥೆಯನ್ನು ಸಂರಕ್ಷಿಸಿಕೊಳ್ಳುವುದು ಸುಲಭಸಾಧ್ಯ.

ನನ್ನ ದೃಷ್ಟಿಯಲ್ಲಿ ವಿಜ್ಞಾನ ಹಾಗೂ ವಿಜ್ಞಾನಾಧಾರಿತ ತಂತ್ರಜ್ಞಾನಗಳೆರಡೂ ಮೂಲತಃವಾಗಿಯೆ ಹಿಂಸಾತ್ಮಕವಾದ ಮಾರ್ಗಗಳು; ಆಕ್ರಮಣದ ಮೂಲಕವೆ ಜಗತ್ತನ್ನು ಅರ್ಥೈಸಿಕೊಳ್ಳಲೆಳೆಸುವ ಹಾಗೂ ಅದನ್ನು ಅಧೀನಗೊಳಿಸಿಕೊಳ್ಳಲೆಳಸುವ ಜ್ಞಾನಸಾಧನೆಯ ಮಾದರಿಗಳು. ವಿಜ್ಞಾನ, ಅದರ ಪಠ್ಯ, ಅದರ ವಿನ್ಯಾಸಶಕ್ತಿ ಹಾಗೂ ಅದರ ಅನುಷ್ಠಾನ ಕ್ರಮಗಳೆಲ್ಲವೂ ತಮ್ಮ ಅಂತರಂಗದಲ್ಲಿಯೆ ಹಿಂಸೆಯನ್ನು ತುಂಬಿಕೊಂಡಿರುವಂಥವು. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರಬಂಧದಲ್ಲಿ

(೧) ವಿಜ್ಞಾನವನ್ನು ಕೆಡುಕಿನ ಬಳಕೆಗೊಡ್ಡುವ ಮೂಲಕಾರಣ ಶಕ್ತಿಗಳಲ್ಲಿ ಅಸಮಾನ ಸಾಮಾಜಿಕ ಸಂರಚನೆಯೆ ಪ್ರಧಾನವಾದುದೆಂಬ ವಾದವು ಉತ್ಪ್ರೇಕ್ಷೆಯಿಂದ ಕೂಡಿದ್ದು ಎಂದೂ

(೨) ವಿಜ್ಞಾನವು ತನ್ನ ಮೂಲಸ್ವರೂಪದಲ್ಲಿಯೆ ಹಿಂಸಾತ್ಮಕವಾದುದರಿಂದ ಹಿಂಸೆಯಲ್ಲಿ ವಿಜ್ಞಾನದ ಬಳಕೆಯು ಮುಂದುವರಿಯುವುದು ನಿಶ್ಚಿತವಾದುದೆಂದೂ,



ವಿಜ್ಞಾನದ ಅಹಿಂಸಾರೂಪಿ ಪ್ರಭಾವ- ಪರಿಣಾಮಗಳು ಆಕಸ್ಮಿಕ ಫಲಗಳೆ ಹೊರತು ಆಯೋಜಿತ ಫಲಗಳಲ್ಲವೆಂದೂ, ಹಾಗೂ ತತ್ಕಾರಣ

(೩) ತೃತೀಯ ಜಗತ್ತಿನ ಜನಸಮುದಾಯಗಳು ತಮ್ಮ ವಿಮೋಚನೆಗಾಗಿ ಆಧುನಿಕ ವಿಜ್ಞಾನವನ್ನು ಆಧರಿಸುವುದು ಅನಿವಾರ್ಯವೆಂಬ ವಾದವು ಅತ್ಯಂತ ಅಸಮರ್ಥನೀಯವಾದುದೆಂದೂ ಪ್ರಮಾಣಸಹಿತವಾಗಿ ಕಾಣಿಸಿಕೊಡಲು ನಾನು ಪ್ರಯತ್ನಿಸುತ್ತಿದ್ದೇನೆ. ನನ್ನ ಮಟ್ಟಿಗೆ ನಮ್ಮ ಯುಗದ ವಿಜ್ಞಾನವನ್ನು ಅದರ ಅಂತರಾಳದ ಹಿಂಸಾತ್ಮಕತೆಯಿಂದ ಬೇರ್ಪಡಿಸಿ ನೋಡುವುದು ಸಾಧ್ಯವೆ ಇಲ್ಲದಂಥ ಮಾತು.

'ಹೌದು, ಆಧುನಿಕ ವಿಜ್ಞಾನದಲ್ಲಿ ಕೆಲವು ಮೂಲಭೂತ ಲೋಪದೋಷಗಳಿರುವುದು ನಿಜ, ಆದರೆ ಈ ಸಮಸ್ಯೆಯ ಮೂಲವಿರುವುದು ವಿಜ್ಞಾನದ ಭೌತಸ್ವರೂಪಕ್ಕಿಂತ ಹೆಚ್ಚಾಗಿ ಅದರ ತತ್ವಪರಿಕಲ್ಪನೆಯಲ್ಲಿ ಎಂದೂ, ಪ್ರಸ್ತುತ ಪ್ರಚಲಿತವಾಗಿರುವ ಗೆಲಿಲಿಯೊ ಮಾದರಿಯ ಪ್ರತ್ಯಕ್ಷ ಪ್ರಮಾಣವಾದಿ (Positivist) ವಿಜ್ಞಾನತತ್ವಕಲ್ಪನೆಯನ್ನು ಕೈಬಿಟ್ಟು ಇದೇ ವೈಜ್ಞಾನಿಕ ಮಾರ್ಗವನ್ನು ಹೊಸತೊಂದು ತತ್ವಕಲ್ಪನೆಯ ಚೌಕಟ್ಟಿನಲ್ಲಿ ಅಳವಡಿಸಿಕೊಳ್ಳಲು ಸಾಧ್ಯವೆಂದೂ' ಕೆಲವು ವಿಜ್ಞಾನನಿಷ್ಠರು ವಾದಿಸುವುದುಂಟು. ನನ್ನ ದೃಷ್ಟಿಯಲ್ಲಿ ಹೀಗೆ ಆಧುನಿಕ ವಿಜ್ಞಾನದ ಭೌತತತ್ವಕಲ್ಪನೆ (Physics) ಯನ್ನು ಹಾಗೂ ಅದರ ಪಾರಭೌತತತ್ವಕಲ್ಪನೆ (metaphysics) ಯನ್ನು ಪ್ರತ್ಯೇಕಿಸಿ ನೋಡುವುದು ಸಾಧ್ಯವೆ ಇಲ್ಲ. ಏಕೆಂದರೆ, ಅವೆರಡೂ ಒಟ್ಟಿನಲ್ಲಿ ಹುಟ್ಟಿದಂಥವು, ಒಟ್ಟಿಗೆಯ ಬೆಳೆದಂಥವು. ಹೀಗೆ ಬಿಸಿಯಪ್ಪುಗೆಯಲ್ಲಿ ಬೆಸಗೊಂಡು ಮೂಡಿಬಂದ, ಇತಿಹಾಸದ ಮತ್ತು ಕೋಟಿಕೋಟಿ ಜನರ ಜೀವನದ ನಿರ್ಧಾರಕ ಶಕ್ತಿಗಳಾಗಿ ಬೆಳೆದುನಿಂತ ಇವೆರಡೂ ಪರಿಕಲ್ಪನೆಗಳೂ ಈಗ ಮತ್ತೆ ಜೊತೆಯಾಗಿಯೆ ಮರಣವನ್ನು ಕಾಣಬೇಕು. ಇವೆರಡರ ಮೂಲಕ ಈಗಾಗಲೆ ನಮ್ಮನ್ನು ಕವಿದುನಿಂತಿರುವ ಶೂನ್ಯಕಾವಳವನ್ನು ಕರಗಿಸಲು ನಾವಿಂದು ಬೇರೆಯೆ ಒಂದು ವಿಶ್ವಪರಿಕಲ್ಪನೆಯನ್ನು ಕಟ್ಟಿಕೊಳ್ಳುವುದು ಅತ್ಯನಿವಾರ್ಯ.

ಈ ವಿಶ್ಲೇಷಣೆಯನ್ನು ಮುಂದುವರೆಸುವ ಮೊದಲು ಮೂರು ಪ್ರಾಥಮಿಕ ಅಂಶಗಳನ್ನು ಸ್ಪಷ್ಟಪಡಿಸುವುದು ಅಗತ್ಯ:

ಈ ನನ್ನ ಪ್ರಮೇಯಗಳನ್ನು ಮಂಡಿಸುವಲ್ಲಿ ಹಾಗೂ ವಿವರಿಸುವಲ್ಲಿ ನಾನು ಯಾವ ವೈಜ್ಞಾನಿಕ ತರ್ಕವಿಧಾನವನ್ನೂ ಆಧರಿಸುತ್ತಿಲ್ಲ. ಬದಲಿಗೆ, ಮೂಲಭೂತವಾಗಿ ತತ್ವಶಾಸ್ತ್ರೀಯ ವಿಧಾನಗಳನ್ನು, ಆಧುನಿಕ ವಿಜ್ಞಾನದಲ್ಲಿ ಲಭ್ಯವಿರುವಂಥವಕ್ಕಿಂತ ವಿಶಾಲವ್ಯಾಪ್ತಿಯ ವೈಚಾರಿಕತೆಯ ವಿಧಾನಗಳನ್ನು ಬಳಸುತ್ತಿದ್ದೇನೆ. ನನ್ನ ಒಟ್ಟೂ ತತ್ವಶಾಸ್ತ್ರೀಯ ಪ್ರಮೇಯಗಳು, ಆದ್ಯತೆಗಳು ಹಾಗೂ ಕಲ್ಪನೆಗಳ ವಿನ್ಯಾಸನಕ್ಷೆಯಲ್ಲಿ,

ಹಾಗೂ ಅವೆಲ್ಲವುಗಳ ನಡುವಿನ ತರತಮಶ್ರೇಣಿ ವಿನ್ಯಾಸದಲ್ಲಿ ವೈಜ್ಞಾನಿಕ ತರ್ಕವಿಧಾನಕ್ಕೂ ಕೂಡ ಅದರದೆ ಆದ ಒಂದು ಸ್ಥಾನವುಂಟು ಹೌದು. ಆದರೆ, ಕೆಲವು ನಿರ್ದಿಷ್ಟವಾದ ಹಾಗೂ ಸೀಮಿತವಾದ ಗುರಿಗಳ ಸಾಧನೆಯಲ್ಲಿ ಅತ್ಯುತ್ಕೃಷ್ಟ ಸಾಧನವಾಗಬಲ್ಲ ವೈಜ್ಞಾನಿಕ ತರ್ಕಕ್ರಮವು ಸಮಗ್ರ ಸತ್ವದ ಶೋಧನೆಯಲ್ಲಿ ಮಾತ್ರ ಅಂಥ ಪರಮೋಚ್ಚ ಮಾರ್ಗವಾಗಲಾರದು.

ವಿಜ್ಞಾನ-ಹಿಂಸೆಗಳ ಅಂತರ್‌ಸಂಬಂಧದ ಇಂಥ ವಿಶ್ಲೇಷಣೆಯು ಇನ್ನೊಂದೆ ಆದ, ಇನ್ನೂ ವಿಶಾಲವ್ಯಾಪ್ತಿಯ ವಿಶ್ಲೇಷಣಾ ವಿಧಾನದ ಒಂದು ಆಂಶಿಕ ಭಾಗ ವಾಗಿರುವುದು. ಈ ವಿಧಾನವನ್ನು ಹಿಂಸೆಯ ಇನ್ನಿತರ ರೂಪಗಳ ವ್ಯಾಖ್ಯಾನದಲ್ಲಿಯೂ ಬಳಸಲು ಸಾಧ್ಯವುಂಟು. ಎಲ್ಲ ಹಿಂಸೆಯೂ ವಿಜ್ಞಾನಜನ್ಯವಾದುದೇನಲ್ಲ. ನಾನು ಇಲ್ಲಿ ವಿವರಿಸಬಯಸುವ ವಿಜ್ಞಾನ-ಹಿಂಸೆಗಳ ಸಂಬಂಧವು ಇನ್ನೂ ಹೆಚ್ಚು ವ್ಯಾಪಕವಾದ ಹಿಂಸಾರಾಶಿಯ ಒಂದು ಭಾಗ ಮಾತ್ರವಾಗಿರುವಂಥದು. ಈ ಲೇಖನವು, ಬಹುಮುಖ್ಯವಾಗಿ, ಆಧುನಿಕ ವಿಜ್ಞಾನದೊಡನೆ ಅಭೇದ್ಯ ಸಂಬಂಧವನ್ನುಳ್ಳ ನಿರ್ದಿಷ್ಟವಾದೊಂದು ಮಾದರಿಯ ಹಿಂಸಾತ್ಮಕತೆಯನ್ನು ತನ್ನ ಅಧ್ಯಯನದ ವಸ್ತುವಾಗಿರಿಸಿಕೊಂಡಿರುವುದು.

ಇಲ್ಲಿ ನಾನು ಪ್ರಸ್ತುತ ಪಡಿಸುತ್ತಿರುವ ವಾದವು ಮೂಲತಃ 'ಆಧುನಿಕ ಪಾಶ್ಚಾತ್ಯ' ವಿಜ್ಞಾನದ ವಿಮರ್ಶೆಯಾಗಿರುವುದು. ಈ ವಿಮರ್ಶೆಯು ಒಂದು ರೀತಿಯಲ್ಲಿ ವೈದ್ಯಕೀಯ ವಿಶ್ಲೇಷಣೆಯಂತೇನಾದರೂ ಕಂಡು ಬಂದಲ್ಲಿ ಆ ಅನಿಸಿಕೆ ಸರಿಯೆ — ಇಲ್ಲಿ ನಾವು ರೋಗಮೂಲವೊಂದರ ಶೋಧನೆಯಲ್ಲಿಯೆ ತೊಡಗಿರುವುದು. ಪಾಶ್ಚಾತ್ಯ ವಿಚಾರವಿಧಾನಕ್ಕೆ ಸಂಬಂಧಿಸಿದ ಈ ಟೀಕೆ ಚೀನೀ ಅಥವಾ ಭಾರತೀಯ ಚಿಂತನೆಗಳಿಗೆ ಅನ್ವಯಿಸುವಂಥದಲ್ಲ. ಸತ್ಯಶೋಧನೆಯಲ್ಲಿ ಅಮೂರ್ತೀಕರಣ ವಿಧಾನಕ್ಕಿರುವ ಇತಿಮಿತಿಗಳನ್ನು ಭಾರತೀಯ ಪರಂಪರೆಯು ಎಂದಿನಿಂದಲೊ ಗುರುತಿಸಿಕೊಂಡು ಬಂದಿದೆ; ಇಂಥ ಸೀಮಿತಶಕ್ತಿಯ ತಾರ್ಕಿಕತೆಯನ್ನು ಅದು ಎಂದಿಗೂ ಬೇರೆ ಅಧಿಕಶಕ್ತಿಯ ಜ್ಞಾನವಿಧಾನಗಳ ಅಡಿಯಾಳಾಗಿಯಷ್ಟೆ ಬಳಸಿಕೊಂಡಿದೆ. ಹಾಗೆಯೆ, ಇಲ್ಲಿಯ ನನ್ನ ವಿಮರ್ಶೆಯು ಆದಿವಾಸಿ ಸಮುದಾಯಗಳಿಗೂ ಅನ್ವಯವಾಗದು. ಇಂಥದೆಲ್ಲ ವಾದಗಳನ್ನು ಕೇಳಿದರೆ ಅವರು ನಕ್ಕಾರಷ್ಟೆ. ಈ ಭಾರತೀಯ, ಚೀನೀಯ ಹಾಗೂ ಆದಿವಾಸೀಯ ಚಿಂತನಾಕ್ರಮಗಳಾವುವೂ ಕೂಡಾ ಪ್ರಸಕ್ತ ಪಾಶ್ಚಾತ್ಯ ವೈಜ್ಞಾನಿಕ ವೈಚಾರಿಕತೆಯು ಹೊಂದಿರುವಂಥ ವಿಶ್ವವಿಜಯದ ಹಾಗೂ ವಿಶ್ವಯಜಮಾನಿಕೆಯ ಹೆಬ್ಬಯಕೆಯನ್ನು ಎಂದಿಗೂ ಹೊಂದಿಲ್ಲ. ಹಾಗಾಗಿ, ಪಶ್ಚಿಮದ ಇಂಥ ದಮನಕಾರಿ ವೈಚಾರಿಕತೆಯ ಅಂತರಂಗವನ್ನು ಅರ್ಥಮಾಡಿಕೊಳ್ಳುವುದು ಹಾಗೂ, ಅದು ತನಗಿಂತ



ಬಹುಹಿರಿಯ ನಾಗರಿಕತೆಗಳನ್ನು ನಡೆಸಿಕೊಳ್ಳುತ್ತಿರುವ ರೀತಿನೀತಿಗಳನ್ನು ತೆರೆದು ತೋರುವುದು ಇಂದಿನ ಮುಖ್ಯ ಅಗತ್ಯವಾಗಿದೆ.

ಹಿಂಸೆಯೆಂದರೆ ಜೀವಿಗಳಿಗೆ ದೈಹಿಕ ಯಾ ಮಾನಸಿಕ ನೋವು ನೀಡುವುದು. ಭೂಮಿಯೂ ಸಹ ನಮ್ಮೆಲ್ಲರಂತೆಯೆ ಒಂದು ಜೀವಿ. ಆಧುನಿಕ ವಿಜ್ಞಾನವು ಭೂಮಿಯೂ ಸೇರಿದಂತೆ ಎಲ್ಲ ಜೀವರೂಪಗಳನ್ನು ಭೌತಿಕ ಹಾನಿ ಹಾಗೂ ಹಿಂಸೆಗೆ ಒಳಪಡಿಸುತ್ತಿದೆ. ಮಾನಸಿಕ ಹಿಂಸೆಯ ವಿಷಯದಲ್ಲಾದರೆ — ಮಾನವೇತರ ಜೀವರೂಪಗಳ ಪ್ರಜ್ಞಾಜೀವನದ ಬಗ್ಗೆ ನಮಗೆ ಸದ್ಯಕ್ಕೆ ಹೆಚ್ಚೇನೂ ತಿಳಿದಿಲ್ಲವಾದ್ದರಿಂದ - ವಿಜ್ಞಾನದ ಮಾನಸಿಕ ಹಿಂಸಾಕ್ರಿಯೆ ಸದ್ಯಕ್ಕೆ ಮಾನವಕುಲಕ್ಕೆ ಮಾತ್ರ ಸೀಮಿತ ವಾಗಿದೆಯೆಂದು ತೋರುತ್ತದೆ ಎಂದಷ್ಟೆ ಹೇಳಬಹುದು.

ಹೀಗೆ, ವಿಜ್ಞಾನ ಹುಟ್ಟುಹಾಕುವ ಹಿಂಸೆಯು ಕೇವಲ ಅಮೂರ್ತವಾದ ಹಿಂಸೆಯಲ್ಲ; ಅದು ನಿಜವಾದ ಹಿಂಸೆ. ಇದರ ಒಂದು ಹೋಲಿಕೆಯನ್ನು ನಾವು ವಿಷಗಳ ವಿಷಯದಲ್ಲಿ ಕಾಣಬಹುದುಃ ತಮ್ಮಷ್ಟಕ್ಕೆ ತಾವಿದ್ದಾಗ ನಿರಪಾಯಕಾರಿಗಳಾದ ವಿಷ ಪದಾರ್ಥಗಳು ಜೀವರೂಪಗಳನ್ನು ಸ್ಪರ್ಶಿಸಿದಾಕ್ಷಣ ಮಾತ್ರ ಪ್ರಾಣಹಾರಕಗಳಾಗಿ ಪರಿವರ್ತಿತವಾಗುತ್ತವೆ.

ಇಲ್ಲಿ ನಾನು ವಿಶ್ಲೇಷಿಸುತ್ತಿರುವ ವಿಜ್ಞಾನ ಗೆಲಿಲಿಯೊ ಗೆಲಿಲಿ ಪ್ರಣೀತ ವಿಜ್ಞಾನ. ಇಂದು ಸರ್ವಸಾಮಾನ್ಯವಾಗಿ ಆಧುನಿಕ ವಿಜ್ಞಾನವೆಂದು ಹೆಸರಾಗಿರುವುದು ಇದೆ ವಿಜ್ಞಾನದ ರೂಪ. ಇದು ಅಂತಿಮವಾಗಿ ನಿರ್ದಿಷ್ಟ ಐತಿಹಾಸಿಕ ಸಂದರ್ಭವೊಂದರಿಂದ ರೂಪಿತವಾದ ಹಾಗೂ ನಿಯಂತ್ರಿತವಾದ ಒಂದು ಸೀಮಿತ ಜ್ಞಾನರೂಪ ಮಾತ್ರವಾಗಿದೆ. ಇಂದಿನ ಆಧುನಿಕೋತ್ತರ ಜಾಗತಿಕ ಸಂದರ್ಭದಲ್ಲಿ ಈ ಜ್ಞಾನಮಾರ್ಗ ಎಷ್ಟರಮಟ್ಟಿಗೆ ಉಪಯುಕ್ತವಾದುದು ಹಾಗೂ ಸಾಧುವಾದುದು ಎಂಬುದರ ಬಗ್ಗೆಯೆ ಇಂದು ಬಹುಮಹತ್ವದ ಪ್ರಶ್ನೆಗಳೆದ್ದಿವೆ. ನನ್ನ ಮಟ್ಟಿಗಂತೂ ಆಧುನಿಕ ಪಶ್ಚಿಮೇತರ ಸಮಾಜದ ಚಿಂತನಾಕ್ರಮಗಳು ಹಾಗೂ ಇಂದಿನ ಪಶ್ಚಿಮದ ಸಮಾಜಗಳಲ್ಲಿ ಉಪೇಕ್ಷೆ ಗೊಳಗಾಗಿರುವ ಅವರ ಪೂರ್ವಕಾಲದ ಚಿಂತನಾಕ್ರಮಗಳೆ ನಿಜವಾದ ವಿಜ್ಞಾನ ಮಾರ್ಗಗಳು. ಇವೆಲ್ಲವುಗಳಿಗೆ ಹೋಲಿಸಿದರೆ ಗೆಲಿಲೀಯ ಅಥವಾ 'ಆಧುನಿಕ' ವಿಜ್ಞಾನವು ಕೇವಲ ಒಂದು 'ಉಪಮಾರ್ಗ' ವಾಗಿರುವಂಥದು; ಮಾತ್ರವಲ್ಲ, ಅದು ಬಹುಮಟ್ಟಿಗೆ 'ಅಪಮಾರ್ಗ'ವೂ ಆಗಿರುವಂಥದು.

ಇಲ್ಲಿ ಮುಖ್ಯವಾಗಿ ಎರಡು ವಾದಗಳ ಮುಖಾಂತರ ವಿಜ್ಞಾನ- ಹಿಂಸೆಗಳ ನಡುವಿನ ಪ್ರಮುಖ ಅಂತಃಸಂಬಂಧಗಳನ್ನು ಅನಾವರಣಗೊಳಿಸಲು ನಾನು ಪ್ರಯತ್ನಿಸುತ್ತೇನೆ. ಒಂದು ವಾದವು ಕಾರ್ಯವಿಧಾನಕ್ಕೆ ಸಂಬಂಧಿಸಿದ್ದು, ಇನ್ನೊಂದು

ಚರಿತ್ರೆಗೆ ಸಂಬಂಧಿಸಿದ್ದು. ಈ ಎರಡೂ ವಾದಗಳ ಹಲವಾರು ಬಿಡಿಬಿಡಿ ಅಂಶಗಳನ್ನು ಅನ್ಯ ಚಿಂತರನೇಕರು ಈಗಾಗಲೆ ಪ್ರಸ್ತುತಪಡಿಸಿಯಾಗಿದೆ. ಇಲ್ಲಿ ನಾನು ಇವೆಲ್ಲವುಗಳನ್ನೂ ಒಳಗೊಂಡು ಸಮಗ್ರಚಿತ್ರವೊಂದನ್ನು ಕಟ್ಟಿಕೊಡಲಷ್ಟೆ ಪ್ರಯತ್ನಿಸುತ್ತಿದ್ದೇನೆ. ಇದಕ್ಕೆ ಸಂಬಂಧಿಸಿದ ಹೆಚ್ಚಿನ ನಿದರ್ಶನಾತ್ಮಕ ಅಂಶಗಳನ್ನು ಮುಂದಿನ ಭಾಗಗಳಲ್ಲಿ ನೀಡಲಿದ್ದೇನೆ.

ವಿಜ್ಞಾನದ ಕಾರ್ಯವಿಧಾನಕ್ಕೆ ಸಂಬಂಧಿಸಿದ ಮೊದಲನೆಯ ವಾದ ಈ ವಿಧಾನದ ಮೂಲಭೂತ ಹಿಂಸಾಪ್ರವೃತ್ತಿಯನ್ನು ಕಾಣಿಸುವಂಥದು. ಈ ವಿಧಾನದಲ್ಲಿ ಸಹಾನುಭೂತಿಗೆ ಯಾವ ಸ್ಥಾನವೂ ಇಲ್ಲ. ಎಲ್ಲ ಭಾವ-ಮೌಲ್ಯಗಳ ಬಂಧವನ್ನು ಕಡಿದೆಸೆದಂಥ ಜ್ಞಾನಾರ್ಜನೆಯ ವಿಧಾನವಿದು. ಇಂಥ ಭೌತವಿಧಾನ ಹಾಗೂ ಅದರ ತತ್ವ ಕಲ್ಪನೆಗಳೆರಡೂ ಕೂಡಾ ತಮ್ಮ ಕಾರ್ಯಸಾಧನೆಯಲ್ಲಿ ಅಂಗಚ್ಛೇದ ಹಾಗೂ ಜೀವಚ್ಛೇಧದ ತಂತ್ರಗಳನ್ನು ಅವಲಂಬಿಸಿಕೊಂಡಿವೆ; ಇಂಥ ಕ್ರಿಯೆಗಳನ್ನು ವಿಜ್ಞಾನದ ಅವಿಭಾಜ್ಯ ಅಂಗಗಳೆಂದೆ ಪರಿಗಣಿಸಿವೆ. ಆಧುನಿಕ ವಿಜ್ಞಾನದಲ್ಲಿರುವ ಹಿಂಸೆಯ ಪರವಾದ ಇಂಥ ಮುನ್ನೊಲವುಗಳು ಅತಿಸುಲಭವಾಗಿ ಕ್ರಿಯಾರೂಪವನ್ನು ತಾಳಬಲ್ಲವು; ಹಿಂಸೆಯನ್ನು ಅಮೂರ್ತ ತಾತ್ವಿಕತೆಯ ಸ್ತರದಲ್ಲಿ ಒಪ್ಪುವ ಓಲೈಸುವ ಇಂಥ ಮನೋಭಾವ ಬಹುಶೀಘ್ರವಾಗಿ ಮೂರ್ತ ಭೌತಿಕ ಹಿಂಸೆಯ ರೂಪವನ್ನು ಪಡೆಯಬಲ್ಲದು. ಇಂಥದೊಂದು ಅಪಾಯದ ಅರಿವು ಪಡೆದಂತೆ ಕಾಣುವ ಕೆಲವು ವಿಜ್ಞಾನವಾದಿಗಳು ತಮ್ಮ ವೈಜ್ಞಾನಿಕತೆಯಲ್ಲಿ ಕೆಲವು ವ್ಯಾಪಕ ಬದಲಾವಣೆಗಳನ್ನು ಮಾಡಿಕೊಳ್ಳಲು ತಾವು ಸದಾಸಿದ್ಧರು ಎಂದು ಘೋಷಿಸಿರುವುದೂ ಉಂಟು. ತಮ್ಮ ವಿಜ್ಞಾನದ ಅಮಾನವೀಯ ತತ್ವಕಲ್ಪನೆಯಲ್ಲಿಯೆ ಸುಧಾರಣೆಗಳನ್ನು ತಂದು, ವಿಜ್ಞಾನಮಾರ್ಗಕ್ಕೆ ಹೆಚ್ಚು ಸಮಗ್ರವಾದೊಂದು ದೃಷ್ಟಿಕೋನವನ್ನು ತರಲು ತಾವು ಯತ್ನಿಸುವುದಾಗಿ ಅವರು ಹೇಳಿರುವುದುಂಟು ಆದರೆ ಇಂಥ ಯಾವ ಸುಧಾರಣೆಗಳೂ ಆಧುನಿಕ ವಿಜ್ಞಾನದ ಮೂಲದಲ್ಲಿರುವ ಹಿಂಸಾತ್ಮಕತೆಯನ್ನು ತೊಡೆಯಲಾರವು. ಆಧುನಿಕ ವಿಜ್ಞಾನವು ಬಾಹ್ಯದ ಬಣ್ಣಗಳನ್ನಷ್ಟೆ ಬದಲಾಯಿಸಿಕೊಳ್ಳುವುದನ್ನು ಬಿಟ್ಟುಕೊಟ್ಟು ತನ್ನ ಆತ್ಮವನ್ನೆ ಆಮೂಲಾಗ್ರವಾಗಿ ಬದಲಿಸಿಕೊಳ್ಳಬೇಕು.

ವಿಜ್ಞಾನ-ಹಿಂಸೆಗಳ ನಡುವಿನ ಎರಡನೆಯ ಕೊಂಡಿ ವಸಾಹತುಶಾಹಿ. ವೈಜ್ಞಾನಿಕ ವಿಧಾನದ ಜನನವಾದ ಗಳಿಗೆಯಲ್ಲಿಯೆ ಅದರ ಜೊತೆಯಾಗಿಯೆ ವಸಾಹತುಶಾಹಿಯೂ ಹುಟ್ಟಿಕೊಂಡಿತು. ಚಾರಿತ್ರಿಕ ಹಾಗೂ ರಾಜಕೀಯಾತ್ಮಕ ಸ್ವರೂಪದ ಈ ಎರಡನೆಯ ವಾದವು ವಿಜ್ಞಾನ ಹಾಗೂ ಸಾಮ್ರಾಜ್ಯಶಾಹಿಗಳ ನಡುವಿನ ನಿಕಟವಾದ ಹಾಗೂ ನಿತ್ಯ ವರ್ಧಿಸುತ್ತಿರುವ 'ರಕ್ತ ಸಂಬಂಧ'ವನ್ನು ಸ್ಪಷ್ಟವಾಗಿ ಎತ್ತಿಕಾಣಿಸುವಂಥದು. ಈ



'ಸಂಬಂಧ'ದ ಸಮಸ್ಯಾತ್ಮಕತೆಯನ್ನು ಅನೇಕರು ಮನಗಂಡಿದ್ದಾರೆ ನಿಜ, ಆದರೆ ಅವರಲ್ಲಿ ಬಹುಮಂದಿ ಮತ್ತೆ ವಿಜ್ಞಾನವನ್ನು ಸಾಮ್ರಾಜ್ಯಶಾಹಿ-ವಸಾಹತುಶಾಹಿಯ ಅನೈತಿಕ ಸಂಬಂಧದಿಂದ ಬಿಡಿಸಿ ಶುದ್ಧಗೊಳಿಸಬಹುದು ಎನ್ನುವಂಥ ವಾದವನ್ನು ಹೂಡುವವರು. ನನ್ನ ಮಟ್ಟಿಗೆ ಮಾತ್ರ ವಿಜ್ಞಾನ-ತಂತ್ರಜ್ಞಾನಗಳೆರಡೂ ಮೂಲತಃವಾಗಿಯೆ ವಸಾಹತೀಕರಣದ ಚಟುವಟಿಕೆಗಳಾದುದರಿಂದ, ವಸಾಹತುಶಾಹಿಯ ತೆಕ್ಕೆಯಿಂದ ಅವುಗಳನ್ನು ಮುಕ್ತಗೊಳಿಸಬಹುದೆನ್ನುವುದು ಮಹಾ ಮೋಸಗಾರಿಕೆಯ ಮಾತಷ್ಟೆ.

ಈ ಎರಡು ವಾದಗಳನ್ನು ವಿಶದೀಕರಿಸಿದ ನಂತರ ನಾನು ಇನ್ನೆರಡು ವಾದಗಳನ್ನು ಮಂಡಿಸಲಿದ್ದೇನೆ. ಈ ವಾದಗಳು ವಿಜ್ಞಾನದ ನೇತ್ಯಾತ್ಮಕ ಪ್ರಭಾವ-ಪರಿಣಾಮಗಳ ವಿಶ್ಲೇಷಣೆಯ ಮುಖಾಂತರ ರೂಪುಗೊಂಡಂಥವು. ಈ ಎರಡನೆಯ ಭಾಗದಲ್ಲಿ ನಾನು ಸೈದ್ಧಾಂತಿಕ ವಾದಗಳನ್ನೂ ಪ್ರತ್ಯಕ್ಷ ನಿದರ್ಶನಗಳನ್ನೂ ಒಟ್ಟೊಟ್ಟಿಗೆ ಹೆಣೆಯಲು ಪ್ರಯತ್ನಿಸಿದ್ದೇನೆ. ಈ ಭಾಗದಲ್ಲಿಯ ವಾದಗಳನ್ನು 'ಮೊದಲ ಸರಣಿ' ಮತ್ತು 'ಎರಡನೆಯ ಸರಣಿ' ಎಂದು ವಿಂಗಡಿಸಿಕೊಂಡಿದ್ದೇನೆ.

ಇವುಗಳಲ್ಲಿ 'ಮೊದಲ ಸರಣಿ'ಯು ಕೃಷಿ, ಆಹಾರ, ಅರಣ್ಯಪೋಷಣೆ ಹಾಗೂ ಆರೋಗ್ಯರಕ್ಷಣೆಯ ಕ್ಷೇತ್ರಗಳ ಜೀವಪ್ರಕ್ರಿಯೆಗಳಲ್ಲಿ ಆಧುನಿಕ ವಿಜ್ಞಾನದ ಅನ್ವಯ ಉಂಟುಮಾಡಿರುವ ಪರಿಣಾಮಗಳನ್ನು ಪರೀಕ್ಷೆಗೆ ಒಡ್ಡುತ್ತದೆ; ಇಂಥ ಅನ್ವಯ ಈ ಕ್ಷೇತ್ರಗಳಲ್ಲೂ ಅಪಾರವಾದ ಹಾನಿಯುಂಟುಮಾಡಿರುವುದನ್ನು ಕಾಣಿಸುತ್ತದೆ. ಇಂಥ ದೋಷವನ್ನು ಸರಿಪಡಿಸಬಹುದು, ಅದಕ್ಕಾಗಿ 'ಮೃದು' ತಂತ್ರಜ್ಞಾನ ಮಾರ್ಗಗಳನ್ನು ಆವಿಷ್ಕರಿಸಿಕೊಂಡರೆ ಸಾಕು – ಎಂದು ಕೆಲವರು ವಾದಿಸುವುದುಂಟು. ಆದರೆ, ನೈಸರ್ಗಿಕ ಜೀವಪ್ರಕ್ರಿಯೆಗಳ ವಿಷಯದಲ್ಲಿ ಆಧುನಿಕ ವಿಜ್ಞಾನವು ತೀರಾ ಅಪ್ರಸ್ತುತವೂ ಅನಾವಶ್ಯಕವೂ ಆದುದು ಎಂಬ ಮೂಲಭೂತ ಸತ್ಯದ ಬಗ್ಗೆ ಯಾರೂ ಉಸಿರೆತ್ತು-ವುದಿಲ್ಲ.

ಇದರ ನಂತರ, 'ಎರಡನೆಯ ಸರಣಿ'ಯು ಭೌತನಿಯಮಗಳ ಅನ್ವಯಾಧಾರಿತ ಯಂತ್ರನಿರ್ಮಾಣ ಕ್ರಿಯೆಯನ್ನು ಪರಿಶೀಲಿಸುತ್ತದೆ. ಇದೊಂದು ಸಮಸ್ಯಾತ್ಮಕ ವಿಷಯವೆ ಹೌದು. ಏಕೆಂದರೆ ಈ ಕ್ಷೇತ್ರದಲ್ಲಿ ಮೂಲತಃ ಛಿದ್ರೀಕೃತ ವಿಜ್ಞಾನ ರೂಪವೊಂದು ಮಾತ್ರ ವ್ಯಾವಹಾರಿಕ ಅನ್ವಯಕ್ಕೆ ಬಳಕೆಯಾಗುತ್ತಿದೆ; ಇದು ಪರಿಸರ ಮಾಲಿನ್ಯ ಹಾಗೂ ಅಸಮತೋಲದಂತಹ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. ಔದ್ಯಮಿಕ ಪರಿಕ್ರಿಯೆಗಳು ಬಹುತೇಕ ಸಂದರ್ಭಗಳಲ್ಲಿ ಜೀವಸಹಜ ಪ್ರಕ್ರಿಯೆಗಳಿಗೆ ಹಾಗೂ ನೈಸರ್ಗಿಕ ಕ್ರಿಯಾವಳಿಗಳಿಗೆ ವೈರುಧ್ಯಾತ್ಮಕವಾದುವು. ಅನ್ವಯಿಕ ಜ್ಞಾನದ ಈ ಆಂಶಿಕ ಸ್ವರೂಪವು ಯಂತ್ರಜ್ಞಾನೀಯ ಗೊಂದಲಗಳಂತಹ ಸಮಸ್ಯೆಗಳಿಗೆ ಎಡೆಮಾಡಿ

ಕೊಡುತ್ತಿದೆ. ಇಂಥ ಗೋಜಲುಗಳಿಗೆ ಯಾವುದೆ ಪೂರ್ಣ ಪರಿಹಾರ ಸಾಧ್ಯತೆಯೂ ಕಾಣದಂತಾಗಿ, ಒಂದು ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಪ್ರಯತ್ನದಲ್ಲಿ ನಾವು ಮತ್ತೊಂದು ಸಮಸ್ಯೆಯನ್ನೂ, ಅದರ ಪರಿಹಾರದಲ್ಲಿ ಮಗುದೊಂದು ಸಮಸ್ಯೆಯನ್ನೂ ಸೃಷ್ಟಿಸಿಕೊಳ್ಳುತ್ತ, ಪ್ರತಿಯೊಂದು ಪರಿಹಾರದ ಸಂಭವನೀಯತೆಯನ್ನು ಮತ್ತೆಮತ್ತೆ ಮುಂದೂಡುತ್ತ, ಸ್ವಯಂಕೃತವೂ ಅಸಂಬದ್ಧವೂ ಆದ ವಿಷವರ್ತುಲವೊಂದರಲ್ಲಿ ಸೆರೆಯಾಳುಗಳಾಗಿ ಸಿಲುಕಿ ನರಳುತ್ತಿದ್ದೇವೆ.

ಮೂಲಭೂತ ಪಲ್ಲಟವೊಂದು ಮಾತ್ರ ಈ ವಿಷಚಕ್ರವ್ಯೂಹವನ್ನು ಭೇದಿಸಬಲ್ಲುದು. ಯಾಕೆಂದರೆ, ನಾನು ಮೇಲೆ ಪ್ರಸ್ತಾಪಿಸಿದ ವಿಜ್ಞಾನ-ಹಿಂಸೆ-ವಸಾಹತುಶಾಹಿಗಳ ನಡುವಿನ ಸಂಬಂಧಗಳು ಅಂತಃಸ್ತರದವು ಮಾತ್ರವಲ್ಲದೆ ಚಲನಶೀಲವೂ ಆಕ್ರಮಣಶೀಲವೂ ಆಗಿವೆ. ಅವು ಆಧುನಿಕ ಪಾಶ್ಚಿಮಾತ್ಯ ವಿಜ್ಞಾನದ ರಾಜಕೀಯ ಪ್ರಾಬಲ್ಯವನ್ನು ನಿರಂತರವಾಗಿ ಪ್ರವರ್ಧಿಸುವಂಥವಾಗಿವೆ. ಈ ಹಿನ್ನೆಲೆಯಲ್ಲಿ, ಈ ಲೇಖನದ ಅಂತಿಮಭಾಗವು ಆಧುನಿಕ ವಿಜ್ಞಾನದ ಹಿಂಸೆಯನ್ನು ಪ್ರತಿರೋಧಿಸುವಂಥ ಹಾಗೂ ಅನೇಕ ಅಂಶಗಳಲ್ಲಿ ಲುಡ್ಡೈಟ್‌ವಾದವನ್ನು ಸಮೀಪಿಸುವಂಥ ಮಾರ್ಗಸೂಚಿಗಳನ್ನುಮಂಡಿಸುತ್ತದೆ.

## ಭಾಗ ೧

## ಮತಿಶಕ್ತಿಯೆಂಬ ಮತಿಶೂನ್ಯತೆ

ಸ್ವತಃ ಪಾಶ್ಚಿಮಾತ್ಯ ತತ್ವಜ್ಞಾನಿಗಳು ಪಾಶ್ಚಿಮಾತ್ಯ ವಿಜ್ಞಾನವನ್ನು ಕಟು ವಿಮರ್ಶೆಗೆ ಒಳಪಡಿಸಿದ್ದಾರೆ. ಲೂಯಿಸ್ ಮಮ್‌ಫರ್ಡ್ ಎರಡು ಉತ್ಕೃಷ್ಟ ಲೇಖನಗಳಲ್ಲಿ - ಒಂದು, ಗೆಲಿಲಿಯೊನ ಬಗ್ಗೆ ಬರೆದದ್ದು, ಇನ್ನೊಂದು, ಫ್ರಾನ್ಸಿಸ್ ಬೇಕನ್‌ನ ಬಗ್ಗೆ - ಪಾಶ್ಚಿಮಾತ್ಯ ವಿಜ್ಞಾನದ ಮೂಲಘಟ್ಟದ ಮೂಲಸ್ವರೂಪವನ್ನು ಅನಾವರಣಗೊಳಿಸಿದ್ದಾನೆ.

ಮಮ್‌ಫರ್ಡ್‌ನ ಪ್ರಕಾರ, ಗೆಲಿಲಿಯೊ 'ಚಾರಿತ್ರಿಕ' ಮಾನವನನ್ನು ಕೊನೆಗಾಣಿಸುವಂಥ 'ಅಪರಾಧ' ಗೈದ. ಮಾನವ ವಾಸ್ತವದಲ್ಲಿ ಎಂದೆಂದಿಗೂ ಚಾರಿತ್ರಿಕ ಸಂದರ್ಭಗಳಿಂದ ರೂಪಿತವಾದಂಥವನು, ತಾನೂ ಪ್ರತಿಯಾಗಿ ಅವುಗಳನ್ನು ರೂಪಿಸುವಂಥವನು. ಆದರೆ, ಮಮ್‌ಫರ್ಡ್ ವಾದಿಸುವಂತೆ, ಗೆಲಿಲಿಯೊನ ಮಾರ್ಗವು ಇಂಥ ಎಲ್ಲ ಇತಿಹಾಸಸಾಪೇಕ್ಷ ಹಾಗೂ ವ್ಯಕ್ತಿಸಾಪೇಕ್ಷ ಅಂಶಗಳನ್ನು ತಿರಸ್ಕರಿಸಿತು, ಮತ್ತು ಪ್ರಾಥಮಿಕ ಭೌತಗುಣಗಳ ಹೊರತಾಗಿಇತರ ಎಲ್ಲ ಗುಣಗಳನ್ನೂ ಸಂಶಯಾಸ್ಪದವಾಗಿ ಪರಿಭಾವಿಸಿತು. ಆ ಮಾರ್ಗದಲ್ಲಿ 'ಮಾನವನ ಖಂಡಭಾಗವೊಂದು



(ಬುದ್ಧಿಶಕ್ತಿ) ಮಾತ್ರ, ಹಾಗೂ ಆ ನಿರ್ಲಿಪ್ತ ನಿರ್ಜೀವ ಬುದ್ಧಿಶಕ್ತಿಯ ಕೆಲವು ಸೃಷ್ಟಿಗಳು (ವೈಜ್ಞಾನಿಕ ಸೂತ್ರಗಳೂ ಮತ್ತು ಯಂತ್ರಗಳಂಥವು) ಮಾತ್ರ, ವಾಸ್ತವಸತ್ಯವೆಂಬ ಪರಿಗಣನೆಗೆ ಅರ್ಹವಾದವು, ಶಾಶ್ವತಿಯ ಸಂಮಾನಕ್ಕೆ ಯೋಗ್ಯವಾದವು.'

ಈ ರೀತಿಯಲ್ಲಿ, ಇತಿಹಾಸದಲ್ಲಿ ಮೊಟ್ಟಮೊದಲನೆಯ ಬಾರಿಗೆ, 'ವಸ್ತುನಿಷ್ಠತೆ'ಯೆನ್ನುವುದು ಒಂದು ನಿರ್ದಿಷ್ಟವಾದ ಹಾಗೂ ಅತಿ ವಕ್ರವಾದ ರೂಪದಲ್ಲಿ ವ್ಯಾಖ್ಯಾನಿತವಾಯಿತು. ಇದಾದ ಅನತಿಕಾಲದಲ್ಲಿ ಇಂಥ 'ವಸ್ತುನಿಷ್ಠ ಜ್ಞಾನ'ವೆ ಆಧುನಿಕ ವಿಜ್ಞಾನವೆಂದೆನಿಸಿಕೊಂಡಿತು. ಇದಾದ ನಂತರ ಇದೆ ಆಧುನಿಕ ವಿಜ್ಞಾನವನ್ನು ಪ್ರತ್ಯಕ್ಷ ಪ್ರಮಾಣವಾದಿ ವಿಶ್ವದರ್ಶನದ ಚೌಕಟ್ಟಿನೊಳಗಡೆ ಭದ್ರವಾಗಿ ಕೂರಿಸಿ ಅದನ್ನು ಪರಮಸತ್ಯದ ಪಟ್ಟಕ್ಕೆ ಏರಿಸಲಾಯಿತು. ಆ ನಿರ್ದಿಷ್ಟ ಇತಿಹಾಸ ಘಟ್ಟದಲ್ಲಿ ಬ್ರಿಟನ್ ಜಗತ್ತಿನ ಭೌತಸಾಗರಗಳನ್ನೂ, ಜೊತೆಗೆ ವಿಭಿನ್ನ ಸಮುದಾಯಗಳ ಮನೋಸಾಗರಗಳನ್ನೂ ಆಳುತ್ತಿದ್ದು, ಇಂಥ ವಿಜ್ಞಾನರೂಪವನ್ನು ಅದು ಸಾಂಸ್ಥಿಕರೂಪದಲ್ಲಿ ಬೆಳೆಸಿತು.

ಇಂಥ ವಿಜ್ಞಾನಮಾರ್ಗದ ಕೆಲವು ಮೂಲಭೂತ ದೋಷಗಳನ್ನು ಹೀಗೆ ವಿವರಿಸಬಹುದುಃ ಜೀವನಾನುಭವವು ಇತಿಹಾಸದಲ್ಲಿ ಜರುಗುವ ಘಟನಾವಳಿಗಳನ್ನು ಒಳಗೊಂಡಿರುವಂಥದ್ದು; ಈ ಘಟನಾವಳಿಗಳು ಅನನ್ಯವೂ ವಿಶಿಷ್ಟವೂ ಆಗಿರುವಂಥವು, ಸಾಗಿಬಂದ ಹಾದಿಯನ್ನು ಮರಳಿ ಕ್ರಮಿಸಲಾರದಂಥವು, ಹಾಗೂ ತತ್‌ಕ್ಷಣದಲ್ಲಿಯೆ ಅನುಭವದ ತೆಕ್ಕೆಗೆ ದೊರಕುವಂಥವು. ಅನುಭಾವಿಗಳ ಅನುಭವಕ್ರಮ ಇಂಥ ಸಂಪೂರ್ಣಾನುಭವದ ಒಂದು ಶ್ರೇಷ್ಠ ನಿದರ್ಶನವಾಗಿದೆ. ಇಂಥ ಅನುಭಾವಸ್ಥಿತಿಯಲ್ಲಿ ಬುದ್ಧಿಯ ಪಾಲು ಶೂನ್ಯವಾಗಿರುತ್ತದೆ. ಆದಿವಾಸಿ ಸಮುದಾಯಗಳೂ ಬಹುಪಾಲು ಮಾನವೇತರ ಜೀವಿಗಳೂ ಇಂಥ ಸಂಪೂರ್ಣಾನುಭವದ ಸ್ತರದಲ್ಲಿಯೇ ಜೀವನವನ್ನು ಅನುಭವಿಸುತ್ತಿರುತ್ತವೆ, ಜೀವಿಸುತ್ತಿರುತ್ತವೆ. ಹಾಗೆಂದಾಕ್ಷಣ ನಾನು ಆಧುನಿಕ ವಿಜ್ಞಾನದ ಮಾರ್ಗಕ್ಕಿಂತ ಈ ಅನುಭಾವದ ಮಾರ್ಗವೆ ಶ್ರೇಷ್ಠವೆಂದು ವಾದಿಸುತ್ತಿದ್ದೇನೆಂದು ಯಾರೂ ಭಾವಿಸ ಬಾರದು. ಬದಲಾಗಿ, ಇಂದಿನ ಶುದ್ಧ ವಿಜ್ಞಾನಿಯೊಬ್ಬನ ಅನುಭವಮಾರ್ಗಕ್ಕಿಂತ ಅನುಭಾವಿಯೊಬ್ಬನ ಮಾರ್ಗವು ಯಾವ ರೀತಿಯಲ್ಲೂ ಕಡಿಮೆಯಾದುದಲ್ಲ ಎಂಬುದೆ ನನ್ನ ವಾದವಾಗಿದೆ. ಈ ನನ್ನ ಹೇಳಿಕೆಗೆ ವಿಜ್ಞಾನಿಗಳು ಆಕ್ಷೇಪಿಸಬಹುದು, ಆದರೆ ಅನುಭಾವಿಗಳು ಮಾತ್ರ ತಮ್ಮ ಮನೋಧರ್ಮಕ್ಕೆ ಸಹಜವಾಗಿ ಕನಿಕರದ ಇಲ್ಲ ನಿರ್ಲಕ್ಷ್ಯದ ನಗೆ ನಕ್ಕು ಮೌನದಲ್ಲಿ ಮುಂದುವರಿಯುವವರು.

ಹೀಗೆ ಇತಿಹಾಸದ ಕೊಂಡಿಗಳನ್ನು ಕಳಚಿಕೊಂಡ ಆಧುನಿಕ ವಿಜ್ಞಾನ ಅಂತಿಮವಾಗಿ ಕೇವಲ ಅಮೂರ್ತವಾದುದು, ಹಾಗೂ ನಿಜಜೀವನದ ವಾಸ್ತವಾಂಶ

ಗಳಿಗೆ ಸಂಪೂರ್ಣ ದೂರವಾದುದು. ಧರ್ಮ ಹಾಗೂ ಆಧ್ಯಾತ್ಮಗಳಿಂದ ಸಂಪೂರ್ಣವಾಗಿ ಭಿನ್ನವಾಗಿ ಬೆಳೆಯಬಯಸಿದ ವಿಜ್ಞಾನ ಅವೆರಡನ್ನೂ ಅವಾಸ್ತವಿಕ ನೆಲೆಗಟ್ಟಿನವು ಎಂದು ಪರಿಗಣಿಸಿ, ತನ್ನ ತಳಹದಿಯನ್ನು ವಾಸ್ತವದ ಮೇಲೆಯಷ್ಟೆ ಕಟ್ಟಲು ಹೊರಟಿತು ನಿಜ. ಆದರೆ ಈ ಪ್ರಯತ್ನದಲ್ಲಿ ವಾಸ್ತವವಾಗಿ ಅದು ಸತ್ಯದಿಂದ ದೂರದೂರ ಸರಿಯುತ್ತಸಾಗಿತು. ಇದೊಂದು ವಿಚಿತ್ರ ವಾದವೆಂದು ತೋರುತ್ತದೆ ನಿಜ. ಆದರೆ ಪಶ್ಚಿಮದ ಇಬ್ಬರು ಖ್ಯಾತ ಸಿದ್ಧಾಂತಿಗಳಿಗೆ ಸಂಬಂಧಿಸಿದ ಈ ಸರಳ ನಿದರ್ಶನ ಮೇಲ್ಕಂಡ ವಾದದ ತಥ್ಯವನ್ನು ಮನಗಾಣಿಸಿಕೊಡುತ್ತದೆ.

ಒಂದೇ ಎತ್ತರದಿಂದ ಒಂದು ಕಲ್ಲನ್ನೂ ಒಂದು ಗರಿಯನ್ನೂ ಕೆಳಬೀಳಬಿಟ್ಟಾಗ, ಕಲ್ಲು ಗರಿಗಿಂತ ವೇಗವಾಗಿ ಬೀಳುವುದೆಂದು ಅರಿಸ್ಟಾಟಲ್ ನಿರ್ಧರಿಸಿ ತೋರಿದ. ವಾಸ್ತವದಲ್ಲಿ, ಇತಿಹಾಸದಲ್ಲಿ, ನಿಶ್ಚಿತವಾಗಿ ಕಲ್ಲುಗಳು ಗರಿಗಿಂತ ಹೆಚ್ಚು ವೇಗದಲ್ಲಿ ಕೆಳಬೀಳುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ಗೆಲಿಲಿಯೊ ಆವಿಷ್ಕರಿಸಿದ ವೈಜ್ಞಾನಿಕ ವೈಚಾರಿಕತೆಯು ಕಲ್ಲು ಹಾಗೂ ಗರಿಗಳನ್ನು ಪ್ರಭಾವಿಸುತ್ತಿದ್ದ ಎಲ್ಲ ರೀತಿಯ ಐತಿಹಾಸಿಕ ಶಕ್ತಿ-ಪ್ರೇರಣೆಗಳನ್ನೂ ತನ್ನ ದೃಷ್ಟಿಪರಿಧಿಯ ಹೊರಗಟ್ಟಿತು; ಇಂಥವೆಲ್ಲ ಪ್ರಭಾವಗಳನ್ನು ಉಚ್ಚಾಟಿಸಿದಾಗ ಕಲ್ಲು ಮತ್ತು ಗರಿಗಳೆರಡೂ ಕೂಡ ಒಂದೇ ವೇಗದಲ್ಲಿ ಕೆಳ ಬೀಳುವುವು ಎಂದು ಗೆಲಿಲಿಯೊ ವಾದಕಲ್ಪನೆಯೊಂದನ್ನು ಮಂಡಿಸಿದ. ಕೆಲವೆ ವರ್ಷಗಳಲ್ಲಿ ಟೋರಿಸೆಲ್ಲಿ ಕೃತಕವಾದ 'ನಿರ್ವಾತ ವಲಯ' ವೊಂದನ್ನು ಸೃಷ್ಟಿಸಿ, ಆ ಮೂಲಕ ಗೆಲಿಲಿಯೊನ ವಾದಕಲ್ಪನೆಯನ್ನು ಪ್ರತ್ಯಕ್ಷವಾಗಿ ಪ್ರಮಾಣಿಸಿ ತೋರಿದ. ನಿರ್ವಾತ ವಲಯವೆಂದರೆ ಸಂಪೂರ್ಣ ಶೂನ್ಯದ ವಲಯ, ಅನುಭವಶೂನ್ಯದ ವಲಯ. ಹೀಗಾಗಿ, ಗೆಲಿಲಿಯೊ ಹಾಗೂ ಟೋರಿಸೆಲ್ಲಿ ನಿರ್ಮಿಸಿ ಸ್ಥಾಪಿಸಿದ ವೈಜ್ಞಾನಿಕ ವಾಸ್ತವಾಂಶವು ಕೇವಲ ಕೃತಕ ವಾಸ್ತವಾಂಶವಾದುದೆ ಹೊರತು ಅದು ಯಾವ ರೀತಿಯಲ್ಲೂ ಸಹಜವಾಸ್ತವದೊಡನೆ ಸಂಬಂಧವನ್ನು ಹೊಂದಿರುವಂಥದಲ್ಲ, ಪ್ರಕೃತಿಸಹಜವಾದ ಅಂಶವಲ್ಲ. ಈ ಲೇಖನದ ಮುಖ್ಯ ವಾದವೂ ಇದೆ ವಿಪರ್ಯಾಸವನ್ನು ಎತ್ತಿ ಕಾಣಿಸುವಂಥದು: 'ಸಹಜ'ವೂ 'ಅಪರಿಪೂರ್ಣ'ವೂ ಆದ (ಅದೆ ಕಾರಣ 'ಅವೈಜ್ಞಾನಿಕ'ವೆಂದೂ ಪರಿಭಾವಿಸಲ್ಪಟ್ಟ) ಪ್ರಕೃತಿಯ ಮೇಲೆ ತಥಾಕಥಿತ 'ಕೃತಕ' ಅಥವಾ 'ಪರಿಪೂರ್ಣ' ಪ್ರಕೃತಿಯನ್ನು ಹೇರುವ ಪ್ರಯತ್ನ ಖಂಡಿತವಾಗಿ ಹಿಂಸೆಯಲ್ಲಿ ಪರ್ಯವಸಾನಗೊಳ್ಳುವುದು.

ಆಧುನಿಕ ವಿಜ್ಞಾನವು ತಾನು ಪೂರ್ವಾಗ್ರಹಗಳಿಲ್ಲದ ಕ್ರಿಯೆಯೆಂದು ಎಷ್ಟೆಲ್ಲ ನಟಿಸಲು ಯತ್ನಿಸಿದರೂ ಕೂಡ, ವಾಸ್ತವದಲ್ಲಿ ಅದೂ ಸಹ ಪೂರ್ವಕಲ್ಪನೆಗಳನ್ನು ಆಧರಿಸಿಕೊಂಡ ವ್ಯವಸ್ಥೆಯೆ ಆಗಿದೆ. ಇದು ಸೊನ್ನೆಯಿಂದ ಪ್ರಾರಂಭಿಸಿಕೊಂಡು, ಪ್ರತ್ಯಕ್ಷ



ಪ್ರಮಾಣದ ಅನುಭವವಾಸ್ತವವನ್ನೆ ನೆಚ್ಚಿಕೊಂಡು ಸತ್ಯವನ್ನು ಶೋಧಿಸುವಂತೆ ತೋರುತ್ತದೆ, ನಿಜ; ಅದರ ಪ್ರಮೇಯಗಳೆಲ್ಲವೂ ಎಲ್ಲ ರೀತಿಯ ಪಾರಭೌತ ತತ್ವಕಲ್ಪನೆಗಳನ್ನು ನಿರಾಕರಿಸುವಂತೆ ಕಾಣುತ್ತವೆ, ನಿಜ. ಇಂಥೆಲ್ಲ ಶುದ್ಧಾಂಗ ಭೌತಪರಿಕಲ್ಪನೆಯ ತೋರುಮುಖದ ಹಿಂದೆ ಮಾತ್ರ ಅದಕ್ಕೆಯೆ ವಿಶಿಷ್ಟವಾದ ಅನೇಕ ಪಾರಭೌತತತ್ವಕಲ್ಪನೆಗಳೂ ಅಡಗಿ ಕುಳಿತಿವೆ. ಇಂಥ ಪ್ರಮೇಯಗಳು, ಇತರೆಲ್ಲ ರೀತಿಯ ಪ್ರಮೇಯಗಳಂತೆಯೆ ಪೂರ್ವಕಲ್ಪಿತವಾದುದರಿಂದ, ವಾಸ್ತವವನ್ನು ಆಂಶಿಕವಾಗಿಯಷ್ಟೆ ವ್ಯಾಖ್ಯಾನಿಸುತ್ತವೆ, ಅದನ್ನು ವಿರೂಪಗೊಳಿಸಿ ನಿರೂಪಿಸುತ್ತವೆ.

ಶುದ್ಧ ಪ್ರಯೋಗಾತ್ಮಕ ಉದ್ದೇಶಗಳಿಗಾಗಿ ಮಾನವ ಸಮುದಾಯವೊಂದರ ಮೇಲೆ ಅಣ್ವಸ್ತ್ರಗಳನ್ನು ಸ್ಫೋಟಿಸುವಂಥ ವಿಜ್ಞಾನಿಗಳ ಕೃತ್ಯದ ಹಿಂದೆ ಪಾರಭೌತ-ತತ್ವಕಲ್ಪನೆಯೊಂದು ನಿಶ್ಚಿತವಾಗಿ ಇದ್ದೇ ಇದೆ; ವೈಜ್ಞಾನಿಕ ಅರಣ್ಯಪೋಷಣೆಯ ಸೋಗಿನಲ್ಲಿ ಏಕಸಸ್ಯಪ್ರಭೇದ ಅರಣ್ಯಗಳನ್ನು ಬೆಳೆಸುವುದರ ಹಿನ್ನೆಲೆಯಲ್ಲಿ ಪಾರಭೌತತತ್ವಕಲ್ಪನೆಯೊಂದು ಖಂಡಿತವಾಗಿ ಇದೆ. ನಮ್ಮ ಜಗತ್ತಿನಲ್ಲಿನ ವಿಜ್ಞಾನದ ಎಲ್ಲ ವಿಕೃತ ಅವತಾರರೂಪಗಳನ್ನು ಸೇರಿಸಿ ಪೋಣಿಸುವಂಥ ಏಕಸೂತ್ರವೊಂದು ನಿಸ್ಸಂದೇಹವಾಗಿ ಇದ್ದೇ ಇದೆ. ಇನ್ನು ನಮ್ಮ ಮುಂದಿರುವ ಹೊಣೆಯೆಂದರೆ, ಈ ಸೂತ್ರವನ್ನು ಶೋಧಿಸಿ ತೆಗೆಯುವುದು ಹಾಗೂ ಅದನ್ನು ನಿರಂತರವಾಗಿ ಪ್ರತಿರೋಧಿ-ಸುವುದು.

*       *       *

ವೈಜ್ಞಾನಿಕ ವಿಶ್ವಕಲ್ಪನೆಯ ಪ್ರಕಾರ, ವಿಜ್ಞಾನದಲ್ಲಿ ಪ್ರಜಾಪ್ರಭುತ್ವದ ಅವಶ್ಯಕತೆ ಇಲ್ಲ; ಏಕೆಂದರೆ ವಿಜ್ಞಾನವು ವ್ಯಕ್ತಿತ್ವ, ಇತಿಹಾಸ, ಕಾಲ ಇತ್ಯಾದಿ ಎಲ್ಲವನ್ನೂ ಉಚ್ಚಾಟಿಸಿಯಾಗಿದೆ, ಸಂಪೂರ್ಣ ವಸ್ತುನಿಷ್ಠತೆಯ ವಲಯವನ್ನು ಸ್ಥಾಪಿಸಿಯಾಗಿದೆ. ಆಧುನಿಕ ಅಸಹಿಷ್ಣುತೆಯ ಬೇರುಗಳು ಅಡಗಿರುವುದು ಇಲ್ಲಿಯೆ. ಪಾರಂಪರಿಕ ಜ್ಞಾನಮಾರ್ಗಗಳು ಸಹಜ ಅನುಭವವನ್ನು ಹೆಚ್ಚು ನೆಚ್ಚಿಕೊಂಡವಾದ್ದರಿಂದ ಅವು ಅನ್ಯ ದೃಷ್ಟಿಕೋನಗಳ ಬಗ್ಗೆ ಸಮಾನ ಗೌರವವನ್ನೂ ಸಹನೆಯನ್ನೂ ತೋರುತ್ತಿದ್ದವು. ತಮ್ಮ ಅನುಭವ ತಮಗೆ ಅನನ್ಯವಾದ್ದರಿಂದ ಅನ್ಯರ ಅನುಭವವೂ ಅವರಿಗೆ ಅನನ್ಯವಾಗಿರುತ್ತದೆ ಎನ್ನುವ ಮೂಲನಿಲುವನ್ನು ತಾಳಿದ್ದವು. ಇದಕ್ಕೆ ವಿರುದ್ಧವಾಗಿ, ಆಧುನಿಕ ವಿಜ್ಞಾನವು ಎಲ್ಲ ಸಹಜಘಟನೆಗಳ ಹಾಗೂ ವಸ್ತುವ್ಯಾಪಾರಗಳ ಅನನ್ಯತೆಯನ್ನು ತೊಡೆದುಹಾಕಿ ಅವುಗಳನ್ನು ಸಾಮಾನ್ಯತೆಯ ಮಟ್ಟಕ್ಕೆ ಇಳಿಸಲು ಪ್ರಯತ್ನಿಸುತ್ತದೆ; ಮೂರ್ತ ಅನುಭವಗಳನ್ನು ಅಮೂರ್ತೀಕರಿಸಲು ತೊಡಗಿ ಅವುಗಳ ಕಾಲಸ್ಥ-ದೇಶಸ್ಥ ಗುಣಗಳನ್ನು ನಾಶಮಾಡುತ್ತದೆ.

ಹೀಗೆ, ಅಮೂರ್ತೀಕರಣದ ಪ್ರಕ್ರಿಯೆಯ ಮುಖಾಂತರ ವಿಜ್ಞಾನವು ಎಲ್ಲ ವಿಷಯಗಳನ್ನು ಸಂವಹನ ಸಾಧ್ಯ ವಸ್ತುಗಳಾಗಿ ಮಾರ್ಪಡಿಸುತ್ತದೆ, ಕೆಲವು ನಿರ್ದಿಷ್ಟ ಭೌತಮಾಹಿತಿಗಳ ಸೀಮಿತರೂಪಕ್ಕೆ ಪರಿವರ್ತಿಸುತ್ತದೆ. ವಿಜ್ಞಾನ ಸರ್ವಾಧಿಕಾರವಾಗಿ ಬೆಳೆಯುವುದೂ ಇದೆ ಘಟ್ಟದಲ್ಲಿ. ತನ್ನ ಪರಿಕಲ್ಪನೆಯ ಜ್ಞಾನವೆ ಸರ್ವಶ್ರೇಷ್ಠ-ವಾದುದೆಂದೂ ತನ್ನ ಕಾಣ್ಕೆಯೆ ಪರಮಸತ್ಯವೆಂದೂ ವಾದಿಸುತ್ತ ಅದು ತನ್ನ ಚೌಕಟ್ಟಿಗೆ ಹೊಂದದ ಅನ್ಯ ಮಾರ್ಗಗಳೆಲ್ಲವನ್ನೂ ಅಜ್ಞಾನವೆಂದು ಗೇಲಿ ಮಾಡುತ್ತದೆ. ವಿಜ್ಞಾನದ ಜ್ಞಾನ ಯಾವುದೆ ಅನುಸಂಧಾನದ ಅಥವಾ ಪರಸ್ಪರ ವಿನಿಮಯದ ಮೂಲಕ ಹುಟ್ಟಿದ ಜ್ಞಾನವಲ್ಲ; ಅಲ್ಲಿ ವೈಯಕ್ತಿಕ ಯಾ ಸಾಮುದಾಯಿಕ ಆಯ್ಕೆಯ ಪ್ರಶ್ನೆಯೆ ಇಲ್ಲ; ಅದು ಚಿರಂತನವಾದುದು, ಮಾನವರನ್ನೂ ಇತಿಹಾಸವನ್ನೂ ಮೀರಿದ್ದು. ಈ ರೀತಿಯಲ್ಲಿ ವಿಜ್ಞಾನ, ಒಂದು ಅರ್ಥದಲ್ಲಿ ರಾಜಕೀಯರಹಿತವಾದ ಜ್ಞಾನಮಾರ್ಗ, ಅಂದರೆ ವ್ಯಕ್ತಿಸಾಪೇಕ್ಷಗಳನ್ನಾಗಲಿ ಇತಿಹಾಸ ವೈಶಿಷ್ಟ್ಯಗಳನ್ನಾಗಲಿ ಗಣನೆಗೆಯೆ ತೆಗೆದು-ಕೊಳ್ಳದಂಥ ಮಾರ್ಗ. ಈ ಕಾಲದಲ್ಲಿ ಧರ್ಮ, ಕಲೆಗಳ ಹೇಳಿಕೆಗಳನ್ನು ಪ್ರಶ್ನಿಸವುದು ವೈಚಾರಿಕತೆಯೆಂದೆನಿಸಿಕೊಂಡರೆ ವಿಜ್ಞಾನದ ಮೂಲಭೂತ ನಿಲುವುಗಳನ್ನು ಪ್ರಶ್ನಿಸುವುದು ಮಾತ್ರ ಅಜ್ಞಾನದ ಹಾಗೂ ಅತರ್ಕದ ಪರಮಾವಧಿ, ಅಷ್ಟೆ ಅಲ್ಲ, ಮಾನಸಿಕ ಅಸ್ವಾಸ್ಥ್ಯದ ಲಕ್ಷಣವೆಂದೆನಿಸಿಕೊಂಡಿದೆ. ಇದುವೆ ಆಧುನಿಕ ವಿಜ್ಞಾನ ತನ್ನ ಸರ್ವಾಧಿಪತ್ಯವನ್ನು ಸ್ಥಾಪಿಸಿಕೊಂಡಿರುವ ಕ್ರಮ, ಅದರ ಮೂಲಭೂತ ಪ್ರಜಾಪ್ರಭುತ್ವ-ವಿರೋಧಿ ಸ್ವರೂಪದ ಕರಾಳ ಕುರುಹು. ತಾನು ಸಂಪೂರ್ಣವಾಗಿ ರಾಜಕೀಯಾತೀತ ಎಂದು ಬೀಗುವ ಇದೆ ವಿಜ್ಞಾನ ಸ್ವತಃ ತಾನೂ ಇನ್ನೊಂದು ಬಗೆಯ ರಾಜಕೀಯವನ್ನು ನಡೆಸುತ್ತಿರುತ್ತದೆ: ತನ್ನ ಜ್ಞಾನವನ್ನು ಕೆಲವೆ ತಜ್ಞರ ಖಾಸಗಿ ಸ್ವತ್ತಾಗಿಸಿ ಉಳಿದೆಲ್ಲರೂ ಅವರ ಅಡಿಯಾಳುಗಳಾಗಿರುವಂತೆ ಮಾಡುತ್ತದೆ; ಅಜ್ಞರ ಜೀವನಾನುಭವಕ್ಕಿಂತ ತಜ್ಞರ ಶೂನ್ಯಾನುಭವವೆ ಹೆಚ್ಚು ಸತ್ವಯುತವಾದುದು ಎಂದು ಘೋಷಿಸುತ್ತದೆ.

ಮಧ್ಯಯುಗೀನ ಮಾನವ ಆಧುನಿಕ ಮಾನವನಾಗಿ ಮಾರ್ಪಾಟುಗೊಂಡ ಕ್ರಮದ ಸ್ವರೂಪ ಈಗ ನಿಚ್ಚಳವಾಗಿ ಕಾಣುತ್ತಿದೆ: ಈ ಪಲ್ಲಟ ಪ್ರಕ್ರಿಯೆಯ ನೇತಾರನಾದ ಪಾಶ್ಚಿಮಾತ್ಯ ಸಮಾಜ ತನ್ನ ಮೊದಲಿನ ಅಸ್ತಿವಾರವಾದ ಪ್ರಕೃತಿಯನ್ನು ಬಿಟ್ಟುಕೊಟ್ಟು ಯಂತ್ರದ ಬುನಾದಿಯ ಮೇಲೆ ತನ್ನನ್ನು ಕಟ್ಟಿಕೊಂಡಿತು; ನಿಸರ್ಗತತ್ವಗಳನ್ನು ತ್ಯಜಿಸಿ ಆಧುನಿಕ ವಿಜ್ಞಾನತತ್ವಗಳನ್ನು ಆರಿಸಿಕೊಂಡಿತು. ಆದರೆ ಕೆಲವೊಮ್ಮೆ 'ವಿಜ್ಞಾನವು ಪ್ರಕೃತಿವಿರೋಧಿಯಲ್ಲ, ಅದು ಪ್ರಕೃತಿ ವ್ಯವಸ್ಥೆಯ ವ್ಯಾಖ್ಯಾನ ಮಾತ್ರ, ಅದರ ಅನುಕರಣೆ ಮಾತ್ರ' ಎಂದು ಕೆಲವರು ವಾದಿಸುವುದುಂಟು. ಇದೊಂದು ಮಿಥ್ಯವಾದ. ಪ್ರಕೃತಿಯೂ ಒಂದು ಅಗಾಧ ಯಂತ್ರ, ಒಂದು ಅಸಾಧಾರಣ ಮೇಧಾಶಕ್ತಿ ಸರಿ. ಅದುವೆ



ಸರ್ವಪ್ರಥಮ ಯಂತ್ರವ್ಯವಸ್ಥೆ, ಸರ್ವಪ್ರಥಮ ವಿಜ್ಞಾನಿ, ಸರಿ. ಆದರೆ ತನ್ನ ಕೋಟಿಕೋಟಿ ವರ್ಷಗಳ ಇತಿಹಾಸದಲ್ಲಿ, ಸಂಕೀರ್ಣಾತಿಸಂಕೀರ್ಣ ಕ್ರಿಯಾವಳಿಗಳಲ್ಲಿ ಅದು ಒಮ್ಮೆಯೂ ಬೇಜವಾಬ್ದಾರಿಯಿಂದ ವರ್ತಿಸಿದ್ದಿಲ್ಲ. ತನ್ನ ಯಾವುದೆ ಸೃಷ್ಟಿ ಘಟಕವನ್ನು ಅದು ತನ್ನ ಸೃಷ್ಟಿಸಮಗ್ರದೊಡನೆ ಸಂಪೂರ್ಣವಾಗಿ ಬೆಸೆಯುತ್ತದೆ, ಸಮತೋಲನವನ್ನು ಕಾಪಾಡುತ್ತದೆ. ಆಧುನಿಕ ಮಾನವನ ಕೃತಕ ಸೃಷ್ಟಿಗಳಾದರೊ ಅಂಥ ಸಮಗ್ರ ಸಮತೋಲವನ್ನು ನಾಶ ಮಾಡುತ್ತವೆ, ಪರಿಸರದ ನರನಾಡಿಗಳಲ್ಲಿ ಹುಣ್ಣುಗಳಾಗಿ ಬೆಳೆದು ಅದರ ಜೀವ ಹೀರುತ್ತವೆ.

ಈ ಕಥೆ ಇಲ್ಲಿಗೆಯೆ ನಿಲ್ಲುವಂಥದಲ್ಲ. ಇದರ ಮುಂದಿನ ಘಟ್ಟ ಇನ್ನೂ ಗಂಭೀರ ಸ್ವರೂಪದ್ದು. ವಿಜ್ಞಾನ/ಯಂತ್ರಗಳನ್ನು ಜೀವಾಳವಾಗಿಸಿಕೊಂಡ ಇಂಥದೊಂದು ನಾಗರಿಕತೆ ಜಗದ ಬೇರೆಲ್ಲ ನಾಗರಿಕತೆಗಳನ್ನೂ ತನ್ನ ಕೈವಶ ಮಾಡಿಕೊಳ್ಳಲು ಹವಣಿಸುತ್ತದೆ, ಪ್ರಕೃತಿಯೊಡನೆ ಅವು ಹೊಂದಿರುವ ಕರುಳಬಳ್ಳಿಯನ್ನು ಕೊಯ್ದು ತುಂಡರಿಸಲು ತವಕಿಸುತ್ತದೆ.

ಹೀಗೆ ಅನ್ಯಜೀವರೂಪಗಳನ್ನು ತನ್ನ ಜ್ಞಾನಾರ್ಜನೆಯ ಪ್ರಯೋಗದ ವಸ್ತುಗಳಾಗಿ ಬಳಸಿಕೊಳ್ಳಲೆಳಸುವ ವಸಾಹತುಶಾಹಿ ಮನೋಭಾವ ಜೀವನದ ವಿವಿಧ ಕ್ಷೇತ್ರಗಳನ್ನು ವ್ಯಾಪಿಸುತ್ತದೆ. ಆಧುನಿಕ ವಿಜ್ಞಾನವು ತನ್ನ ಪರಮಗುರಿಯಾದ ಜ್ಞಾನಸಂಪಾದನೆಯಲ್ಲಿ ತನಗೆ ಪರಮಾಧಿಕಾರ ಪರಮಸ್ವಾತಂತ್ರ್ಯಗಳನ್ನು ನೀಡಬೇಕೆಂದು ಹಠಹಿಡಿದು ಕೇಳುತ್ತದೆ. ಆ ದಾರಿಯಲ್ಲಿ ಅದಕ್ಕೆ ಸಾಮಾಜಿಕ ರಾಜಕೀಯ ಆಯಾಮದ ಪ್ರಶ್ನೆಗಳಾವುವೂ ಮುಖ್ಯವಲ್ಲ. ಇಂಥ ಭಾವಮೌಲ್ಯರಹಿತ ವಿಧಾನದ ಅತ್ಯಂತ ಕ್ರೂರ ರೂಪಗಳಲ್ಲಿ ಒಂದು – ಪ್ರಾಣಿಗಳ ಜೀವ-ದೇಹ-ಭೇದನ. ತನ್ನ ಜ್ಞಾನದಾಹದ ನೆಪದಲ್ಲಿ ಆಧುನಿಕ ವಿಜ್ಞಾನ ಕೋಟಿಗಟ್ಟಲೆ ಪ್ರಾಣಿಗಳನ್ನು ಬಲಿ ತೆಗೆದುಕೊಳ್ಳುತ್ತದೆ. ಆದರೆ, ಪೀಟರ್ ಸಿಂಗರ್ ಹೇಳಿದಂತೆ, ಒಂದು ಪಕ್ಷ ಆ ಪ್ರಾಣಿ ನಮ್ಮನ್ನು ಹೋಲುವಂಥದು ಎಂದಾದಲ್ಲಿ ನಾವು ಅದನ್ನು ಪ್ರಯೋಗಪಶುವನ್ನಾಗಿಸಿ ಹಿಂಸಿಸಬಾರದು, ಏಕೆಂದರೆ ಅದು ನಮ್ಮ ಸಹಜೀವಿಯನ್ನು ಹಿಂಸಿಸಿದಂತಾಗುವುದು; ಇಲ್ಲ, ಆ ಪ್ರಾಣಿ ನಮ್ಮನ್ನು ಹೋಲುವಂಥದಲ್ಲ ಎಂದಾದಲ್ಲಿಯೂ ಅದನ್ನು ಪ್ರಯೋಗಕ್ಕೆಂದು ಬಳಸಿ ಕೊಳ್ಳಬಾರದು, ಏಕೆಂದರೆ ಆಗ ಅಂಥ ಪ್ರಯೋಗದ ಫಲಗಳು ಆ ಪ್ರಾಣಿಯ ಮಟ್ಟಿಗೆ ನಿಜವಾದರೂ ಮಾನವನ ವಿಷಯದಲ್ಲಿ ಸುಳ್ಳಾಗುತ್ತವೆ. ಹೀಗೆ ಇಂಥ ಪ್ರಯೋಗ ಒಂದೆಡೆ ಅನೈತಿಕ, ಇನ್ನೊಂದೆಡೆ ನಿಷ್ಪ್ರಯೋಜಕ.

ವಾಸ್ತವ ಹೀಗಿರುವಾಗ್ಯೂ ಪ್ರಸ್ತುತ ಪ್ರಪಂಚದ ಮೂಲೆಮೂಲೆಗಳಲ್ಲಿ ಪ್ರತಿನಿತ್ಯ ಲಕ್ಷೋಪಲಕ್ಷ ಪ್ರಾಣಿಗಳು ಆಧುನಿಕ ವಿಜ್ಞಾನದ ಬಲಿಪೀಠದಲ್ಲಿ ಬಲಿಯಾಗಿ ಬೀಳುತ್ತವೆ.

ಪ್ರಯೋಗ ಪಶುಗಳಲ್ಲಿ ಕೆಲವು ಪ್ರಥಮ ಹಂತದಲ್ಲಿಯೆ ಪ್ರಾಣ ಕಳೆದುಕೊಂಡರೆ, ಅಷ್ಟು ಭಾಗ್ಯಶಾಲಿಗಳಲ್ಲದ ಉಳಿದವು ಜೀವಂತ ನರಕದಲ್ಲಿ ಬಿದ್ದು ವಿವಿಧ ರೀತಿಯ ಅಸಹ್ಯ ಅಸಹನೀಯ ಗೋಳಿನಲ್ಲಿ ನರಳಾಡುತ್ತವೆ. ಹೀಗೆ ಆಜೀವ ಮನೋ-ದೈಹಿಕ ವಿಕಲತೆಗೆ ಗುರಿಯಾಗಿ ಉಳಿದುಕೊಂಡ ಪ್ರಾಣಿಗಳನ್ನು ಅಂತಿಮವಾಗಿ ಪ್ರಯೋಗ ಮುಗಿದ ನಂತರ ವಿಜ್ಞಾನಿಗಳೆ ಕೊಲ್ಲುತ್ತಾರೆ — ಏಕೆಂದರೆ 'ಇನ್ನು ಹೇಗೂ ಆ ಪ್ರಾಣಿಗಳು ಬದುಕಿಯೂ ಪ್ರಯೋಜನವಿಲ್ಲ.'

ಹೀಗೆ ಪಶುಗಳನ್ನು ಪ್ರಯೋಗವಸ್ತುಗಳಾಗಿ ಬಳಸುವ ಆಧುನಿಕ ವಿಜ್ಞಾನಕ್ಕೂ ಯಹೂದಿಗಳನ್ನು ಪ್ರಯೋಗಪಶುಗಳನ್ನಾಗಿ ಬಳಸಿಕೊಂಡ ನಾಝಿ ವಿಜ್ಞಾನಕ್ಕೂ ಏನಾದರೂ ಹೋಲಿಕೆಯುಂಟೆ? ನಿಸ್ಸಂದೇಹವಾಗಿ ಉಂಟು. ನಾಝಿವಾದ ಜಾತಿಭೇದನೀತಿಯನ್ನು ಅನುಸರಿಸಿದಂತೆ ಆಧುನಿಕ ವಿಜ್ಞಾನ ಜೀವಿಭೇದನೀತಿಯನ್ನು ಅನುಸರಿಸುತ್ತಿದೆ. ಅಂದು ಹಿಟ್ಲರ್‌ನ ವಿಜ್ಞಾನಿಗಳು ಸಾವಿರಗಟ್ಟಲೆ ಯಹೂದಿಗಳನ್ನು ಚಿತ್ರವಿಚಿತ್ರ ಹಿಂಸೆಗೆ ಒಳಪಡಿಸುತ್ತ, ಅವರ ಮರಣರೋದನ ಕೇಳಿಸುತ್ತಿದ್ದರೂ ಕೇಳಿಸದಂತೆ, ಅವರ ನೋವಿನ ವಿವಿಧ ಸ್ತರ-ರೂಪಗಳನ್ನು ಅತ್ಯಾಧುನಿಕ ಯಂತ್ರೋಪಕರಣಗಳ ಮೂಲಕ ಅಳೆಯುತ್ತ ದಾಖಲಿಸುತ್ತ, ಆ ನೋವನ್ನು ನಿರ್ಲಿಪ್ತವಾಗಿ ಗಂಭೀರವಾಗಿ ಚರ್ಚಿಸುತ್ತ ವ್ಯಾಖ್ಯಾನಿಸುತ್ತಿದ್ದ ರೀತಿಗೂ ಇಂದಿನ ಎಲ್ಲ ದೇಶಗಳ ವಿಜ್ಞಾನಿಗಳು ಪ್ರಾಣಿಗಳನ್ನು ನಡೆಸಿಕೊಳ್ಳುವ ರೀತಿಗೂ ಮೂಲಭೂತವಾಗಿ ಯಾವ ವ್ಯತ್ಯಾಸವೂ ಇಲ್ಲ.

ಇದೆ 'ವಸ್ತುನಿಷ್ಠ ವೈಜ್ಞಾನಿಕತೆ'ಯನ್ನು ಜಪಾನಿನ ಮೇಲೆ ನಡೆದ ಅಣ್ವಸ್ತ್ರ ಪ್ರಯೋಗಗಳಲ್ಲಿಯೂ ಗುರುತಿಸಬಹುದು. ಅಲ್ಲಿ ನಾಗಸಾಕಿಯ ಮೇಲೆ ಹಾಕಿದ್ದು ಪ್ಲುಟೋನಿಯಮ್ ಬಾಂಬಾಗಿತ್ತು, ಅದನ್ನು ಆ ಮೊದಲೆ ಅಮೆರಿಕೆಯ ಅಲಾಮೊ ಗಾರ್ಡೊನಲ್ಲಿ ಪರೀಕ್ಷಿಸಲಾಗಿದ್ದು ಈಗ ನಾಗಸಾಕಿಯ ಮೇಲೆ ಅಸ್ತ್ರವಾಗಿ ಪ್ರಯೋಗಿಸ ಲಾಯಿತು. ಇದಕ್ಕೆ ವ್ಯತಿರಿಕ್ತವಾಗಿ, ಹಿರೋಶಿಮಾದ ಮೇಲೆ ಹಾಕಿದ ಯುರೇನಿಯಮ್ ಬಾಂಬ್‌ನ ಪ್ರಥಮ ಪರೀಕ್ಷೆಯಾದದ್ದು ಹಿರೋಶಿಮಾದಲ್ಲಿಯೆ ಆಗಿತ್ತು. ಅದು ಅಸ್ತ್ರ ಪ್ರಯೋಗವೂ ಆಗಿತ್ತು, ಪರೀಕ್ಷಾ ಪ್ರಯೋಗವೂ ಆಗಿತ್ತು. ಹೀಗೆ ಹಿಟ್ಲರ್ ಹಾಗೂ ಹಿರೋಶಿಮಾ ಒಂದೇ ನಾಣ್ಯದ ಎರಡು ಮುಖಗಳಾಗಿರುವಂಥವು. ಒಂದೆಡೆ, ಹಿಟ್ಲರ್ ಯಹೂದಿಗಳ ಮೇಲೆ ನಡೆಸಿದಂಥ 'ಮಹಾಪ್ರಯೋಗ'ವನ್ನು ಅಮೆರಿಕಾ ಹಿರೋಶಿಮಾದ ನಿಷ್ಪಾಪಿ ಜನರಾಶಿಯ ಮೇಲೆ ನಡೆಸಿತು. ಇವೆರಡೂ ಮಹಾ ಪ್ರಯೋಗಗಳೂ ನಡೆದದ್ದು ಆಧುನಿಕ ವಿಜ್ಞಾನದ ಹೆಸರಿನಲ್ಲಿ, ಬಲದಲ್ಲಿ, ಹಾಗೂ ಕ್ರೌರ್ಯದಲ್ಲಿ; ಆಧುನಿಕ ನಾಗರಿಕತೆಯ ಲಾಂಛನದಡಿಯಲ್ಲಿ.



ಇಂಥ 'ಅತಿಮತಿಯ ಮತಿಹೀನತೆ'ಯನ್ನು ಬಹು ಹಿಂದೆಯೆ ಅರಿತುಕೊಂಡ ಎಂ.ಕೆ. ಗಾಂಧಿಯ ಕೃತಿ 'ಹಿಂದ್ ಸ್ವರಾಜ್' ವಿಜ್ಞಾನ-ತಂತ್ರಜ್ಞಾನಗಳ ತಳಹದಿಯ ಮೇಲೆ ಬೆಳೆದುನಿಂತ ಆಧುನಿಕ ನಾಗರಿಕತೆಯ ಆತ್ಮವಿನಾಶಕ ಸ್ವರೂಪವನ್ನು ಕಾಲಜ್ಞಾನಿಯ ನಿಶಿತ ದೃಷ್ಟಿಯ ಮೂಲಕ ಭೇದಿಸಿ ಬಯಲು ಮಾಡುತ್ತದೆ. ಇದೆ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಲೂಯಿಸ್ ಮಮ್‌ಫರ್ಡ್‌ನಂಥ ಪಾಶ್ಚಿಮಾತ್ಯರೂ ಮಸನೊಬು ಫುಕುವೋಕಾನಂಥ ಪೌರ್ವಾತ್ಯರೂ ಆಧುನಿಕ ವಿಜ್ಞಾನದ ಸುಸಂಬದ್ಧತೆಯ ಮುಖವಾಡದ ಹಿಂದಡಗಿರುವ ಅಸಂಬದ್ಧತೆಯನ್ನು ವಿವಿಧ ರೀತಿಗಳಲ್ಲಿ ಬಹಿರಂಗಪಡಿಸುತ್ತಾರೆ.

ಇಂಥ ತೀಕ್ಷ್ಣ ತಲಸ್ಪರ್ಶಿ ವಿಮರ್ಶೆಯಿಂದ ವಿಚಲಿತರಾದ ಕೆಲವು ವಿಜ್ಞಾನನಿಷ್ಠರು ವಿಜ್ಞಾನದ ಸ್ವರೂಪದಲ್ಲಿ ಸುಧಾರಣೆಗಳನ್ನು ತರುವ ಯತ್ನಗಳನ್ನು ನಡೆಸಿದ್ದಾರೆ ನಿಜ. ಆದರೆ ಇವೆಲ್ಲ ಕೇವಲ ಮೇಲ್ಪದರಕ್ಕೆ ಸಂಬಂಧಿಸಿದಂಥವಾಗಿವೆ. ಕೆಲವರು ಪಾಶ್ಚಾತ್ಯ ವಿಜ್ಞಾನವನ್ನೂ ಪೌರ್ವಾತ್ಯ ಆಧ್ಯಾತ್ಮವನ್ನೂ ಬೆಸೆಯುವ ಮಹತ್ವಾಕಾಂಕ್ಷಿ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಇಂಥ ಪ್ರಯತ್ನ, ಪಾಶ್ಚಾತ್ಯ ವಿಜ್ಞಾನವನ್ನು ಶ್ರೀಮಂತಗೊಳಿದೆಯೊ ಇಲ್ಲವೊ ತಿಳಿಯದು. ಆದರೆ ಅದು ಪೌರ್ವಾತ್ಯ ಆಧ್ಯಾತ್ಮವನ್ನು ಅಗ್ಗಗೊಳಿಸಿರುವುದಂತೂ ನಿಜ. (ಮುಂದುವರಿಯುವುದು)

**(ಸಂಗ್ರಹಾನುವಾದ - ಜಶವಂತ ಜಾಧವ)**

## ಗಿಡಮೂಲಿಕಾ ವೈದ್ಯ ಶಿಬಿರ - ೩

ಗ್ರಾಮಾಂತರ ಸಮುದಾಯ ವಿಜ್ಞಾನಕೇಂದ್ರ, ಹಾಗೂ ನೀನಾಸಮ್ ಸಹಯೋಗ ದೊಂದಿಗೆ ನಡೆಸುತ್ತ ಬಂದಿರುವ ಗಿಡಮೂಲಿಕಾವೈದ್ಯತರಬೇತಿ ಶಿಬಿರದ ಮೂರನೆಯ ಹಂತವು ಇದೇ ಜೂನ್ ೧ ರಿಂದ ೪ರ ವರೆಗೆ ಹೆಗ್ಗೋಡಿನಲ್ಲಿ ನಡೆಯಿತು. ಶ್ರೀ ವೆಂಕಟ್ರಾಮ ದೈತೋಟ ಹಾಗೂ ಡಾ. ಪತಂಜಲಿ ಕೆ.ವಿ. ಅವರು ಶಿಬಿರದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಈ ಬಾರಿ ೩೨ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರದ ಅವಧಿಯಲ್ಲಿ ಪ್ರತಿದಿನ ಸಂಜೆ ಆರೋಗ್ಯತಪಾಸಣೆಯ ಪ್ರಾಯೋಗಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಲಾಗಿತ್ತು. ಸುಮಾರು ೨೦ ಮಂದಿ ರೋಗಿಗಳನ್ನು ಪರೀಕ್ಷಿಸುವ ರೋಗ ಲಕ್ಷಣಗಳನ್ನು ಗುರುತಿಸುವ-ಹಾಗೂ ಚಿಕಿತ್ಸಾ ವಿಧಾನ ಔಷಧೋಪಚಾರ ಗಳನ್ನು ಸೂಚಿಸುವ ಬಗೆಗೆ ಕೂಡಾ ಶಿಬಿರಾರ್ಥಿಗಳಿಗೆ ತಿಳುವಳಿಕೆ ನೀಡಲಾಯಿತು. ಕೊನೆಯ ದಿವಸ ಸಕ್ಕರೆಬೈಲಿನ 'ಸಸ್ಯ ಸಂಜೀವಿನಿ ಕ್ಷೇತ್ರ'ಕ್ಕೆ ಭೇಟಿಕೊಟ್ಟು ಗಿಡಮೂಲಿಕೆಗಳನ್ನು ಪರಿಚಯಿಸಲಾಯಿತು.

# ಐತಿಹ್ಯಮಾಲೆಯ ಕಥೆಗಳು

ಮಲೆಯಾಳಂ ಮೂಲ: ಕೊಟ್ಟಾರತ್ತಿಲ್ ಶಂಕುಣ್ಣಿ
ಅನುವಾದ: ಬಿ.ಆರ್. ವೆಂಕಟರಮಣ ಐತಾಳ

## ಪಾಕ್ಕನಾರ್ ಪತ್ನಿಯ ಪಾತಿವ್ರತ್ಯ

ಬ್ರಾಹ್ಮಣೋತ್ತಮನಾದ ವರರುಚಿಗೆ ಒಬ್ಬಾಕೆ ಪರಯಿಯಲ್ಲಿ ಹನ್ನೆರಡು ಮಂದಿ ಮಕ್ಕಳು ಜನಿಸಿ ಅವರು ಕೇರಳ ಕುಲಪ್ರವರ್ತಕರಾದ ಬಗೆ ಎಲ್ಲರಿಗೂ ತಿಳಿದ ವಿಷಯವಾಗಿದೆ. ಆ ಮಕ್ಕಳಲ್ಲಿ ಅಗ್ನಿಹೋತ್ರಿಗಳಿಂದ ಮೊದಲಾಗಿ ಪಂಚಮರ ವರೆಗೆ ವಿವಿಧ ಕುಲವೃತ್ತಿಗಳನ್ನು ಅನುಸರಿಸಿಕೊಂಡು ಬಂದವರಿದ್ದಾರೆ. ಅವರಲ್ಲಿ ವಾಯಿಲ್ಲಾಕ್ಕುನ್ನಿಲಪ್ಪನನ್ನು ಹೊರತುಪಡಿಸಿ ಉಳಿದ ಹನ್ನೊಂದು ಮಂದಿಯೂ ತಮ್ಮ ತಂದೆಯ ಶ್ರಾದ್ಧವನ್ನು ಮಾತ್ರ ಎಲ್ಲರೂ ಸೇರಿ ಅಗ್ನಿಹೋತ್ರಿಯ ಮನೆಯಲ್ಲೇ ಆಚರಿಸುವುದು ಪದ್ಧತಿ. ಹೀಗೆ ಒಮ್ಮೆ, ತಂದೆಯ ಶ್ರಾದ್ಧ ಮುಗಿಸಿದ ನಂತರ ಹನ್ನೊಂದು ಮಂದಿಯೂ ಒಂದೆಡೆ ಊಟಕ್ಕೆ ಕುಳಿತರು. ಆಗ ಅಗ್ನಿಹೋತ್ರಿಯ ಪತ್ನಿಯು ಸ್ವಲ್ಪ ಸಂಕೋಚಪಟ್ಟು ಬಡಿಸುವುದಕ್ಕೆ ಬರಲಿಲ್ಲ. ನಂತರ ಅಗ್ನಿಹೋತ್ರಿಯೇ ಸ್ವತಃ ಕರೆದು ಬಡಿಸುವಂತೆ ಒತ್ತಾಯಪಡಿಸಿದಾಗ ಅನಿವಾರ್ಯವಾಗಿ ಆಕೆ ಬಡಿಸಲು ಬರಬೇಕಾಯಿತು. ಬಂದರೂ, ಒಂದು ಕಿರುಕೊಡೆಯನ್ನು ಅಡ್ಡಹಿಡಿದುಕೊಂಡೇ ಬಂದಿದ್ದಳು. ಅದನ್ನು ನೋಡಿದ ಪಾಕ್ಕನಾರ್ ಹಾಗೇಕೆ ಎಂದು ಕೇಳಿದನು. ಅದು ಪತಿವ್ರತೆಯರ ಧರ್ಮವೆಂದು ಅಗ್ನಿಹೋತ್ರಿಯೇ ಉತ್ತರಿಸಬೇಕಾಯಿತು. ಪತಿವ್ರತಾಸ್ತ್ರೀಯರು ಪರಪುರುಷರನ್ನು ಕಾಣುವಂತಿಲ್ಲವೆಂದು ಶಾಸ್ತ್ರವಾಕ್ಯಗಳನ್ನೂ ಉದಾಹರಿಸಿದ್ದಾಯಿತು. ಅದಕ್ಕೆ ಪ್ರತಿಯಾಗಿ ಪಾಕ್ಕನಾರು, ''ಇದೊಂದೂ ಪತಿವ್ರತಾಧರ್ಮವಲ್ಲ. ಬ್ರಾಹ್ಮಣಸ್ತ್ರೀಯರಿಗೆ ಅದೇನೆಂದು ಗೊತ್ತಿಲ್ಲ. ಪತಿವ್ರತಾಧರ್ಮವೋ ಪಾತಿವ್ರತ್ಯವೋ ಇರುವುದು ಕೊಡೆಯಲ್ಲಾಗಲೀ ಮರೆಯಲ್ಲಾಗಲೀ ಅಲ್ಲ. ವರ್ತಮಾನಕಾಲದಲ್ಲಿ ಪತಿವ್ರತಾಧರ್ಮವನ್ನು ಸರಿಯಾಗಿ ಅರಿತು ಅನುಷ್ಠಿಸುವಂಥವರು ನಾನು ಕೈಹಿಡಿದ ಹೆಣ್ಣಿನ ಹೊರತು ಬೇರೆ ಯಾರೂ ಇಲ್ಲ'' ಎಂದು ಖಚಿತವಾಗಿ ಹೇಳಿಬಿಟ್ಟನು. ಸ್ವಲ್ಪ ಖತಿಗೊಂಡ ಅಗ್ನಿಯೋತ್ರಿಯು, ''ಚಂಡಾಲರಿಗೆ ಎಂದಾದರೂ ಪಾತಿವ್ರತ್ಯವಾಗಲಿ ಪತಿವ್ರತಾಧರ್ಮದ ಜ್ಞಾನವಾಗಲಿ ಇರುವುದು ಸಾಧ್ಯವೆ? ಪಾಕ್ಕನಾರ್‌ನ ಮಾತು ಶುದ್ಧ



ಅಸಂಬದ್ಧ'' ಎಂದು ಉತ್ತರಿಸಿದನು. ಅನಂತರ ಅವರಿಬ್ಬರಲ್ಲೂ ಪತಿವ್ರತಾಧರ್ಮದ ಕುರಿತು ಬಹಳ ವಾದವಿವಾದಗಳು ನಡೆದವು. ಕೊನೆಯಲ್ಲಿ, ಅಗ್ನಿಹೋತ್ರಿಯ ಧರ್ಮಪತ್ನಿ ಅಥವಾ ಪಾಕ್ಕನಾರ್ ಕೈಹಿಡಿದವಳು ಇವರಲ್ಲಿ ಪತಿವ್ರತಾಧರ್ಮದ ನಿಜವಾದ ಜ್ಞಾನ ಯಾರಲ್ಲಿ ನೆಲೆಗೊಂಡಿದೆ ಎಂದು ವ್ಯಕ್ತವಾಗಿ ತಿಳಿಯಬೇಕಾದಂತಹ ಪ್ರಮೇಯ ಎದುರಾಯಿತು. ಅದಕ್ಕಾಗಿ, ಪಾಕ್ಕನಾರು ಅಗ್ನಿಹೋತ್ರಿಯನ್ನು ತನ್ನ ಮನೆಗೆ ಕರೆದುಕೊಂಡು ಹೊರಟನು.

ಮನೆ ತಲುಪಿದೊಡನೆಯೇ ಪಾಕ್ಕನಾರ್ ತನ್ನ ಹೆಂಡತಿಯನ್ನು ಕರೆದು, ಮನೆಯಲ್ಲಿ ಭತ್ತ ಎಷ್ಟಿದೆಯೆಂದು ವಿಚಾರಿಸಿದನು. ''ಐದುಸೇರು ಮಾತ್ರ ಇದೆ''ಯೆಂದು ಅವಳು ಉತ್ತರಿಸಿದಳು. ಅದರಲ್ಲಿ ಅರ್ಧಾಂಶ ಪೂರ್ತಿ ಅಕ್ಕಿಮಾಡಿ ಅನ್ನ ಬೇಯಿಸಿಕೊಂಡು ಬರಲು ತಿಳಿಸಿದನು. ಆಕೆ ಕೂಡಲೇ ಭತ್ತಕುಟ್ಟಿ ಅಕ್ಕಿ ತೊಳೆದು ಅನ್ನಮಾಡಿಕೊಂಡು ಬಂದಳು. ಗಂಡ, ಆ ಅನ್ನವನ್ನು ಎಂಜಲುಕುಪ್ಪೆಯಲ್ಲಿ ಕಳೆದು ಬಿಸುಟು, ಉಳಿದ ಅರ್ಧಾಂಶ ನೆಲ್ಲನ್ನೂ ಅಕ್ಕಿಯಾಗಿಸಿ ಅನ್ನ ಬೇಯಿಸಿ ತರಲು ಹೇಳಿದನು. ಆಕೆ ಒಂದೂ ಮಾತಾಡದೆ ಸಮ್ಮತಿಸಿ ಮಾಡಿದ ಅನ್ನವನ್ನು ತೊಟ್ಟಿಯಲ್ಲಿ ಎಸೆದು, ಒಳಹೋಗಿ ಉಳಿದರ್ಧಾಂಶ ಭತ್ತವನ್ನು ಕುಟ್ಟಿ ಅಕ್ಕಿ ತೊಳೆದು ಅನ್ನ ಮಾಡಿಕೊಂಡು ಬಂದು, ಗಂಡನ ಹೇಳಿಕೆಯಂತೆ ಇನ್ನೊಂದು ತೊಟ್ಟಿಯಲ್ಲಿ ಹಾಕಿ ಕಳೆದುಬಿಟ್ಟಳು. ನಿಜಸ್ಥಿತಿ ಏನಾಗಿತ್ತೆಂದರೆ, ಅವರದು ತೀರಾ ಬಡ ಕುಟುಂಬ. ಕಷ್ಟದ ಬದುಕು. ಆ ಹೊತ್ತು ಮನೆಯಲ್ಲಿ ಅವಳೆಂದಂತೆ ಐದು ಸೇರು ಭತ್ತವಲ್ಲದೆ ಬೇರೆ ಏನೂ ಇದ್ದಿರಲಿಲ್ಲ. ಅದು ಪೂರ್ತಿ ಖಾಲಿಯಾದರೆ ಮುಂದೆ ಉಪವಾಸವೇ ಗತಿ. ಅವಳ ಅವತ್ತಿನ ಊಟವೂ ಮುಗಿದಿರಲಿಲ್ಲ. ಇವರಿಬ್ಬರು ಅಲ್ಲಿ ಬರುವಾಗ ಅವಳು ಆಗಷ್ಟೇ ಅದರಲ್ಲೇ ಸ್ವಲ್ಪ ಭತ್ತ ಕುಟ್ಟಿ ಗಂಜಿ ಬೇಯಿಸಬೇಕೆಂದು ಯೋಚಿಸುತ್ತಿದ್ದಳು. ಈಗ ಗಂಡ ಒಬ್ಬ ಅತಿಥಿಯನ್ನು ಕರೆದುಕೊಂಡು ಬಂದು ಇರುವ ಅದಷ್ಟೂ ಭತ್ತವನ್ನು ಪೂರ್ಣ ಖಾಲಿಮಾಡುವಂತೆ ಹೇಳಿದರೂ ಆಕೆ ಪ್ರತಿಯಾಗಿ ಒಂದು ಮಾತು ಕೂಡ ಆಡದೆ, ಅಷ್ಟೇ ನೆಮ್ಮದಿಯಿಂದ ಹೇಳಿದಷ್ಟನ್ನು ಮಾಡಿ ಮುಗಿಸಿದ್ದಳು.

ಇಷ್ಟು ಮುಗಿದ ನಂತರ, ಇಬ್ಬರೂ ಅಲ್ಲಿಂದ ಹೊರಟು ತಿರುಗಿ ಅಗ್ನಿಹೋತ್ರಿಯ ಮನೆಗೆ ಬಂದರು. ಬಂದೊಡನೆ ಪಾಕ್ಕನಾರು ಅಗ್ನಿಹೋತ್ರಿಯೊಡನೆ, ''ನಾನು ಮಾಡಿಸಿದಂತೆ ನಿಮ್ಮ ಧರ್ಮಪತ್ನಿಯಿಂದಲೂ ಸ್ವಲ್ಪ ಕೆಲಸ ಮಾಡಿಸೋಣವಾಗಲಿ ನೋಡುವಾ'' ಎಂದು ಹೇಳಿದನು. ಕೂಡಲೇ ಅಗ್ನಿಹೋತ್ರಿಯು ತನ್ನ ಪತ್ನಿಯನ್ನು ಕರೆದು ಎರಡೂವರೆ ಸೇರು ಭತ್ತ ತುಳಿದು ಅಕ್ಕಿ ಮಾಡಿ ಅನ್ನ ಬೇಯಿಸಿ ತರಲು ಅಪ್ಪಣೆಮಾಡಿದನು. ಅದಕ್ಕೆ ಪತ್ನಿಯು, ''ಇಲ್ಲಿ ಸಿದ್ಧವಾದ ಅಕ್ಕಿಯೇ ಇದೆಯಲ್ಲ; ಮತ್ತೆ

ಭತ್ತ ಕುಟ್ಟಿ ಹೊಸದಾಗಿ ತಯಾರಿಸುವುದೇಕೆ?'' ಎಂದು ಕೇಳಿದಳು. ಅಗ್ನಿಹೋತ್ರಿಯು ಪುನಃ ನಿರ್ಬಂಧಿಸಿ ಆಜ್ಞಾಪಿಸಿದಾಗ ಆ ಪತಿವ್ರತೆಯು ಮುಖಮುರಿದು ಮೂತಿ ತಿರುವಿ ಸಿಡಿಮಿಡಿಗುಟ್ಟುತ್ತ ಒಳಸಾಗಿ ಹೇಳಿದ ಕೆಲಸ ಮುಗಿಸಿಕೊಂಡು ಬಂದಳು. ಅಗ್ನಿಹೋತ್ರಿಯು ಆ ಅನ್ನವನ್ನು ಎಂಜಲುಗುಪ್ಪೆಗೆ ಎಸೆದುಕಳೆಯಲು ಹೇಳಿದನು. ಕೂಡಲೆ ಆಕೆಯು ಛೀಕರಿಸುತ್ತ, ''ಏನಿದು ಚೇಷ್ಟೆ? ನಿಮಗೇನು ಹುಚ್ಚು ಹಿಡಿಯಿತೆ? ಇಷ್ಟು ಅನ್ನವನ್ನು ಸುಮ್ಮನೆ ಕಳೆಯುವುದೆ? ಅದೂ, ನಾನು ಇಷ್ಟೊಂದು ಕಷ್ಟಪಟ್ಟು ಭತ್ತ ತುಳಿದು ಅಕ್ಕಿ ತೆಗೆದು ಬೇಯಿಸಿದ್ದನ್ನು ತಂದು ಎಂಜಲುತೊಟ್ಟಿಗೆ ಎಸೆದು ಬರಿದೆ ಹಾಳುಮಾಡಬೇಕೆ? ತಲೆಗಿಲೆ ಕೆಟ್ಟಿದೆಯೇನು?'' ಎಂದು ಒಂದೇಸವನೆ ತನ್ನ ತರ್ಕದ ಕೂರ್ಗಣೆ ಎಸೆಯತೊಡಗಿದಳು. ಆದರೆ ಪತಿಯ ಕದಲದ ನಿರ್ಬಂಧವನ್ನು ಮುರಿಯಲಾರದೆ ಅನ್ನವನ್ನು ತೊಟ್ಟಿಯಲ್ಲಿ ಕಳೆಯಲೇ ಬೇಕಾಯಿತು. ಅಗ್ನಿಹೋತ್ರಿಯು ಪುನಃ ಮತ್ತೆ ಎರಡೂವರೆ ಸೇರು ಭತ್ತ ಕುಟ್ಟಿ ಅಕ್ಕಿ ತೆಗೆದು ಅನ್ನ ಮಾಡಿಕೊಂಡು ಬರಲು ಹೇಳಿದಾಗ ಆ ಧರ್ಮಪತ್ನಿಗೆ ತಡೆಯಲಾಗಲಿಲ್ಲ. ''ನಿಮಗೆ ತಲೆಕೆಟ್ಟಿರುವುದೇ ನಿಶ್ಚಯ. ನೀವು ಕುಟ್ಟುವ ತಾಳಕ್ಕೆ ತಕ್ಕಂತೆ ಕುಣಿಯಲು ನನಗೇನೂ ಭ್ರಾಂತಲ್ಲ. ಅಸಂಬದ್ಧ ಆಡುವುದಕ್ಕೂ ಒಂದು ಮಿತಿ ಇಲ್ಲವೆ?'' ಎಂದುಕೊಳ್ಳುತ್ತ ಆಕೆ ಒಳಗೆ ನಡೆದುಬಿಟ್ಟಳು. ಅಗ್ನಿಹೋತ್ರಿಯು ಎಷ್ಟೆಲ್ಲ ಕೂಗಿ ಕರೆದು ನಿರ್ಬಂಧಪಡಿಸಿದರೂ ಆಕೆ ಮತ್ತೆ ಹೊರಗೆ ಬರಲೇ ಇಲ್ಲ. ಆಗ ಪಾಕ್ಕನಾರು, ''ಓಹೋ! ಇದೋ ನಿಮ್ಮ ಪತಿವ್ರತಾಧರ್ಮ? ಪತಿಯಾದವನು ಏನೇ ಹೇಳಿದರೂ ಅದನ್ನು ಸಂತೋಷದಿಂದ ನೆರವೇರಿಸುವವಳು ಪತಿವ್ರತೆ. ಅಂತಹ ನಡವಳಿಕೆ ಪತಿವ್ರತಾಧರ್ಮ ಅನ್ನಿಸಿಕೊಳ್ಳುತ್ತದೆ. ಪತಿವಚನದ ಗುಣದೋಷಗಳನ್ನು ಅಳೆಯಲಾಗಲಿ ತರ್ಕ ಮಾಡಲಾಗಲಿ ಭಾರ್ಯೆಯರಿಗೆ ಅವಕಾಶವೂ ಅಧಿಕಾರವೂ ಇಲ್ಲ'' ಎಂದು ಅಗ್ನಿಹೋತ್ರಿಗೆ ಹೇಳಿ ತನ್ನ ಮನೆಗೆ ಹಿಂದಿರುಗಿದನು.

ಇಂದಿನ ಆಧುನಿಕ ವಿಚಾರಗಳ ಎಡೆಯಲ್ಲಿ ಈ ಐತಿಹ್ಯದ ಬಗೆಗೆ ಬಲವಾದ ಅಭಿಪ್ರಾಯ ಭೇದ ಉಂಟಾಗುವುದು ಸಹಜವೇ. ಗಂಡಂದಿರು ಹೇಳಿದ್ದೆಲ್ಲವನ್ನೂ ತರ್ಕ-ವಿತರ್ಕಗಳಿಂದ ಭಂಗಿಸಿ ಕಳೆದು ಮನಸೋ ಇಚ್ಛೆ ವ್ಯವಹರಿಸುವ ಹೆಂಗಸರಿದ್ದರೆ – ಅಂಥವರ ಸಂಖ್ಯೆಯೇನೂ ಕಡಿಮೆಯಿಲ್ಲವೆಂದು ಹೇಳುವುದನ್ನು ಕೇಳಿದ್ದೇನೆ – ಅಂಥವರಿಗೆ ಸಂಬಂಧಿಸಿದಂತೆ ಈ ಕಥೆಯ ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾಗಲಾರದು. ಆದರೆ, ಗಂಡಂದಿರಾದವರು ಗರ್ವದಿಂದಲೋ ಅಧಿಕಾರ ದಿಂದಲೊ ಮನಸ್ತಾಪದಿಂದಲೊ ಅಥವಾ ಪ್ರಮತ್ತತೆಯಿಂದಲೊ ಪತ್ನಿಯ ಮೇಲೆ ಅನ್ಯಾಯವಾಗಿ ಅಕಾರಣ ನಿರ್ಬಂಧಗಳನ್ನು ಹೇರಿ ಕ್ರಮವಿರೋಧವಾಗಿ ನಡೆದು



ಕೊಂಡರೆ ಅಂತಹ ಪತಿರಾಯರನ್ನು, ಗುಣದೋಷ ವಿಮರ್ಶೆ ಮಾಡಿ ತಿಳಿಹೇಳಿ, ಸರಿದಾರಿಗೆ ತರುವಂತಹ ಜವಾಬ್ದಾರಿಯೂ ಸ್ತ್ರೀಯರಿಗಿದೆ.

ಇರಲಿ, ನಮ್ಮ ಅಗ್ನಿಹೋತ್ರಿಗಳಿಗೆ ಪಾಕ್ಕನಾರ್ ಪತ್ನಿಯ ಪಾತಿವ್ರತ್ಯದ ಮಹಿಮೆ ಎಂಥಾದ್ದೆಂದು ತಿಳಿಯುವ ಅವಕಾಶ ಮತ್ತೊಮ್ಮೆ ಒದಗಿಬಂತು. ಒಮ್ಮೆ ಅಗ್ನಿಹೋತ್ರಿಯು ಪಾಕ್ಕನಾರಿನ ಗುಡಿಸಲಿಗೆ ಬಂದಾಗ ಪಾಕ್ಕನಾರ್ ಹೆಂಡತಿಯನ್ನು ಕರೆದು ಅವರಿಗೆ ಕುಳಿತುಕೊಳ್ಳಲು ಮಣೆ ಕೊಡುವಂತೆ ಹೇಳಿದನು. ಆಗ ಅವಳು ನೀರುತರಲು ಬಾವಿಕಟ್ಟೆಗೆ ಹೋಗಿದ್ದು, ಕೊಡವನ್ನು ಬಾವಿಯಲ್ಲಿ ಅರ್ಧಕ್ಕೆ ಇಳಿಸಿದ್ದಳಷ್ಟೆ. ಗಂಡನ ಮಾತು ಕೇಳಿದೊಡನೆಯೆ ಹಗ್ಗವನ್ನು ಅಷ್ಟಕ್ಕೇ ಬಿಟ್ಟು ಓಡಿಬಂದು ಅಗ್ನಿಹೋತ್ರಿಗೆ ಆಸನ ನೀಡಿ ಮಾತನಾಡಿಸಿದಳು. ಮತ್ತೆ ಅವಳು ಬಾವಿಕಟ್ಟೆಗೆ ಹೋಗುವವರೆಗೂ ಅರ್ಧಕ್ಕೆ ಬಿಟ್ಟಿದ್ದ ಹಗ್ಗ ಮತ್ತು ಕೊಡ ಹಾಗೆಯೇ ನಿಂತಿದ್ದುವು. ಅದನ್ನು ನೋಡಿ ಆಶ್ಚರ್ಯಪಟ್ಟ ಅಗ್ನಿಹೋತ್ರಿಯು ''ಪತಿವ್ರತೆ''ಯೆಂದರೆ ಹೀಗಿರಬೇಕು ಎಂದುಕೊಂಡು ಹಿಂದಿರುಗಿದನಂತೆ.

## ಶ್ರೀ ಕೃಷ್ಣಕರ್ಣಾಮೃತಂ

ಬಿಲ್ವಮಂಗಲದ ಒಬ್ಬ ನಂಬೂದಿರಿಯು ತನ್ನ ಮನೆಯಿಂದ ಎರಡು ಮೂರು ನಾಳಿಕ (ಮೈಲು) ದೂರದಲ್ಲಿರುವ ಅಂಬಲವಾಸಿ ಸ್ತ್ರೀ ಯೊಬ್ಬಳ ಜೊತೆ ಸಂಬಂಧವಿಟ್ಟು ಕೊಂಡಿದ್ದನು. ಈ ಹೆಂಡತಿಯಲ್ಲಿರುವ ಆಳವಾದ ಪ್ರೇಮದ ದೆಸೆಯಿಂದಾಗಿ ತಾನು ಎಲ್ಲಿಗೇ ಹೋಗಿರಲಿ ಎಂತಹ ಅಡಚಣೆಗಳೇ ಎದುರಾಗಲಿ ರಾತ್ರಿಹೊತ್ತು ಅವಳ ಮನೆಗೆ ಬಾರದೆ ಬೇರೆಲ್ಲೂ ಉಳಿಯುವುದಿಲ್ಲ ಎಂದು ಆತನು ನಿಶ್ಚಯಿಸಿಕೊಂಡಿದ್ದನು. ಹೀಗಿರುವಾಗ, ಒಂದು ದಿನ ಮಧ್ಯಾಹ್ನ ಕಳೆದ ಮೇಲೆ ಕಪ್ಪುಗಟ್ಟಿ ನಿಧಾನ ತೊಡಗಿದ ಮಳೆ ಸಂಜೆಯಾಗುತ್ತಲೇ ಜೋರಾಗಿ ಹೊಡೆಯಲಾರಂಭಿಸಿತು. ನಂಬೂದಿರಿಯು ಫಲಾಹಾರ ಮುಗಿಸಿ ಮಳೆ ಸ್ವಲ್ಪ ಕಡಿಮೆಯಾಗಲಿ ಎಂದು ಕಾದು ಕುಳಿತನು. ರಾತ್ರಿ ಹತ್ತುಗಂಟೆ ಸಂದರೂ ಮಳೆಯ ಹೊಡೆತ ನಿಲ್ಲುವ ಲಕ್ಷಣ ಕಾಣಲಿಲ್ಲ. ಕೃಷ್ಣಪಕ್ಷ ವಾಗಿದ್ದುದರಿಂದ ಕಾರ್ಗತ್ತಲೆ ಆವರಿಸಿತ್ತು. ಇನ್ನು ಕಾದು ಫಲವಿಲ್ಲವೆಂದು ಚಿಂತಿಸಿ ಕೊನೆಗೆ ಒಂದು ಸೂಡಿ ಹೊತ್ತಿಸಿಕೊಂಡು ಹೊರಟೇಬಿಟ್ಟನು. ಕೈಯಲ್ಲಿ ಕೊಡೆಯಿದ್ದರೂ ಗಾಳಿ-ಮಳೆಯ ರಭಸದಿಂದಾಗಿ ಪೂರ್ತಿ ನೆನೆಯಬೇಕಾಯಿತು. ಸ್ವಲ್ಪದೂರ ಹೋಗುವಷ್ಟರಲ್ಲೇ ಸೂಡಿ ಒದ್ದೆಯಾಗಿ ಆರಿಹೋಯಿತು. ಸ್ವಲ್ಪವೂ ಕಣ್ಣು ಕಾಣದಂತೆ ಕಾರಿರುಳು ಕವಿದಿತ್ತು. ಘೋರಾಂಧಕಾರ. ಆದರೂ ನಂಬೂದಿರಿ ಹಿಮ್ಮೆಟ್ಟಲಿಲ್ಲ. ತಟ್ಟಿ ಮುಟ್ಟಿ ತಡೆದು ತಡೆದು ಬಹುಪ್ರಯಾಸದಿಂದ ಮುನ್ನಡೆಯುತ್ತಲೇ ಅಂತೂ

ಮಾರ್ಗಮಧ್ಯದಲ್ಲಿರುವ ಹೊಳೆಯ ಕಡವಿಗೆ ಬಂದನು. ಅಂದು ಬೆಳಿಗ್ಗೆ ಹೆಂಡತಿಯ ಮನೆಯಿಂದ ಬರುವಾಗ ಹೊಳೆಯಲ್ಲಿ ಪಾದ ಮುಳುಗುವಷ್ಟು ಮಾತ್ರ ನೀರಿದ್ದಿತ್ತು. ಈಗಲೋ, ಮೂಡಣ ನೀರು ಬಂದು ಹೊಳೆ ತುಂಬಿ ಹರಿಯುತ್ತಲಿದೆ. ರಾತ್ರಿಹೊತ್ತು, ಜಡಿಮಳೆ ಬೇರೆ, ಕಡವಿನ ಆಳೂ ಇಲ್ಲ, ದೋಣಿಯೂ ಇಲ್ಲ. ಸೊಂಡಿಲ ಗಾತ್ರದಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆ ಹಾಗೂ ಗಾಳಿಯ ಅಬ್ಬರದಲ್ಲಿ ಕೂಗಿದರೂ ಆಚೆ ಯಾರಿಗೂ ಕೇಳುವಂತಿಲ್ಲ. ಮುಂದೇನು ದಾರಿ ? ಹೋಗದೆ ನಿವೃತ್ತಿಯಿಲ್ಲ. ನೀರಿನ ಸೆಳವು ತೀವ್ರವಾಗಿರುವ ಕಾರಣ ಈಜುವುದೂ ಅಸಾಧ್ಯ; ಅಪಾಯಕಾರ.

ಹೀಗೆ ನಂಬೂದಿರಿ ತೀರಾ ವಿಷಣ್ಣನಾಗಿ ಚಿಂತಿಸುತ್ತಿರುವಾಗ ದೈವಯೋಗದಿಂದ ಒಂದು ಸಿಡಿಲ್ಮಿಂಚು ಕೋರೈಸಿ ಹೊಡೆಯಿತು. ಆ ಕ್ಷಣಬೆಳಕಿನಲ್ಲಿ-ಅಲ್ಲೇ ದಡದಲ್ಲೊಂದು ಕಟ್ಟಿಗೆತುಂಡು ಬಿದ್ದಿರುವುದು ಕಣ್ಣಿಗೆ ಬಿತ್ತು. ಅದು ಆಗಷ್ಟೇ ನೀರ ಸೆಳವಿನಲ್ಲಿ ಬಳಿದು ಬಂದಿತ್ತು. ನಂಬೂದಿರಿ ಪಕ್ಕನೆ ಅದನ್ನು ಹಿಡಿದು ಅದರ ಮೇಲೆ ಕುಳಿತುಕೊಂಡು, ಕೈಕಾಲುಗಳಲ್ಲೇ ತೊಳೆಹಾಕಿಕೊಂಡು, ಹೇಗೆ ಹೇಗೋ ಕಷ್ಟಪಟ್ಟು ಅಂತೂ ನದಿ ದಾಟಿಬಿಟ್ಟನು. ಆಚೆ ದಡ ಸೇರಿ ನೆಲಕ್ಕೆ ಕಾಲಿಡುವಾಗ ಒಂದು ಹಗ್ಗ ಕಾಲಿಗೆ ತಡಕಿಕೊಂಡಿತು. ತಗುಲಿದ ಹಗ್ಗವು ಅದೇ ಮರದ ತುಂಡಿಗೆ ಕಟ್ಟಲ್ಪಟ್ಟಿದೆಯೆಂದು ತಿಳಿದೊಡನೆ, ತುಂಡು ಮತ್ತೆ ಪ್ರವಾಹದಲ್ಲಿ ಕೊಚ್ಚಿಹೋಗದಂತೆ ಅಲ್ಲೇ ಒಂದು ಮರಕ್ಕೆ ಎಳೆದು ಕಟ್ಟಿ ಮುಂದೆ ದಾರಿ ನಡೆದನು.

ಸುಮಾರು ಅರ್ಧರಾತ್ರಿ ಕಳೆಯುವಷ್ಟರಲ್ಲಿ ಹೀಗೆ ಮಳೆಯಲ್ಲಿ ನೆನೆದು ಗಡಗಡ ನಡುಗುತ್ತ ಪ್ರಿಯಪತ್ನಿಯ ಮನೆಗೆ ಬಂದು ಸೇರಿದನು. ಅವಳು ಮಲಗಿರಲಿಲ್ಲ. ಗಂಡನ ದಾರಿಕಾಯುತ್ತ ಕುಣಿಯುವ ಬೆಳಕಿನಲ್ಲಿ ಏನನ್ನೋ ಓದುತ್ತ ಕುಳಿತಿದ್ದಳು. ಹೊರಗೆ ನಂಬೂದಿರಿ ಕೂಗಿ ಕರೆದೊಡನೆಯೇ ಓಡಿಬಂದು ಬಾಗಿಲು ತೆರೆದಳು. ಉಡಲು ಬೇರೆ ಬಟ್ಟೆ ಕೊಟ್ಟಳು. ನಂಬೂದಿರಿ ಮೈಕೈತಲೆ ಎಲ್ಲ ಒರಸಿ ನೀರು ಕಳೆದು, ಗರಿಗರಿಯಾದ ಒಣ ಬಟ್ಟೆ ಉಟ್ಟು ಒಳಬಂದನು. ಭಾರ್ಯೆ ಉಪಚರಿಸಿ ತಿನ್ನಲು ಎಲೆ ಅಡಿಕೆ ಮಡಿಸಿ ಕೊಟ್ಟಳು. ತಾಂಬೂಲ ಮೆಲ್ಲುತ್ತ ಅಂದಿನ ತನ್ನ ಬರವಿನ ಮಾರ್ಗಾಯಾಸ ಪ್ರಯಾಸಗಳನ್ನೆಲ್ಲ ಸವಿಸ್ತಾರವಾಗಿ ಕಥಿಸಿದನು. ಆ ಕಷ್ಟಪಾಡುಗಳನೆಲ್ಲ ಕೇಳಿ ಆಕೆ ತುಂಬಾ ನೊಂದುಕೊಂಡಳು. ಆತ ತನಗಾಗಿ ಪಟ್ಟಪಾಡು ಬಹಳ ಹೆಚ್ಚಾಯಿತೆಂದು ಭಾವಿಸಿದಳು. ಪತಿಯ ಕಥೆ ಕೇಳಿ ವ್ಯಥಿತಳಾದ ಆಕೆ ಕೋಣೆಯ ಗೋಡೆಯ ಮೇಲೆ ತೂಗುಹಾಕಿದ್ದ ಒಂದು ಚಿತ್ರಪಟವನ್ನು ತೋರಿಸುತ್ತ ''ನಿಮಗೆ ನನ್ನ ಮೇಲಿರುವಷ್ಟು ಪ್ರೀತಿಯೂ ಏಕಾಗ್ರಚಿತ್ತವೂ ಆ ಸ್ವಾಮಿಯ ಮೇಲೆ ಇದ್ದಿದ್ದರೆ ನಿಮಗೆ ಇಷ್ಟರೊಳಗೇ ಸಾಯುಜ್ಯ ಲಭಿಸಿರುತ್ತಿತ್ತು. ಈ ಬ್ರಾಹ್ಮಣ ಜನ್ಮವನ್ನು ಇಂತಹ ಚಿಲ್ಲರೆ ವಿಷಯಗಳಲ್ಲಿ



ಎಸೆದು ಕಳೆಯುವುದು ಕೇವಲ ವ್ಯರ್ಥ'' ಎಂದು ಹೇಳಿ ನಿಟ್ಟುಸಿರುಬಿಟ್ಟಳು.

ಹೆಂಡತಿಯ ಮಾತು ನಂಬೂದಿರಿಯ ಮನಕ್ಕೆ ನಾಟಿತು. ಹೃದಯದಲ್ಲಿ ಮಥನ ನಡೆಯಿತು. ಕೂಡಲೇ ಪರಮಾರ್ಥಜ್ಞಾನ ಉಂಟಾಯಿತು. ಸ್ವಲ್ಪಹೊತ್ತು ಆ ಚಿತ್ರಪಟವನ್ನೇ ದಿಟ್ಟಿಸಿ ನೋಡುತ್ತ ನಿಶ್ಚೇಷ್ಟನಂತೆ ಸಮಾಧಿಚಿತ್ತನಾಗಿ ಕುಳಿತಿದ್ದು, ಅನಂತರ ಕಣ್ದೆರೆದು ಪತ್ನಿಯೊಡನೆ, ''ಸರಿ. ನೀನು ಹೇಳಿದ ಮಾತು ಪರಮಾರ್ಥದ ಮಾತು. ಈಗ ನನಗೆ ಅರಿವು ಮೂಡಿಬಂತು. ನನ್ನ ಮನಸ್ಸು ಮತ್ತೆ ತಿರುಗಿ ಭಗವಂತನಲ್ಲಿ ನೆಲೆಯಾಯಿತು. ನನ್ನ ಕಣ್ತೆರೆಯಿಸಿ ಸನ್ಮಾರ್ಗವನ್ನು ಕಾಣಿಸಿದ ನಿನ್ನನ್ನು ನನ್ನ ಗುರುವೆಂದು ತಿಳಿಯುತ್ತೇನೆ'' ಎಂದು ಅನುಭಾವಚಿತ್ತನಾಗಿ ನುಡಿಯ ತೊಡಗಿದನು. ಮತ್ತೆ ಆ ಚಿತ್ರಪಟದಲ್ಲೇ ದೃಷ್ಟಿಯನ್ನು ನೆಟ್ಟು ಭಾವಪರವಶನಾದನು. ಚಿತ್ರಪಟದಲ್ಲಿನ ಶ್ರೀಕೃಷ್ಣನು ಅವನ ಮನೋಬುದ್ಧಿಗಳಲ್ಲಿ ವ್ಯಾಪಿಸಿ ಚಿನ್ಮಂಡಲದಲ್ಲಿ ಸ್ಥಾಪಿತನಾಗಿದ್ದನು. ಆಗಲಾ ದ್ವಿಜೋತ್ತಮನ ದಿವ್ಯತೇಜೋಮುಖದಿಂದ ತಡೆಯಿಲ್ಲದೆ ಪ್ರವಹಿಸಿದ ಛಂದೋಬದ್ಧವಾದ ಶ್ಲೋಕಪರಂಪರೆಯನ್ನೇ ನಾವಿಂದು 'ಶ್ರೀ ಕೃಷ್ಣಕರ್ಣಾಮೃತ' ಎಂದು ಕರೆಯುತ್ತಿರುವುದು. ನಂಬೂದಿರಿಯು ಸ್ತುತಿಪರವಾದ ಈ ಶ್ಲೋಕಗಳನ್ನು ಹೇಳುತ್ತಾ ಹೋದಂತೆ ವಿದುಷಿಯಾದ ಆತನ ಪತ್ನಿಯು ಅವುಗಳನ್ನು ಬರೆದುಕೊಳ್ಳುತ್ತ ಬಂದಳು. ಆದರೆ ನಂಬೂದಿರಿಯು ಹಾಡಿದ ಎಲ್ಲವನ್ನೂ ಆಕೆ ಬರೆದುಕೊಳ್ಳಲಿಲ್ಲ. ಆತನು ಭಕ್ತಿಪರವಶನಾಗಿ ಶ್ಲೋಕಗಳನ್ನು ಹಾಡಲು ತೊಡಗಿದಾಗಲೇ ಆ ಚಿತ್ರಪಟದಲ್ಲಿನ ಶ್ರೀಕೃಷ್ಣನು ತಲೆಯಾಡಿಸತೊಡಗಿದ್ದನು ನಡುನಡುವೆ ಕೆಲವು ಶ್ಲೋಕಗಳಿಗೆ ಅವನು ತಲೆಯಾಡಿಸಿದ್ದಿಲ್ಲ. ಚಿತ್ರಪಟಸ್ಥ ದೇವನು ತಲೆಯಾಡಿಸಿ ಶ್ಲಾಘಿಸದ ಶ್ಲೋಕಗಳನ್ನು ಮಾತ್ರ ಆಕೆ ಬರೆದುಕೊಳ್ಳಲಿಲ್ಲ. ಉಳಿದ ಶ್ಲೋಕಗಳಲ್ಲಿನ ರಸಸಿದ್ಧಿಯಿಂದ ಸಂತುಷ್ಟನಾಗಿಯೇ ಭಗವಂತನು ತಲೆಯಾಡಿಸಿದ್ದೆಂದು ಆಕೆ ಭಾವಿಸಿಕೊಂಡಳು. ಹೀಗೆ 'ಶ್ರೀಕೃಷ್ಣಕರ್ಣಾಮೃತ'ವನ್ನು ಸಂಪೂರ್ಣ ಹಾಡಿ ಮುಗಿಸಿದ ನಂತರವೇ ನಂಬೂದಿರಿ ಧ್ಯಾನಸ್ಥಿತಿಯಿಂದ ಎದ್ದು ವ್ಯವಹಾರ ಜಗತ್ತಿಗೆ ಎಚ್ಚರಗೊಂಡದ್ದು.

ಅಷ್ಟುಹೊತ್ತಿಗೆ ಬೆಳಗಾಯಿತು. ನಂಬೂದಿರಿ ಏನೂ ಮಾತನಾಡುವ ಸ್ಥಿತಿಯಲ್ಲಿದ್ದಿರಲಿಲ್ಲ. ಮನಗಂಭೀರನಾಗಿ ಹೆಂಡತಿಯಿಂದ ಬೀಳ್ಕೊಂಡು ತನ್ನ ಮನೆಗೆ ಹೊರಟನು. ಹೊಳೆಯ ದಡದಲ್ಲಿ ಹಿಂದಿನ ರಾತ್ರಿ ತಾನು ಕಟ್ಟಿದ್ದ ತುಂಡು ಇದೆಯೋ ಎಂದು ಒಮ್ಮೆ ಆಚೀಚೆ ಕಣ್ಣಾಡಿಸಿದನು. ನೋಡುವಾಗ, ಅದು ಅಲ್ಲೇ ಬಿದ್ದು ಕೊಂಡಿತ್ತು. ಆದರೆ, ಅದು ಮರದತುಂಡಾಗಿರಲಿಲ್ಲ; ಒಬ್ಬ ಮನುಷ್ಯನ ಮೃತಶರೀರವಾಗಿತ್ತು. ಪ್ರೇಮಭರದಲ್ಲಿ ತಾನು ಈ ಹೆಣವನ್ನೇರಿಕೊಂಡು

ಹೊಳೆದಾಟಿದ್ದೆಂದು ಆಗ ಸ್ಪಷ್ಟವಾಯಿತು. ನೇಣುಬಿಗಿದುಕೊಂಡು ಸಾವನ್ನಪ್ಪಿದವನ ಹೆಣವಾದ್ದರಿಂದ ಅದರ ಕತ್ತಿನಲ್ಲಿ ಹಗ್ಗವಿದ್ದಿತ್ತು. ಅದು ಎಲ್ಲೋ ಹರಿದು ಬಿದ್ದು ನದಿಯ ಪ್ರವಾಹದಲ್ಲಿ ಬಳಿದು ಬಂದಿತ್ತು.

ನಂಬೂದಿರಿ ಕೂಡಲೇ ಅಂಬಿಗರವನನ್ನು ಕರೆದು ದೋಣಿಯನ್ನೇರಿ ನದಿ ದಾಟಿ ಮನೆ ಸೇರಿದನು. ಅನಂತರ ಶಾಸ್ತ್ರವಿಧಿ ಪ್ರಕಾರ ದೇಹಶುದ್ಧಿ ಪುಣ್ಯಾಹಾದಿಗಳನ್ನು ನಡೆಸಿ ಕೆಲದಿನಗಳಲ್ಲೇ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದನು. ಕಾಲಕ್ರಮೇಣ ಅವನು 'ವಿಲ್ವಮಂಗಲತ್ತ್ ಸ್ವಾಮಿಯಾರ್' (ಬಿಲ್ವಮಂಗಲದ ಸ್ವಾಮಿಗಳವರು) ಎಂದು ಕೇರಳ ದೇಶದಲ್ಲೆಲ್ಲ ಪ್ರಸಿದ್ಧನಾಗಿ ಕಾರಣಿಕ ಪರುಷ ಎನ್ನಿಸಿಕೊಂಡನು.

## ನೀನಾಸಮ್ ರಂಗಶಿಕ್ಷಣ ಕೇಂದ್ರ

ಮೇ, ೧೯೯೮ರ ಕೊನೆಗೆ ರಂಗಶಿಕ್ಷಣ ಕೇಂದ್ರದ ೧೮ನೆಯ ಶೈಕ್ಷಣಿಕ ವರ್ಷವು ಮುಗಿಯಿತು. ಈ ವರ್ಷದಲ್ಲಿ ವಿದ್ಯಾರ್ಥಿಗಳು ಅಶ್ವತ್ಥಾಮನ್, ಗುಣಮುಖ, ಕದಡಿದನೀರು ಮತ್ತು ಕಾಮರೂಪಿ ಎಂಬ ನಾಟಕಗಳನ್ನು ಕಲಿತು ಪ್ರದರ್ಶಿಸಿದರು. ಸ್ವಾತಂತ್ರ್ಯ ಸುವರ್ಣ ಮಹೋತ್ಸವ ನೆನಪಿನ ಅಂಗವಾಗಿ ಕನ್ನಡ-ಸಂಸ್ಕೃತಿ ಇಲಾಖೆಯ ವಿಶೇಷ ಯೋಜನೆಯ ಅಡಿ ಬೆಳಗಾಂ ವಲಯದ ಹಲವು ತಾಲ್ಲೂಕು ಗಳಲ್ಲಿ ನಾಟಕ ಪ್ರದರ್ಶನ ಮಾಡಿತು. ಸಂಸ್ಥೆಯ ಅಧ್ಯಾಪಕರುಗಳಲ್ಲದೆ, ಶ್ರೀಯುತರಾದ ಬಿ.ಎನ್. ನಾರಾಯಣ (ನಾಣಿ), ಡಿ.ಕೆ. ಗೋಪಾಲಕೃಷ್ಣ ಭಟ್ಟ, ಎಂ.ಎಂ. ಕೃಷ್ಣಮೂರ್ತಿ, ಪುರುಷೋತ್ತಮ ತಲವಾಟ, ಗುರುಮೂರ್ತಿ ವರದಾಮೂಲ, ನಟರಾಜ ಹೊನ್ನವಳ್ಳಿ, ಎಮಿಲಿ, ಎಲೀ ವಾನ್ ಡೆಲ್ ಬ್ರಾಂಡ್ ಮೊದಲಾದ ಅತಿಥಿಗಳೂ ಬಂದು ವಿವಿಧ ತರಗತಿಗಳನ್ನು ನಡೆಸಿಕೊಟ್ಟರು. ೧೯೯೮-೯೯ನೇ ಸಾಲಿನ ವಿದ್ಯಾರ್ಥಿಗಳ ಆಯ್ಕೆ ಮುಗಿದು, ಜುಲೈ ೧೫ರಂದು ತರಗತಿಗಳು ಪ್ರಾರಂಭವಾಗಿವೆ. ಶ್ರೀಮತಿ ವಿಭಾ ಮಿಶ್ರ ಅವರು ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದು ಹೊಸ ವಿದ್ಯಾರ್ಥಿಗಳಿಗಾಗಿ ಅಭಿನಯ ಕಾರ್ಯಾಗಾರವೊಂದನ್ನು ನಡೆಸುತ್ತಿದ್ದಾರೆ.

## ನೀನಾಸಮ್ ತಿರುಗಾಟ ೯೭

ಕಳೆದ ಮೇ ತಿಂಗಳಿಗೆ ತಿರುಗಾಟ ತನ್ನ ೧೩ನೇ ವರ್ಷವನ್ನು ಯಶಸ್ವಿಯಾಗಿ ಪೂರೈಸಿತು. ಎಂದಿನಂತೆ ಕಳೆದ ತಿರುಗಾಟದಲ್ಲೂ ಮೂರು ನಾಟಕಗಳನ್ನು ಸಿದ್ಧಪಡಿಸಿಕೊಂಡು ರಾಜ್ಯದೆಲ್ಲೆಡೆ ಪ್ರದರ್ಶಿಸಲಾಯಿತು. ಈ ಸಾಲಿನ ನಾಟಕಗಳು ಪರಿಸರ, ವಿಜ್ಞಾನ, ಅಭಿವೃದ್ಧಿ ಮುಂತಾದ ಆಧುನಿಕ ಪರಿಕಲ್ಪನೆಗಳ ಸುತ್ತ ಹೆಣೆದ 'ಸಹ್ಯಾದ್ರಿ ಕಾಂಡ' (ರಚನೆ,ನಿರ್ದೇಶನಃ ಅಕ್ಷರ ಕೆ.ವಿ.), ಅಮೆರಿಕನ್ ಮ್ಯೂಸಿಕಲ್ ಒಂದನ್ನು ಆಧರಿಸಿ ರಾಷ್ಟ್ರವಿಭಜನೆಯ ಸಂದರ್ಭವನ್ನು ಚಿತ್ರಿಸುವ 'ಜತೆಗಿರುವನು ಚಂದಿರ' (ರಚನೆಃ ಜಯಂತ ಕಾಯ್ಕಿಣಿ, ನಿರ್ದೇಶನ : ಭಾಸ್ಕರ ಚಂದಾವರ್ಕರ್) ಮತ್ತು ಮಹಾತ್ಮ ಗಾಂಧಿಜಿಯವರ ನೌಖಾಲಿ ದಿನಗಳ ಸುತ್ತ ಕೇಂದ್ರೀಕರಿಸಿ ಗಾಂಧಿ ವ್ಯಕ್ತಿತ್ವ ಚಿಂತನೆಗಳನ್ನು ವಿಶದಪಡಿಸುವ 'ಮಹಾತ್ಮ' (ರಚನೆಃ ಮುಕುಂದರಾವ್, ಅನುವಾದಃ ಕೆ.ವಿ. ಸುಬ್ಬಣ್ಣ, ನಿರ್ದೇಶನಃ ಚಿದಂಬರರಾವ್ ಜಂಬೆ). ಸ್ವಾತಂತ್ರ್ಯದ ೫೦ನೇ ವರ್ಷಕ್ಕೆ ಈ ಮೂರೂ ನಾಟಕಗಳು ಪ್ರಸ್ತುತವಾಗಿ ಕೂಡಿಬಂದಿರುವುದು ಈ ತಿರುಗಾಟದ ವಿಶೇಷ ಅನ್ನಬಹುದು. ತಿರುಗಾಟ ೯೭, ತನ್ನ ನಿಶ್ಚಿತ ತಿರುಗಾಟ ಮಾತ್ರವಲ್ಲದೆ, ಸ್ವಾತಂತ್ರ್ಯ ಸುವರ್ಣಮಹೋತ್ಸವ ಅಂಗವಾಗಿ ಕನ್ನಡ ಸಂಸ್ಕೃತಿ ಇಲಾಖೆಯ ಯೋಜನೆಯ ಅಡಿಯಲ್ಲೂ ಬೆಳಗಾಂ ವಲಯದಲ್ಲಿ ಹಲವು ಪ್ರದರ್ಶನಗಳನ್ನು ನೀಡಿದೆ.

ಈ ವರ್ಷದ ನಮ್ಮ ಪ್ರದರ್ಶನಗಳಿಗೆ ಸಂಬಂಧಿಸಿದ ಕೆಲವು ಮುಖ್ಯ ಅಂಕಿಅಂಶಗಳು ಹೀಗಿವೆಃ

| ನಾಟಕಗಳು | ಒಟ್ಟು ಪ್ರದರ್ಶನಗಳು | ಅಂದಾಜು ಪ್ರೇಕ್ಷಕರ ಸಂಖ್ಯೆ |
|---|---|---|
| ಸಹ್ಯಾದ್ರಿ ಕಾಂಡ | ೪೬ | ೨೫,೧೫೦ |
| ಜತೆಗಿರುವನುಚಂದಿರ | ೬೮ | ೨೯,೪೮೦ |
| ಮಹಾತ್ಮ | ೫೦ | ೨೬,೧೫೦ |
| ಒಟ್ಟು ಪ್ರದರ್ಶನ ಕೊಟ್ಟ ಸ್ಥಳಗಳು | | ೬೯ |
| ಒಟ್ಟು ಪ್ರದರ್ಶನಗಳು | | ೧೬೪ |
| ಒಟ್ಟು ಪ್ರೇಕ್ಷಕರ ಸಂಖ್ಯೆ (ಅಂದಾಜು) | | ೮೦,೭೮೦ |

**ಮಾತುಕತೆ ೪೭**
ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭
ದೂರವಾಣಿ: ೦೮೧೮೩-೬೫೬೪೬
ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ
(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಶವಂತ ಜಾದವ್
ಸಹ ಸಂಪಾದಕ: ವೆಂಕಟರಮಣ ಐತಾಳ್ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ
ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು
ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

**ಆಗಸ್ಟ್ ೧೯೯೮ | ವರ್ಷ ಹನ್ನೆರಡು | ಸಂಚಿಕೆ ಮೂರು**

೧. ನೀನಾಸಮ್ ಪ್ರಕಟಣೆಗಳು / ಪುಟ ೧
೨. ಬುದ್ಧ ಮುಗುಳು ನಗುತ್ತಿಲ್ಲ- ಮೂಲ: ರುಸ್ತುಂ ಭರೂಚ
ಅನು: ಡಾ| ನಿ. ಮುರಾರಿ ಬಲ್ಲಾಳ / ಪುಟ ೩
೩. ವಿಜ್ಞಾನ, ವಸಾಹತುಶಾಹಿ ಹಾಗೂ ಹಿಂಸೆ - ಮೂಲ: ಕ್ಲಾಡ್ ಆಲ್ವಾರೆಸ್
ಸಂಗ್ರಹಾನುವಾದ: ಜಶವಂತ ಜಾಧವ್ / ಪುಟ ೧೫
೪. ಐತಿಹ್ಯಮಾಲೆಯ ಕಥೆಗಳು
ಮಲೆಯಾಳಂ ಮೂಲ: ಕೊಟ್ಟಾರತ್ತಿಲ್ ಶಂಕುಣ್ಣಿ
ಅನುವಾದ: ಬಿ.ಆರ್. ವೆಂಕಟರಮಣ ಐತಾಳ / ಪುಟ ೩೩

**MAATHUKATHE** AUGUST 1998 (YEAR 12 ISSUE 3)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

# ಅಕ್ಷರ ಪ್ರಕಾಶನ

**ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭**

## ಈಚಿನ ಪ್ರಕಟಣೆಗಳು

೧. **ನವ್ಯಾಲೋಕ**
(ಮುನ್ನುಡಿಗಳು- ಡಾ. ಯು.ಆರ್. ಅನಂತಮೂರ್ತಿ) ರೂ.೯೦
೨. **ವಚನ ವಿನ್ಯಾಸ**
(ವಿಮರ್ಶೆ- ಗಿರಡ್ಡಿ ಗೋವಿಂದರಾಜ) ರೂ.೪೫
೩. **ಸಹ್ಯಾದ್ರಿ ಕಾಂಡ**
(ನಾಟಕ - ಅಕ್ಷರ ಕೆ.ವಿ.) ರೂ.೪೦
೪. **ಇಂದಿನ ಹೆಜ್ಜೆ**
(ವಚನ ಸಾಹಿತ್ಯ ವಿಮರ್ಶೆ-ಓ.ಎಲ್.ನಾಗಭೂಷಣಸ್ವಾಮಿ) ರೂ.೪೦
೫. **ಮತ್ತೊಂದು ಮೌನ ಕಣಿವೆ**
ಪರಿಸರ ಸಂಬಂಧಿ ಬರಹಗಳು
ಸತೀಶ ಚಪ್ಪರಿಕೆ ಮತ್ತು ಅ.ನ. ಯಲ್ಲಪ್ಪ ರೆಡ್ಡಿ ರೂ.೪೦
೬. **ಅಭಿನವಗುಪ್ತ**
ಅಕ್ಷರ ಚಿಂತನ ಮಾಲೆ - ಪಾದೇಕಲ್ಲು ನರಸಿಂಹ ಭಟ್ಟ ರೂ.೬೦
೭. **ಮಾನುಷಿಯ ಮಾತು**
ಅಕ್ಷರ ಚಿಂತನ ಮಾಲೆ - ಮಧುಕೀಶ್ವರ್ ಅವರ ಬರಹಗಳು
ಅನುವಾದ: ಎಲ್.ಜಿ. ಮೀರಾ ರೂ.೫೫
೮. **ಅಪರೂಪದ ಹಕ್ಕಿ**
ಅಕ್ಷರ ಕವಿಸಂಧಾನ ಮಾಲೆ - ಅಸ್ಸಾಮಿ ಕವಿತೆಗಳು
ಅನುವಾದ: ಕೃಷ್ಣ ಪಾಟೀಲ ರೂ.೬೦
೯. **ನಡೆದದ್ದೇ ದಾರಿ**
ಕವನ ಸಂಕಲನ - ಶಾ. ಬಾಲುರಾವ್ ರೂ.೫೦

## ಮುಂದಿನ ಪ್ರಕಟಣೆಗಳು

೧. **ಮಾವಿನಮರದಲ್ಲಿ ಬಾಳೆಯ ಹಣ್ಣು**
ನಾಟಕ-ರಂಗಭೂಮಿ ಕುರಿತ ಬರಹಗಳು - ಅಕ್ಷರ ಕೆ.ವಿ.